ನಿಲುವಳಿ ಸೂಚನೆ

ರಷೀದ್‌ರವರ ಸಂಶಯಾಸ್ಪದ ಕೊಲೆಯ ಪ್ರಕರಣದಲ್ಲಿ ಮಾನ್ಯ ಜಾಲಪ್ಪನವರ ರಾಜೀನಾಮೆ

ಅಧ್ಯಕ್ಷರು.—ವಿರೋಧ ಪಕ್ಷದ ನಾಯಕರಾದ ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರೇ ನೀವು ತಂದಿರುವಂತಹ ನಿಲುವಳಿ ಸೂಚನೆಯ ಬಗ್ಗೆ ಹೇಳಿ.

† ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ಮಾನ್ಯ ಅಧ್ಯಕ್ಷರೆ, ನಾವು ನಿಲುವಳಿ ಸೂಚನೆಯನ್ನು ಏತಕ್ಕೆ ಕೊಟ್ಟಿದ್ದೇವೆಂಬುದನ್ನು ಬಹಳ ವಿವರವಾಗಿ ಈಗಾಗಲೇ ಹೇಳಿದ್ದೇನೆ.

MR. SPEAKAR.–Hon. member must convince me whether I should give consent or not.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ಇದನ್ನು ನೋಡಿ ನಗಬೇಕೋ ಅಥವಾ ಅಳಬೇಕೋ ಏನು ಮಾಡಬೇಕೆಂಬುದು ಗೊತ್ತಾಗುವುದಿಲ್ಲ. ನಾವು ನಿಲುವಳಿ ಸೂಚನೆಯನ್ನು ಮೂವ್ ಮಾಡುತ್ತೇವೆ. ಏಕೆಂದರೆ ರೂಲ್‌ನಲ್ಲಿ ಇಲ್ಲದೇ ಇರುವಂಥದ್ದನ್ನು ನಿಲುವಳಿ ಸೂಚನೆ ಇರುವಂತಹ ಸಂದರ್ಭದಲ್ಲಿ ರಾಜೀನಾಮೆ ಕೊಟ್ಟಂಥ ಮಂತ್ರಿಗಳಿಗೆ ಅವರ ಹೇಳಿಕೆಯನ್ನು ಕೊಡುವುದಕ್ಕೆ ಅವಕಾಶ ಕೊಟ್ಟು ನಮ್ಮ ಬಾಯಿಯನ್ನು ಅರ್ಧ ಕಟ್ ಮಾಡಿದ್ದೀರಿ ರೂಲ್ ಪ್ರಕಾರ.

MR. SPEAKER.—Hon. member may please convince me.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಇದರ ಮೇಲೆ ಡಿಬೇಟ್ ಮಾಡಬಾರದೆಂದು ರೂಲ್ ಇರುವುದರಿಂದ ನಮಗೆ ಇದ್ದಂತಹ ಅವಕಾಶದಲ್ಲೂ ಅರ್ಧ ಕಟ್ ಮಾಡಿದ್ದೀರಿ. ನಾವು ಈ ಒಂದು ನಿಲುವಳಿಸೂಚನೆಯನ್ನು ಏತಕ್ಕೆ ತಂದಿದ್ದೇವೆಂದರೆ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಆ ದಿನ ನಾವು ಏನು ರಶೀದ್‌ರವರ ಕೊಲೆಯಾದಾಗ ಏನು ಸಬ್ಜೆಕ್ಟ್‌ನ್ನು ತಂದಿದ್ದೆವೋ ಆವತ್ತಿನ ದಿವಸ ಬಹುಶಃ ಇದೇ ತರಹದ ತನಿಖೆಯನ್ನು ಮಾಡಿ ಎಂಬುದಾಗಿ ನಾವು ಹೇಳಲಿಲ್ಲ.

ಸಿ.ಬಿ.ಐ.ಗೆ ಕೊಡಿ, ಸಿ.ಒ.ಡಿ.ಗೆ ಕೊಡಿ, ಇಲ್ಲದಿದ್ದರೆ ಜ್ಯುಡಿಷಿಯಲ್ ಎನ್‌ಕ್ವಯರಿ ಮಾಡಿ ಎಂದು ಏನು ನಾವು ಕೇಳಬೇಕೆಂದಿದ್ದೆವೋ ಅದಾವುದಕ್ಕೂ ಅವಕಾಶ ಇಲ್ಲದಹಾಗೆ ಮಾನ್ಯ ಮುಖ್ಯ ಮಂತ್ರಿಯವರು, ನಾನು ಇದನ್ನು ಸಿ.ಬಿ.ಐ.ಗೆ ಕೊಟ್ಟಿದ್ದೇನೆಂದು ಹೇಳಿ ಒಪ್ಪಿಕೊಂಡರು. ನಮಗೆ ಯಾವುದೇ ರೀತಿಯ ಅವಕಾಶವನ್ನು ಕೊಡದೇ ವಾಲೆಂಟರಿಲಿ ಸಿಬಿಐಗೆ ರೆಫರ್ ಮಾಡಿದ್ದರಿಂದ ನಾವೆಲ್ಲರೂ ಸಮಾಧಾನಗೊಂಡು ಸಿಬಿಐ ನವರಿಂದ ಚೆನ್ನಾಗಿ ತನಿಖೆ ನಡೆಯುತ್ತದೆಂದು ಯೋಚನೆ ಮಾಡಿಕೊಂಡು ಸುಮ್ಮನೆ ಇದ್ದೆವು, ಮಾನ್ಯ ಜಾಲಪ್ಪನವರು ಅವತ್ತು ಅಲ್ಲಿ ಕೂಳಿತು, ಒಬ್ಬ ಕಾನ್ಸ್‌ಟೇಬಲ್ ಇವರಲ್ಲಿ ಇನ್‌ವಾಲ್ವ್ ಆದರೂ ಒಂದು ನಿಮಿಷ ಆ ಛೇರ್‌ನಲ್ಲಿ ಕುಳಿತುಕೊಳ್ಳುವುದಿಲ್ಲ ಎಂದು ಹೇಳಿದರು. ಯಾರು ಬೇಕಾದರೂ ಎನ್‌ಕ್ವಯರಿ ನಡೆಸಲಿ, ಯಾವುದೇ ರೀತಿಯ ಎನ್‌ಕ್ವಯರಿ ಮಾಡಲಿ ಎಂದು ಅವರು ಹೇಳಿದರು. ಆಮೇಲೆ ಈ ಬಗ್ಗೆ ಮುಖ್ಯಮಂತ್ರಿಯವರೂ ಹೇಳಿದರು. ಮೌಲ್ಯಾಧಾರಿತ ರಾಜಕಾರಣವನ್ನು ನಾವು ಮಾಡುತ್ತಾ ಇರುವುದರಿಂದ ಯಾರು ಬಂದು ಎನ್‌ಕ್ವಯರಿ ಯಾವ ರೀತಿ ಮಾಡಿದರೂ ಎಲ್ಲಾ ರೀತಿಯ ಸಹಕಾರವನ್ನು ನಾವು ಕೊಡುತ್ತೇವೆಂದು ಹೇಳಿದರು. ಆದರೆ ಈಗ ನೋಡಿದರೆ, ಸಿಬಿಐ ನವರಿಗೆ ಕೊಟ್ಟಿದ್ದು ತಪ್ಪಾಗಿದೆ, ಅವರಿಗೆ ಕೊಟ್ಟಿರುವುದರಿಂದ ಹಾಳಾಗಿ ಹೋಯಿತು, ಹೀಗೆಂದೆಲ್ಲಾ ಹೇಳಿ ಅವರು ಏನೇನೋ ಪಾಪ, ಪರಿತಾಪ ಪಡುವುದಕ್ಕೆ ಶುರು ಮಾಡಿದ್ದಾರೆ. ಹೀಗೆಂದರೆ, ಕೊಡುತ್ತಾ ಇರಲಿಲ್ಲ ಎಂದು ಏನೋ ಶುರು ಮಾಡಿದ್ದಾರೆ. ಈಗ ಒಬ್ಬ ಸೀನಿಯರ್ ಆಫೀಸರ್‌ನ್ನು ಹಿಡಿದಿದ್ದಾರೆ. ಆ ನಂತರ ಜಾಲಪ್ಪನವರು ನಿರೀಕ್ಷಣಾ ಜಾಮೀನನ್ನು ಕೇಳಿದರು. ಈಗ ಅವರು ರಾಜೀನಾಮೆಯನ್ನು ಕೊಟ್ಟರು. ಈಗ ಅವರು ಸ್ಟೇಟ್‌ಮೆಂಟನ್ನೂ ಮಾಡಿದರು. ಅವರು ಏನು ಸ್ಟೇಟ್‌ಮೆಂಟ್ ಮಾಡಿದರೋ ಅದು ಭಗವಂತನಿಗೇ ಗೊತ್ತು. ಆ ಗಲಾಟೆಯಲ್ಲಿ ಹರಹರಾ, ಶಿವಶಿವಾ ಎಂದು ಏನೋ ಓದಿದರು. ಅದರ ಒಂದು ಕಾಪಿಯನ್ನು ನನಗೆ ಕೊಟ್ಟಿದ್ದಾರೆ. ಅದನ್ನು ಓದುವುದಕ್ಕೂ ಪುರುಸೊತ್ತಿಲ್ಲ. ಇದರ ಮೇಲೆ ಚರ್ಚೆ ಮಾಡುವುದಕ್ಕೆ

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಅವಕಾಶ ಇಲ್ಲ ಎಂದು ರೂಲ್ಸ್‌ನಲ್ಲಿ ಇರುವುದರಿಂದ ಚರ್ಚೆಗೆ ಅವಕಾಶ ಇಲ್ಲದಿದ್ದರೂ ಅವರು ಅನೇಕ ಪ್ರಶ್ನೆಗಳನ್ನು ಕೇಳಿರುವುದರಿಂದ ಆ ಬಗ್ಗೆ ಸ್ವಲ್ಪ ಮಾತನಾಡಬೇಕಾಗಿದೆ. ಅವನ ಹೆಂಡತಿ ಯಾರು, ಇವಳು ಎಲ್ಲಿ ಇದ್ದಳು ಎಂದೆಲ್ಲಾ ಸಾವಿರಾರು ಪ್ರಶ್ನೆ ಕೇಳಿದ್ದಾರೆ. ಮುಂದೆ ಮಾತನಾಡುವವರು ಅದನ್ನೆಲ್ಲಾ ಓದಿಕೊಂಡು ಮಾತನಾಡಬೇಕು. ಈ ಸೀನಿಯರ್ ಅಧಿಕಾರಿ ಅಡ್ಮಿನಿಸ್ಟ್ರೇಟಿವ್ ಸರ್ವೀಸಸ್‌ನಲ್ಲಿ ಬರುವವರಾಗಿದ್ದು ಆ ಖಾತೆ ಮುಖ್ಯಮಂತ್ರಿಯವರ ಕೈಯಲ್ಲಿ ಇರುತ್ತದೆ.

ಶ್ರೀ. ರಾಮಕೃಷ್ಣ ಹೆಗ್ಡೆ.—ಆದುದರಿಂದ ನಾನು ರಾಜೀನಾಮೆ ಕೊಡಬೇಕೇ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನೀವು ರಾಜೀನಾಮೆ ಕೊಡಬೇಕು, ಬಿಡಬೇಕು ಎಂದು ನಾನು ಹೇಳುವುದಿಲ್ಲ. ಅದನ್ನು ನಿಮ್ಮವರೇ ಹೇಳುತ್ತಿದ್ದಾರೆ. ಆ ಕಡೆಯವರೇ ಅದನ್ನು ಹೇಳುತ್ತಿದ್ದಾರೆ. ಅದೇನೋ ನಮಗೆ ರಣಹದ್ದುಗಳು ಎಂದು, ವಲ್ಚರ್ಸ್ ಎಂದು ಹೇಳುತ್ತಿದ್ದೀರಿ. ನಾವು ರಣಹದ್ದುಗಳಲ್ಲ, ನಾವು ವಲ್ಚರ್ಸ್ ಅಲ್ಲ ನಿಮ್ಮ ಅಧಿಕಾರ ನಮಗೆ ಬೇಕಾಗಿಲ್ಲ. ಇದನ್ನು ಕಳೆದ ಒಂದು, ಒಂದೂವರೆ ವರ್ಷದಿಂದ ಹೇಳುತ್ತಲೇ ಬಂದಿದ್ದೇನೆ. ನಿಮ್ಮನ್ನು ಆರಿಸಿದ ಜನತೆ ನಿಮಗೆ ೫ ವರ್ಷ ಆಳಲು ಅಧಿಕಾರ ಕೊಟ್ಟಿದೆ. ೫ ವರ್ಷ ಸಮರ್ಥ ರೀತಿಯಲ್ಲಿ ರಾಜ್ಯವನ್ನಾಳಿ. ಈ ಮೂಲಕ ಜನರಿಗೆ ಅನುಕೂಲ ಮಾಡುವುದಕ್ಕೆ ಪ್ರಯತ್ನ ಮಾಡಬೇಕೇ ಹೊರತು ಬರೀ ತುತ್ತೂರಿ ಊದಿ ಟಾಮ್‌ಟಾಮ್ ಹೊಡೆಯುವುದು ಅಲ್ಲ. ತಮ್ಮ ಪ್ರೋಗ್ರಾಮ್ ಬಗ್ಗೆ ಹೇಳುವುದಾದರೆ ತಾವು ತಾಳಿ ಕಟ್ಟಿಸಿದ್ದೇ ಕಟ್ಟಿಸಿದ್ದುದು. ಅದು ಬೇರೆ ವಿಚಾರ. ತಾಳಿಯನ್ನು ಕಟ್ಟಿದ್ದೂ ಆಯಿತು, ಅದನ್ನು ಬಿಚ್ಚಿದ್ದೂ ಆಯಿತು. ಅವರು ಇನ್ನೋಸೆಂಟು, ಇನ್ನೋಸೆಂಟೂ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಾ ಹೋದರೆ ಇದು ಜಡ್ಜಸ್ ಮೇಲೆ ಇಂಡೈರೆಕ್ಟಾಗಿ ಇನ್‌ಫ್ಲೂಯೆನ್ಸ್ ಆಗುವುದಿಲ್ಲವೇ? ಹೀಗೆ ಹೇಳುವುದಕ್ಕೆ ನಿಮಗೆ ಯಾವ ರೀತಿಯ ಅಧಿಕಾರ ಇದೆ? ಇವೊತ್ತು ತನಿಖೆಯನ್ನು ಯಾರು ನಡೆಸುತ್ತಿದ್ದಾರೆ ಅವರಿಗೆ ನೀವು ಎಂದರೆ ಸರ್ಕಾರ ಸಹಾಯ ಮಾಡಬೇಕು. ರೂಲ್ಸ್‌ಗಿಂತಲೂ ಯಾವ ಮಂತ್ರಿಗಳೂ ಹೆಚ್ಚಲ್ಲ. ಅವರು ಇನ್ನೋಸೆಂಟ್ ಅಲ್ಲ. ಎಂದರೆ ಪನಿಶ್‌ಮೆಂಟ್ ಸಿಗುತ್ತದೆಯೋ. ಆಗ ಅವರು ರಾಜಾರೋಷವಾಗಿ ಓಡಾಡಬಹುದು. ಅವರು ಮಾಡಿದ್ದು ತಪ್ಪು, ಇವರು ಮಾಡಿದ್ದು ಸರಿ ಎಂದು ಹೇಳುವುದರಲ್ಲಿ ಯಾವ ನ್ಯಾಯವೂ ಇಲ್ಲ. ಹಾಗೆ ನೋಡಿದರೆ ಮುನಿಯಮ್ಮನ ಕೇಸಿನಲ್ಲಿ ರಾಮರಾಯರು ರಾಜೀನಾಮೆಯನ್ನು ಕೊಟ್ಟಾಗ ಅವರು ತಪ್ಪಿತಸ್ಥರೇನಾಗಿರಲಿಲ್ಲ. ಶಾಸ್ತ್ರಿಗಳೇ ಏನು ರೈಲು ಬಿಡುತ್ತಿರಲಿಲ್ಲವಾದರೂ ಅವರು ರಾಜೀನಾಮೆಯನ್ನು ಕೊಟ್ಟರು. ಅದ್ಯಾರೋ ಮುದುಕಿಯೋ ಹುಡುಗಿಯೋ ಜೊತೆ ಸಹವಾಸ ಇತ್ತು ಎಂದು ದೂರು ಬಂದಾಗ ಕಿತ್ತೂರ್‌ರವರು ರಾಜೀನಾಮೆಯನ್ನು ಕೊಟ್ಟರು. ದೇವೇಂದ್ರಪ್ಪ ಘಾಳಪ್ಪನವರ ಬಗ್ಗೆ ಏನೂ ಇರಲಿಲ್ಲ, ರೇಣುಕಾರಾಜೇಂದ್ರರವರ ಬಗ್ಗೆ ಏನೂ ಇರಲಿಲ್ಲ, ಇಬ್ರಾಹಿಂ ಬಗ್ಗೆ ಏನೂ ಇರಲಿಲ್ಲ ಎಲ್ಲರೂ ರಾಜೀನಾಮೆ ಕೊಟ್ಟಿದ್ದಾರೆ. ನಾನು ಮಾತನಾಡುವುದಕ್ಕೆ ಮುಂಚೆ ಇವರು ರಾಜೀನಾಮೆ ಕೊಟ್ಟಿದ್ದಾರೆ. ಇವರು ರಾಜೀನಾಮೆ ಕೊಟ್ಟಿರುವುದರಿಂದ ನಾನು ಮಾತನಾಡುವ ಹಾಗೆ ಇಲ್ಲ. ರಾಜೀನಾಮೆ ಕೊಡುವುದಕ್ಕೆ ಮುಂಚೆ ಎದೆತಟ್ಟಿಕೊಂಡು ಹೇಳುತ್ತಿದ್ದರು ಒಂದು ನಿಮಿಷ ಕೂಡ ಇಲ್ಲಿ ಇರುವುದಿಲ್ಲವೆಂದು. ಇಷ್ಟು ದಿವಸ ತಡಮಾಡಿದ್ದು ಏತಕ್ಕೆ? ಯಾರಿಗೆ ಇನ್‌ಫ್ಲುಯನ್ಸ್ ಮಾಡುವುದಕ್ಕೆ ತಡಮಾಡಿದರು? ಯಾರಿಗೆ ನ್ಯಾಯ ದೊರಕಿಸಿಕೊಡುವುದಕ್ಕೆ ತಡಮಾಡಿದರು? ಸಿ. ಬಿ. ಐ. ನವರಿಗೆ ಏತಕ್ಕೆ ಸಹಾಯ ಮಾಡಲಿಲ್ಲ? ನಾನು ಕೇಳಿದ ಮಟ್ಟಿಗೆ ಸಿ.ಬಿ.ಐ ನವರು ಇಲ್ಲಿಗೆ ಬಂದು ವೇಶಮರೆಸಿಕೊಂಡು ಎಲ್ಲೆಲ್ಲಿಯೋ ಕೆಲಸ ಮಾಡಿದರು ಅದರ ಮೇಲೆ ಗೊತ್ತಾಯಿತು ಎಂದು ಈಗ ವರದಿಗಳು ಬರುತ್ತಿವೆ. ಹಾಗೆ ಮಾಡುವುದಕ್ಕೆ ಏತಕ್ಕೆ ಅವಕಾಶ ಕೊಟ್ಟಿರಿ? ಅವರಿಗೆ ಬೇಕಾದ ಫೈಲುಗಳನ್ನು ಸಾಮಗ್ರಿಗಳನ್ನು ನೀವು ಕೊಟ್ಟಿದ್ದರೆ ಚೆನ್ನಾಗಿರುತ್ತಿತ್ತು. ಇವತ್ತಿನ ದಿವಸ ರಷೀದ್ ಕೊಲೆಯಾಗಿರಬಹುದು ನಾಳೆ ಗುಂಡ್ಲುಪೇಟೆಯಲ್ಲಿ ಆಗಬಹುದು, ಚಾಮರಾಜನಗರದಲ್ಲಿ ಆಗಬಹುದು ಕೊಲೆ ಆದರೆ ಅದನ್ನು ಮುಚ್ಚಿಕೊಳ್ಳುವುದು ಸರಿಯಲ್ಲ. ರಷೀದ್ ಕೊಲೆಯಾಯಿತು, ಲಿಂಗಪ್ಪ ಬೊಮ್ಮಪ್ಪನ ಸಮಾಚಾರದಲ್ಲಿ ಕೊಲೆಯಾಯಿತು. ಕೊಲೆ ಏತಕ್ಕೆ ಆಯಿತು? ಒಂದು ಸಂಸ್ಥೆ ವಿಚಾರದಲ್ಲಿ ವ್ಯತ್ಯಾಸವಾಯಿತು. ಸಂಸ್ಥೆ ರನ್ ಮಾಡುವ ವಿಚಾರದಲ್ಲಿ ಕೊಲೆಯಾದರೆ ಸಂಸ್ಥೆಯನ್ನು ರನ್ ಮಾಡುತ್ತಾರೆ, ಸಂಸ್ಥೆಯನ್ನು ರನ್ ಮಾಡುವುದು ತಪ್ಪೆ? ಕೊಲೆ ಏತಕ್ಕೆ ಆಯಿತು ಎನ್ನುವುದು ಗೊತ್ತಾಗಬೇಕು. ಸಂಸ್ಥೆಯನ್ನು ನಿಮ್ಮವರು ನಮ್ಮವರು ನಡೆಸುತ್ತಾರೆ, ಕೊಲೆಯನ್ನು ಮುಚ್ಚಿಕೊಳ್ಳುವುದು ಏನಿದೆ ಅದು ಸರಿಯಲ್ಲ. ಸಂಸ್ಥೆಯನ್ನು ಯಾರು ನಡೆಸುತ್ತಾರೆ ಅವರಿಗೆ ಅದು

ಸೇರಿದ್ದುದು. ಒಂದು ನಿಮಿಷ ಕೂಡ ಅಧಿಕಾರದಲ್ಲಿ ಇರುವುದಿಲ್ಲವೆಂದು ಹೇಳಿದ್ದರು. ಒಬ್ಬ ಪೋಲಿಸ್‌ನನ್ನು ಉಳಿಸತಕ್ಕದ್ದು ನ್ಯಾಯವೆ ? ನಮ್ಮ ಮುಖ್ಯಮಂತ್ರಿಗಳು ಬಹಳ ಆಲೋಚನೆ ಮಾಡತಕ್ಕ ಪ್ರಸಂಗವಿದು. ಅವರ ಸಹೋದ್ಯೋಗಿ ದೋಷದಿಂದ ನಿರ್ಲಿಪ್ತರಾಗುವರೆಗೆ ಅವರು ಒಂದು ನಿರ್ಣಯ ತೆಗೆದುಕೊಳ್ಳಬೇಕು, ತಾವು ಮತ್ತು ತಪ್ಪು ಕಡೆಯುವರು ನಿರ್ಣಯ ಮಾಡಬೇಕು. ಈಗ ಇದನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

† ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈಗಾಗಲೇ ನಮ್ಮ ನಾಯಕರು ಹೇಳಿದಹಾಗೆ ನಿಲುವಳಿ ಸೂಚನೆಯನ್ನು ತಮ್ಮ ಮುಂದಿಟ್ಟಿದ್ದೇವೆ. ನಮ್ಮ ನಿಲುವಳಿ ಸೂಚನೆಯಲ್ಲಿ

"Situation arising out of the murder case of Kerala Advocate Sri Rasheed leading to the resignation of ex-Home Minister."

ಈಗಾಗಲೇ ಎಕ್ಸ್ ಹೋಮ್ ಮಿನಿಸ್ಟರ್ ತಮ್ಮ ಸ್ಟೇಟ್‌ಮೆಂಟ್ ಮಾಡಿದ್ದಾರೆ. ಸ್ಟೇಟ್‌ಮೆಂಟ್ ಮಾಡುವಾಗ ಅವರು ಕೆಲವು ಅಪಾದನೆಗಳನ್ನೂ ಕೂಡ ಮಾಡಿದ್ದಾರೆ;

ಅಧ್ಯಕ್ಷರು.—ಅದರ ಮೇಲೆ ಈಗ ಡಿಬೆಟ್ ಬೇಡ,

ಶ್ರೀ ಆರ್. ಎಸ್. ನಾಯಕ್.—ಹೀಗೆಯೇ ಹೇಳಬೇಕೆಂಬುದನ್ನು ನೀವು ಬರೆದುಕೊಡಿ ಹಾಗೆಯೇ ಮಾಡುತ್ತೇವೆ, ಆಗ ನಮಗೊಂದು ಸರ್ಟಿಫಿಕೇಟ್ ಕೊಡಿ. ಆಮೇಲೆ ಸುಮ್ಮನೆ ಕುಳಿತು ಕೊಳ್ಳಿ ಯೆಂದು ಹೇಳಿ.

ಅಧ್ಯಕ್ಷರು.—ಡಿಬೇಟ್ ಬೇಡವೆಂದು ಹೇಳಿದ್ದೇನೆ. ನಿಲುವಳಿ ಸೂಚನೆಯ ಬಗ್ಗೆ ಕನ್ಫೈನ್ಸ್ ಮಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರು ಹೇಳಿದಹಾಗೆ ಹೇಳುವುದಕ್ಕೆ ನನಗೆ ಬರುವುದಿಲ್ಲ. ನೀವು ಹೇಳಿದಹಾಗೆ ಹೇಳುವುದಕ್ಕೆ ನನಗೆ ಬರುವುದಿಲ್ಲ. ನನ್ನದೇ ಒಂದು ತರಹವಿದೆ ನಾನು ಅದನ್ನು ಹೇಳುತ್ತೇನೆ. ಇವತ್ತು ಕೊಟ್ಟಿರತಕ್ಕ ನಿಲುವಳಿ ಸೂಚನೆ ಕೇರಳದ ವಕೀಲ ರಷೀದ್‌ರವರು ಕೊಲೆಯಾದ ಬಗ್ಗೆ,

Mr. Speaker.—There shall be no debate on such statement after it has been made,

Sri M. Mallikarjuna Kharge.—But, you have allowed. ನಾವು. ಅದನ್ನು ರೈಸ್ ಮಾಡಿದಾಗ ತಮಗೆ ಅದು ಹೊಳೆಯಲಿಲ್ಲ. ಈಗಲಾದರೂ ಅದನ್ನು ರೆಫರ್ ಮಾಡುತ್ತಿದ್ದೀರಿ.

ಶ್ರೀ ಎಸ್. ಎಂ. ಅಡ್ಯಂತಾಯ.—ರಷೀದ್ ಬಗ್ಗೆ ಹೇಗೆ ಹೇಳಬೇಕು, ಮಾನ್ಯ ಜಾಲಪ್ಪನವರ ಬಗ್ಗೆ ಹೇಗೆ ಹೇಳಬೇಕು ಅದನ್ನು ಹೇಳಿಕೊಡಿ.

ಅಧ್ಯಕ್ಷರು.—ಅವರು ಹೇಳುತ್ತಾರೆ, ಅವರಿಗೆ ಗೊತ್ತಿದೆ. He is more intelligent than anybody else.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಮ್ಮ ನಿಲುವಳಿ ಸೂಚನೆ ಇರತಕ್ಕದ್ದು ಮಾಜಿ ಗೃಹ ಮಂತ್ರಿಗಳು ರಾಜೀನಾಮೆ ಕೊಟ್ಟ ಬಗ್ಗೆ. ಈಗಾಗಲೇ ಅವರು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ಸ್ಟೇಟ್‌ಮೆಂಟ್ ಮಾಡುವಾಗ ಕಾಂಟ್ರವರ್ಸಿಯಲ್ ಸ್ಟೇಟ್‌ಮೆಂಟ್ ಮಾಡಿದ್ದಾರೆ. ಯಾವುದು ಬೇಡವಾಗಿತ್ತು, ಅದನ್ನು ಕೂಡ ಹೇಳುವುದಕ್ಕೆ ತಾವು ಅಲೋ ಮಾಡಿದ್ದೀರಿ. ಈ ಬಗ್ಗೆ ನಾನೇನು ಹೇಳುವುದಕ್ಕಾಗುವುದಿಲ್ಲ. ಇದು ಆಗಬಾರದಾಗಿತ್ತು, ಇಂತಹ ಅವಕಾಶಗಳು ಬಂದಾಗ ನೀವು ನೋಡಿಕೊಂಡು ಅವಕಾಶ ಕೊಡಬೇಕು. ಕಾಂಟ್ರವರ್ಸಿ ಆಗುತ್ತದೆಯೆಂದು ಗೊತ್ತಿದೆ ಆದರೂ ಅವರು ಹೇಳಲಿ, ಅದು ನಾಳೆ ಪತ್ರಿಕೆಗಳಲ್ಲಿ ಬರುತ್ತದೆ ಅದಕ್ಕೆ ತಾವು ಪರ್ಮಿಷನ್ ಕೊಟ್ಟಿದ್ದೀರಿ. ಇದಕ್ಕೆ ಸರ್ಕಾರದವರು ಸಮರ್ಥನೆ ಮಾಡಿರುವುದರಿಂದ ನಾವು ಕೆಲವು ವಿಷಯಗಳನ್ನು ಹೇಳಬೇಕಾಗಿದೆ. ಅವರು ಏತಕ್ಕೆ ರಾಜೀನಾಮೆ ಕೊಡಬೇಕಾಗುತ್ತದೆ ಎನ್ನುವುದನ್ನು ನಾವು ಹೇಳಬೇಕಾಗುತ್ತದೆ.

೧-೩೦ ಪಿ.ಎಂ.

ತಾವು ಇದಕ್ಕೆ ಅನುಮತಿ ಕೊಡಬೇಕೆಂದು ಏಕೆ ಹೇಳುತ್ತಿದ್ದೇನೆ ಎಂದರೆ ಹೋದವರ್ಷ ೧೬ನೇ ಆಗಸ್ಟ್‌ನಲ್ಲಿ ನಾಪತ್ತೆಯಾದಂಥ ಶ್ರೀಮಾನ್ ಎಂ.ಎ. ರಶೀದ್ ಅವರ ಹೆಣ ಸೇಲಮ್ ಹತ್ತಿರ ರೈಲ್ವೆ ಟ್ರ್ಯಾಕ್‌ಮೇಲೆ ಸಿಕ್ಕಿತು. ಇಲ್ಲಿ ಶ್ರೀ ವೆಂಕಟಪ್ಪ ಎನ್ನುವ ಅಡ್ವೋಕೇಟ್ ೧೮ನೇ ತಾರೀಕಿನ ದಿವಸ ಮ್ಯಾಜಿಸ್ಟ್ರೇಟ್‌ರ ಹತ್ತಿರ ಒಂದು ಅಪ್ಲಿಕೇಶನ್ ಕೊಟ್ಟು ಶ್ರೀಮಾನ್ ರಶೀದ್ ಅವರು ಎಲ್ಲಿದ್ದಾರೆ ಗೊತ್ತಿಲ್ಲ, ಅವರನ್ನು ಹಾಜರು ಪಡಿಸಬೇಕು, ಪೋಲೀಸರು ೧೬ನೇ ತಾರೀಕಿಗೆ ಅವರನ್ನು ಕರೆದುಕೊಂಡು ಹೋಗಿದ್ದಾರೆ. ೧೬ ರಿಂದ ಇಲ್ಲಿಯುವರೆಗೂ ಪತ್ತೆ ಇಲ್ಲ ಎಂದು ಹೇಳಿದ್ದಾರೆ. ಮ್ಯಾಜಿಸ್ಟ್ರೇಟರ ಆದೇಶ ಪ್ರಕಾರ ಕೋರ್ಟಿನಲ್ಲಿ ೧೭ನೇ ತಾರೀಖು ಅವರನ್ನು ಹಾಜರುಪಡಿಸಬೇಕಿತ್ತು. ಆದರೆ ೧೭ನೇ ತಾರೀಖಿನ ದಿವಸ ಅವರು ಹಾಜರಾಗಲಿಲ್ಲ ನನಗೆ ಅವರು ಟೆಲಿಫೋನ್ ಮಾಡಿದ್ದರು. ಪೋಲೀಸರು ನನಗೆ ತೊಂದರೆ ಕೊಡುತ್ತಿದ್ದಾರೆ, ಕಿರುಕುಳ ಕೊಡುತ್ತಿದ್ದಾರೆ ಎನ್ನತಕ್ಕಂಥ ಟೆಲಿಫೋನ್ ಬಂದಿತ್ತು. ೧೭ನೇ ತಾರೀಖು ಅವರು ಕೋರ್ಟಿನ ಮುಂದೆ ಹಾಜರಿರಲಿಲ್ಲ. ಆದಕ್ಕಾಗಿ ಅವರು ಎಲ್ಲಿದ್ದಾರೆ ಎಂದು ಪತ್ತೆಹಚ್ಚಿ ಅವರನ್ನು ಹಾಜರುಪಡಿಸಬೇಕೆಂದು ಹೇಳಿ ೧೮ನೇ ತಾರೀಖಿಗೆ ಒಬ್ಬರು ಅಡ್ವೋಕೇಟ್ ಶ್ರೀಮಾನ್ ವೆಂಕಟಪ್ಪ ಎನ್ನುವವರು ಒಂದು ಅಪ್ಲಿಕೇಶನ್ ಅನ್ನು ಕೊಟ್ಟರು. ಅದನ್ನು ಕೊಟ್ಟ ಮೇಲೆ ಆಗ ಈ ಸದನದಲ್ಲಿ ಏನು ಆಯಿತು? ಅವರು ೧೯ನೇ ತಾರೀಖಿಗೆ ಪ್ರೆಸ್ ಕಾನ್ಫರೆನ್ಸ್ ಮಾಡಿದ್ದಾರೆ. ಅದರ ಬಗ್ಗೆ ಕೂಡ ೧೬ನೇ ತಾರೀಖು ಪೇಪರ್‌ನಲ್ಲಿ ಬಂದಿತ್ತು, ಆಗ ಪೋಲೀಸ್ ಅಧಿಕಾರಿಗಳು ಅದನ್ನು ನಿರಾಕರಿಸಿದರು ಯಾರಿಗೂ ಹಿಂಸೆ ಕೊಟ್ಟಿಲ್ಲ, ಅವರನ್ನು ಹೊಡೆದಿಲ್ಲ, ಅವರು ಎಲ್ಲಿದ್ದಾರೋ ಗೊತ್ತಿಲ್ಲ ಎನ್ನತಕ್ಕಂಥ ಹೇಳಿಕೆಯನ್ನು ಪೋಲೀಸ್ ಅಧಿಕಾರಿಗಳು ಕೊಟ್ಟರು. ಆದರೆ ಕೆಲವು ದಿವಸಗಳ ನಂತರ ಅವರ ಹೆಣ ಸೇಲಂ ಹತ್ತಿರ ಸಿಕ್ಕಿತು. ಅಂದರೆ ಒಂದು ಕಡೆ ಪೋಲೀಸರು ಹೇಳಿದರು ನಮಗೆ ಗೊತ್ತೇ ಇಲ್ಲ ಎಂದು. ಇನ್ನೊಂದು ಕಡೆ ಶ್ರೀಮಾನ್ ರಶೀದ್ ಅವರ ಹೆಣ ಸೇಲಂನಲ್ಲಿ ರೈಲ್ವೆ ಟ್ರ್ಯಾಕ್‌ನಲ್ಲಿ ಸಿಕ್ಕಿತು.

ಶ್ರೀ ಜೀವರಾಜ ಆಳ್ವ.—ಶ್ರೀ ಜಾಲಪ್ಪನವರು ಹೇಳುವಾಗ ಅದು ಸಬ್‌ಜ್ಯೂಡೀಸ್ ಆಗುತ್ತದೆ ಎಂದಿರಿ. ಈಗ ನೀವು ಅದೇ ವಿಚಾರವನ್ನು ಹೇಳುತ್ತಿದ್ದೀರಿ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾನು ಮ್ಯಾಜಿಸ್ಟ್ರೇಟ್‌ರು ಏನು ನಿರ್ಣಯ ಕೊಟ್ಟರು ಎಂದು ಹೇಳುತ್ತಿಲ್ಲ. ಏನು ಫ್ಯಾಕ್ಟ್ಸ್ ಇದೆ ಅದನ್ನು ಹೇಳುತ್ತಿದ್ದೇನೆ. ಪೇಪರ್‌ನಲ್ಲಿ ಬಂದದ್ದು, ನೀವು ಅನೇಕ ಸಲ ಒಪ್ಪಿಕೊಂಡಿದ್ದನ್ನು ಹೇಳುತ್ತಿದ್ದೇನೆಯೇ ಹೊರತಾಗಿ ಇವತ್ತು ಕೋರ್ಟಿನ ಮುಂದೆ ಇರತಕ್ಕಂಥ ವಿಷಯ ಸತ್ಯವೋ ಅಸತ್ಯವೋ ಎನ್ನುವುದಾಗಲೀ, ಆ ಸ್ಟೇಟ್‌ಮೆಂಟ್‌ನ್ನು ನಾನು ಡಿಲೇ ಮಾಡುತ್ತಿಲ್ಲ, ಅದು ಸರಿಯೆಂದು ಕೂಡ ಹೇಳುತ್ತಿಲ್ಲ, ಇದು ಪತ್ರಿಕೆಯಲ್ಲಿ ಬಂದಿದ್ದು ಸತ್ಯಸಂಗತಿ. ಈಗ ಪೋಲೀಸರು ಏನು ಹೇಳುತ್ತಿದ್ದಾರೆ ಎಂದರೆ ನಮಗೆ ಅವರು ಗೊತ್ತೇ ಇಲ್ಲ ನಾವು ಕಿರುಕುಳ ಕೊಟ್ಟಿಲ್ಲ ಎಂದು. ಆಮೇಲೆ ಸದನದಲ್ಲಿ ಇದು ಪ್ರಸ್ತಾಪ ಆದಾಗ, ಅಡ್ವೋಕೇಟ್ಸ್ ಪ್ರೊಸೆಶನ್ ಸ್ಟಾರ್ಟ್ ಮಾಡಿದಮೇಲೆ ಈ ಪ್ರಕರಣದ ಬಗ್ಗೆ ಮಾಹಿತಿಗಳನ್ನು ತರಿಸಿ ಸಿ.ಓ.ಡಿ ಎನ್‌ಕ್ವೈರಿ ಮಾಡಿಸುತ್ತೇನೆ ಎಂದು ಮುಖ್ಯಮಂತ್ರಿಗಳು ಆರ್ಡರ್ ಮಾಡಿದರು ನಂತರ ಇದು ಸರಿಯಲ್ಲ, ಸಿ.ಬಿ.ಐ.ಯಿಂದ ಎನ್‌ಕ್ವೈರಿ ಆಗಬೇಕು ಎಂದು ಎಜಿಟೇಶನ್ ಆದಮೇಲೆ, ರಶೀದ್ ಕೇಸ್ ಬಗ್ಗೆ ಕೇರಳ ವಿಧಾನ ಸಭೆಯಲ್ಲಿ ಸಿ.ಬಿ.ಐ.ಯಿಂದ ಎನ್‌ಕ್ವೈರಿ ಆಗಬೇಕು ಎಂದು ಚರ್ಚೆ ಆದಮೇಲೆ, ತಮಿಳುನಾಡಿನಲ್ಲಿ ಶವ ಸಿಕ್ಕಿದೆ. ಅವರು ಹುಟ್ಟಿದ್ದು ಬೆಳೆದದ್ದು ಕೇರಳದಲ್ಲಿ. ಇಲ್ಲಿ ಕರ್ನಾಟಕ ರಾಜ್ಯದಲ್ಲಿ ಅವರ ಕೊಲೆ ಆಗಿದ್ದ ಕಾರಣ ಇದನ್ನು ಪಾರ್ಲಿಮೆಂಟಿನಲ್ಲಿ ಕೂಡ ಎತ್ತಿದ್ದರು. ಇದೆಲ್ಲಾ ಆದಮೇಲೆ ಸಿ.ಬಿ.ಐ. ಎನ್‌ಕ್ವೈರಿ ಆಗಬೇಕೆಂದು ಕೇರಳದವರು ಅಂದಮೇಲೆ ಮುಖ್ಯಮಂತ್ರಿಗಳಿಗೂ ಕೂಡ ಹೊಳೆಯಿತು ಮುಖ್ಯಮಂತ್ರಿಗಳು ಸಿ.ಬಿ.ಐ ಗೆ ಇದನ್ನು ರೆಫರ್ ಮಾಡಿದರು. ಇದರ ಸತ್ಯಾಂಶ ಹೀಗೆ ಹೊರಗೆ ಬರುತ್ತಿರುವಾಗ ಅನೇಕ ಜನ ಸದನದಲ್ಲಿ ಹೇಳುವಾಗ ಪೋಲೀಸರ ಕೈವಾಡ ಇದರಲ್ಲಿ ಇದೆಯೆಂದು ಹೇಳುವಾಗ ಅಂದಿನ ಗೃಹಸಚಿವರು ಅದನ್ನು ಡಿಲೇ ಮಾಡಿದರು, ಅದೇರೀತಿ ಖಂಡತುಂಡವಾಗಿ ಮಾನ್ಯ ಮುಖ್ಯಮಂತ್ರಿಗಳೂ ಹೇಳಿದರು. ಇದರಿಂದಾಗಿ ಅಡ್ವೋಕೇಟ್‌ಗಳು ರಾಷ್ಟ್ರಮಟ್ಟದಲ್ಲಿ ಎಜಿಟೇಶನ್ ಮಾಡಿದರು. ಅವರು ಕೊಟ್ಟಂಥ ಅಪೀಲ್‌ನಲ್ಲಿಕೂಡ...

ಶ್ರೀ ರಾಮಕೃಷ್ಣ ಹೆಗಡೆ.—ಇದನ್ನು ನಿಮ್ಮ ಲೀಗಲ್‌ಸೆಲ್‌ನವರು ಮಾಡಿಸಿದ್ದುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಲೀಗಲ್ ಸೆಲ್ ನೀವು ಮಾಡತಕ್ಕಂಥ ದೌರ್ಜನ್ಯಗಳ ಬಗ್ಗೆ ಕಾಂಗ್ರೆಸ್ ಸೆಲ್‌ನವರೂ ಮಾಡಬಹುದು. ನಿಮ್ಮವರೂ ಮಾಡುತ್ತಿದ್ದಾರೆ.

Allawyers through out the country agitated. ಅದಕ್ಕೆ ಜನತಾ, ಕಾಂಗ್ರೆಸ್ ಎಂದು ಇಲ್ಲ. you have tried your best to divied them. ಆದರೂ ಕೂಡ ಇದರಲ್ಲಿ ಯಶಸ್ವಿ ಆಗಲಿಲ್ಲ. ಅನೇಕ ಕೆಲಸಗಳಲ್ಲಿ ಯಶಸ್ವಿಯಾದರೂ, ವಕೀಲರನ್ನು ಡಿವೈಡ್ ಮಾಡತಕ್ಕಂಥ ಪ್ರಯತ್ನ ಏನು ಮಾಡಿದಿರಿ. ಯಾರು ಯಾರನ್ನು ಕರೆಯಿಸಿ ಯಾವ ರೀತಿಯಲ್ಲಿ ಒಡಕು ತರಬೇಕೆಂದು ಪ್ರಯತ್ನ ಮಾಡಿದಿರಿ, ಅದು ಯಶಸ್ವಿಯಾಗಲಿಲ್ಲ. ಇದು ಕೊನೆಗೆ ಎಲ್ಲಿಗೆ ಬಂತು ಎಂದರೆ, ಸತ್ಯಾಂಶ ಹೊರಕ್ಕೆ ಬಂತು. ಈ ರೀತಿ ಸತ್ಯಾಂಶ ಹೊರಕ್ಕೆ ಬರುವಾಗ, ಸಿ. ಬಿ. ಐ. ನವರಿಗೆ ಸಹಕಾರ ಕೊಡಬೇಕಾದ್ದು ನಿಮ್ಮ ಕರ್ತವ್ಯ. ಏಕೆಂದರೆ ನಿಷ್ಪಕ್ಷಪಾತವಾಗಿ ಇಂಪಾರ್ಷಿಯಲ್ ಆಗಿ ತನಿಖೆ ನಡೆಯುತ್ತಿದ್ದು, ಯಾರು ತಪ್ಪಿತಸ್ಥರು ಇದ್ದಾರೆ. ಅವರಿಗೆ ಶಿಕ್ಷೆ ಕೊಡುತ್ತೇವೆಂದು ಸಿದ್ಧರಾದಮೇಲೆ ಇವತ್ತಿನ ದಿವಸ ಸಿ. ಬಿ, ಐ. ನವರು ಎನ್‌ಕ್ವೈರಿ ಮಾಡತಕ್ಕಂಥ ಕಾಲದಲ್ಲಿ, ಅವರ ಮೇಲೆ ನೀವು ಇಲ್ಲಸಲ್ಲದ ಮಾತುಗಳನ್ನಾಡುವುದು, ಕೇಂದ್ರ ಸರ್ಕಾರದವರು ಈ ರೀತಿಯಾಗಿ ಕಣ್ಣಿಟ್ಟಿದ್ದಾರೆ. ರಣಹದ್ದುಗಳ ಹಾಗೆ ಕಾದುಕೊಂಡಿದ್ದಾರೆ. ನಮಗೆ ಕೆಟ್ಟ ಹೆಸರು ತರಬೇಕು ಎಂದು ಮಾಡುತ್ತಿದ್ದಾರೆಂದು ಹೇಳುವುದು ಸರಿಯಲ್ಲ. ಈ ಸ್ಟೇಟ್‌ಮೆಂಟ್‌ನಲ್ಲೇ ಇದೆ, ನಾನು ಅದನ್ನು ರೆಫರ್ ಮಾಡುವುದಿಲ್ಲ. ನೀವು ಮಾಡಿದ ಪಾಪಕ್ಕಾಗಿ ಬೇರೆಯವರ ಮೇಲೆ ವಿನಾಕಾರಣ ನಿಮ್ಮ ಪಕ್ಷದವರೇ ನಮಗೆ ಈ ಮುಖ್ಯಮಂತ್ರಿಗಳು ಬೇಡವೆಂದು ದೂರುಕೊಟ್ಟರೆ, ಅದನ್ನೂ ಕಾಂಗ್ರೆಸ್‌ನವರೇ ಮಾಡಿದ್ದಾರೆಂದು ಹೇಳುತ್ತೀರಿ. ಆ ರೀತಿ ಮಾತನಾಡುವುದು ಸರಿಯಲ್ಲ. ಅದರಲ್ಲೂ ಕೂಡ ಇನ್‌ವಾಲ್ವ್ ಆದ ಪೊಲೀಸಿನವರು ಇದ್ದಾರೆ. ರಶೀದ್‌ರವರು ಕೊಟ್ಟಂಥ ಮೆಮೊರ್ಯಾಂಡಂನಲ್ಲಿ ಮಾನ್ಯ ಚಾಲಪ್ಪನವರ ಹಿನ್ನೆಲೆ ಇದೆ ಎಂದು ಹೇಳುತ್ತಾರೆ. ಇದನ್ನು ನಾವು ಹೇಳುತ್ತಿಲ್ಲ. ಬಾರ್ ಅಸೋಸಿಯೇಷನ್‌ಗೆ ಅವರು ಏನು ಕೊಟ್ಟಿದ್ದಾರೆ, ಅದರಲ್ಲಿ ಈ ವಿಚಾರ ಇದೆ. ಮಾನ್ಯ ರಷೀದ್ ಅವರು ಕೊಟ್ಟಿರತಕ್ಕಂಥ ರೆಪ್ರಸೆಂಟೇಷನ್‌ನಲ್ಲಿದೆ. ನಾವು ಹೇಳುವಾಗ ಸುಳ್ಳು ಎಂದು ನಿಮಗೆ ಅನಿಸಿತು. ಅಥವಾ ಸತ್ಯಕ್ಕೆ ದೂರವಾದುದು ಎಂದು ನಿಮಗೆ ಅನಿಸಿತು.

ಶ್ರೀ ಆರ್. ಎಲ್. ಚಾಲಪ್ಪ.—ಬಾರ್ ಅಸೋಸಿಯೇಷನ್‌ಗೆ ಕೊಟ್ಟಿರುವುದು

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಹೀಗೆ ಒಂದೊಂದು ವಿಚಾರ ಹೊರಕ್ಕೆ ಬರುವಾಗ, ಇವತ್ತಿನ ದಿವಸ ಸಿ. ಬಿ. ಐ. ನವರನ್ನು ದೂರುವುದು ಯಾವ ನ್ಯಾಯ ? ಇದಕ್ಕೆ ಪೊಲೀಸ್ ಆಫೀಸರ್‌ಗಳ ಸಹಕಾರವೂ ಬೇಕು. ಅವರ ಮೇಲೆ ನಿಮ್ಮ ಸ್ಟೇಟ್‌ಮೆಂಟ್ ಪರಿಣಾಮ ಬೀರುತ್ತದೆ. ಇದಕ್ಕೆ ಮುಖ್ಯಮಂತ್ರಿಗಳು ವಿರೋಧ ಕಾಣುತ್ತಾರೆ. ನಾವು ಸಹಕಾರ ಕೊಡಬಾರದು ಎನ್ನುವ ಮನೋಭಾವನೆ ಪೊಲೀಸ್ ಅಧಿಕಾರಿಗಳಲ್ಲಿ ಬರುತ್ತದೆ ಆದುದರಿಂದ ತಾವು ಹೇಳಿಕೆಗಳನ್ನು ಕೊಡುವಾಗ ಸ್ವಲ್ಪ ಯೋಚನೆ ಮಾಡಬೇಕು. ಸಿ. ಬಿ. ಐ. ನವರು ನಿಷ್ಪಕ್ಷಪಾತವಾಗಿ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಹೀಯ್ಯಾಳಿಸುವುದು, ಹಿಯ್ಯಾಳಿಸಿ ಮಾತನಾಡುವುದು ಅವರನ್ನು ವಿರೋಧಿಸುವುದು ನಿಜವಾಗಿಯೂ ಖಂಡನೆ ಈ ರೀತಿಯಾಗಿ ತಾವು ಮಾತನಾಡಬಾರದು, It is unnecessary. You are casting aspersions on Government of India. ಕಾಂಗ್ರೆಸ್‌ನವರ ಮೇಲೆ, ಅವರ ಮೇಲೆ, ಇವರ ಮೇಲೆ ದೂರತಕ್ಕಂಥ ಕೆಲಸವನ್ನು ಮಾಡುತ್ತಿದ್ದೀರಿ. ಇದರ ಬಗ್ಗೆ ಇನ್ನೂ ಹೇಳಬೇಕಾದದ್ದು ಬಹಳಷ್ಟು ಇದೆ. ಯಾವ ರೀತಿಯಾಗಿ ನೀವು ಪ್ರಯತ್ನ ಮಾಡಿದಿರಿ, ಎಂಬುದನ್ನೆಲ್ಲಾ ನಾನು ಹೇಳಬೇಕಾಗುತ್ತದೆ. anticipatory bailನ್ನು ಮ್ಯಾಜಿಸ್ಟ್ರೇಟ್‌ರವರು ರಿಜೆಕ್ಟ್ ಮಾಡಿದಮೇಲೆ ಇವರು ಡೆಲ್ಲಿಗೆ ಹೋಗಿ ಕುಳಿತರು...

ಅಧ್ಯಕ್ಷರು.—ಈಗ ಆ ವಿಚಾರಗಳು ಬೇಡ. ನೀವು ಬೇಗ ಮುಗಿಸಿ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಏನೂ ಆಗುವುದಿಲ್ಲವೆಂದು ಹೇಳಿ, ಅಲ್ಲಿಗೆ ಹೋಗಿ ಕುಳಿತುಕೊಂಡರು. ಆಮೇಲೆ ಈ ಪರಿಸ್ಥಿತಿಗೆ ಬಂದರು. ಮಾನ್ಯ ಚಾಲಪ್ಪನವರು ರಾಜೀನಾಮೆ ಕೊಡಲೆ ಅಥವಾ ಬಿಡಲಿ, ಆದರೆ ಮುಖ್ಯ ಮಂತ್ರಿಗಳು ಏನು ಹೇಳಿದರು, ಮಾನ್ಯ ಚಾಲಪ್ಪನವರು ರಾಜೀನಾಮೆ ಕೊಡುವ ಅವಶ್ಯಕತೆ ಇಲ್ಲ. ಅವರೇನೂ ಅಪರಾಧಿಗಳಲ್ಲ ಎಂದು ಮೊದಲೇ ಹೇಳಿದರು. ಅವರು ಏನು ಹೇಳಬೇಕಾಗಿತ್ತು, ಎಲ್ಲರೂ ಸರಿಸಮಾನ, ಯಾರು ತಪ್ಪು ಮಾಡಿದರೂ ಶಿಕ್ಷೆಗೆ ಒಳಗಾಗುತ್ತಾರೆ ಎಂದು ಹೇಳುವುದನ್ನು ಬಿಟ್ಟು. ಅವರು ತಪ್ಪು ಮಾಡಿಲ್ಲ, ಇವರು ತಪ್ಪು ಮಾಡಿ ಎಂದು ಹೇಳತಕ್ಕಂಥ ಪ್ರಯತ್ನದಿಂದ ಈಗ ಏನಾಯಿತು ? ಈ ರೀತಿ ಹೇಳುವುದರಿಂದ ಏನ ಮೇಲೆ ಪರಿಣಾಮ ಬೀರುತ್ತದೆ, ಜಡ್ಜಸ್ ಮೇಲೆ ಪರಿಣಾಮ ಬರುತ್ತದೆ. ಇವತ್ತು ಫ

ಜಾಲಪ್ಪನವರ ಹೇಳಿಕೆ ಮೇಲೆ ಸವಿಸ್ತಾರವಾಗಿ ಹೇಳುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕು. ಕರ್ನಾಟಕ ರಾಜ್ಯದಲ್ಲಿ ಇವತ್ತಿನ ಸಿಚುಯೇಷನ್ ಏನಾಗಿದೆ ಎಂದರೆ ಯಾರು ಕಾನೂನನ್ನು ರಕ್ಷಣೆ ಮಾಡಬೇಕು, ಯಾರಿಗೆ ಜನ ಅಧಿಕಾರ ಕೊಟ್ಟಿದ್ದಾರೆ. ಅವರೇ ಕಾನೂನನ್ನು ಕೈಯ್ಯಲ್ಲಿ ತೆಗೆದುಕೊಂಡು ಜನರ ಜೀವನವನ್ನು ತೆಗೆದ ಕೊಳ್ಳತಕ್ಕಂಥಾದ್ದು ವಕೀಲರನ್ನು ಕೊಲೆ ಮಾಡತಕ್ಕಂಥ ಪ್ರಯತ್ನವನ್ನು ಮಾಡಿದರೆ, ನನಗನ್ನಿಸುತ್ತದೆ. ೪೦ ವರ್ಷಗಳ ಸ್ವಾತಂತ್ರ್ಯದ ಇತಿಹಾಸದಲ್ಲಿ ಇಂತಹ ಘಟನೆ ಇನ್ನೊಂದು ಕಡೆ ಆಗಿಲ್ಲ. ಯಾರೂ ಕೂಡಾ ಈ ರೀತಿ ಮಾಡಿಲ್ಲ. ಆದರೂ ಕೂಡಾ ಇದರ ಬಗ್ಗೆ ತನಿಖೆಗೆ ಸಹಾಯ ಮಾಡುತ್ತೇವೆ ತಪ್ಪಿತಸ್ಥರಿಗೆ ಶಿಕ್ಷೆ ಮಾಡುತ್ತೇವೆ ಎಂಬುದನ್ನು ಬಿಟ್ಟು ಒಫೇಡ್ ಮಾಡತಕ್ಕ ಪ್ರಯತ್ನವನ್ನು ಮಾನ್ಯ ಮುಖ್ಯ ಮಂತ್ರಿಗಳು ಮಾಡಿದ್ದಾರೆ ಇವರಿಗೆ ಏನು ಹೇಳಬೇಕು ಎಂದು ಗೊತ್ತಾಗುತ್ತಿಲ್ಲ ಆದುದರಿಂದ ಇದರ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡಬೇಕು ಎಂದು ತಮ್ಮನ್ನು ಕೇಳಿಕೊಳ್ಳುತ್ತೇನೆ. ಅನೇಕ ಫ್ಯಾಕ್ಟ್ಸ್‌ಗಳು ಇವೆ. ಇಡೀ ದೇಶದ ಕಣ್ಣು ಈ ಕೇಸ್ ಕಡೆಗೆ ಇದೆ. ಆದುದರಿಂದ ದಯವಿಟ್ಟು ಇದಕ್ಕೆ ತಾವು ಅವಕಾಶ ಮಾಡಿಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ ನೀವು ನಾಲ್ಕು ಮಿನಿಟ್ ಮಾತನಾಡಿ. ಮೊಯಿಲಿಯವರು ಕೆ. ಎಚ್. ಪಾಟೀಲರು ನಾಲ್ಕು ನಾಲ್ಕು ಮಿನಿಟ್ ಮಾತನಾಡಲಿ,

ಶ್ರೀ ಎಸ್. ಬಂಗಾರಪ್ಪ.—ಇವರಿಷ್ಟೇ ಜನ ಮಾತನಾಡಿದರೆ ಉಳಿದವರು ಏನು ಮಾಡಬೇಕು ?

ಅಧ್ಯಕ್ಷರು.—ಒಳ್ಳೆಯದಾಯಿತಪ್ಪ, ಎಲ್ಲರೂ ಸಹಿ ಹಾಕಿದ್ದಾರೆ. ಎಲ್ಲರಿಗೂ ಅವಕಾಶ ಕೊಡುವುದಕ್ಕೆ ಆಗುತ್ತದೆಯೇ ?

ಶ್ರೀ ಬಿ. ಎಸ್, ಯಡಿಯೂರಪ್ಪ.—ಅಧ್ಯಕ್ಷರೇ ನಾನು ಕೂಡಾ ಇದರ ಬಗ್ಗೆ ನಿಲುವಳಿ ಸೂಚನೆ ಕಳುಹಿಸಿಕೊಟ್ಟಿದ್ದೇನೆ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಯಡಿಯೂರಪ್ಪನವರೇ ನೀವು ಮಾತನಾಡಿ.

† ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಅಧ್ಯಕ್ಷರೇ, ರಶೀದ್ ಕೊಲೆ ಪ್ರಕರಣದ ಹಿನ್ನೆಲೆಯಲ್ಲಿ ಗೃಹಸಚಿವರು ರಾಜೀನಾಮೆ ಕೊಟ್ಟ ಸಂದರ್ಭದಲ್ಲಿ ನಾನು ನಿಲುವಳಿ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೆ. ಬಹುಶಃ ಈ ದೇಶದಲ್ಲಿ ಈ ರೀತಿ ಒಂದು ಕೊಲೆ ಪ್ರಕರಣದ ಹಿನ್ನೆಲೆಯಲ್ಲಿ ಹೋಮ್ ಮಿನಿಸ್ಟರ್‌ರವರು ರಾಜೀನಾಮೆ ಕೊಟ್ಟಿರತಕ್ಕಂಥಾದ್ದು ಮತ್ತು ಅವರಿಗೆ ನಿರೀಕ್ಷಣಾ ಜಾಮೀನು ಸಿಗದಿರತಕ್ಕಂಥಾದ್ದು ಮೊದಲನೆಯ ಸಾರಿ ಎಂದು ಕಾಣುತ್ತದೆ. ಈ ಪ್ರಕರಣ ಈ ರಾಜ್ಯದ ಜನತೆಯಲ್ಲಿ ಸಂಶಯಕ್ಕೆ ಅವಕಾಶ ಮಾಡಿಕೊಟ್ಟಿದೆ. ಕೇರಳದಿಂದ ಇಲ್ಲಿಗೆ ಬಂದಂಥ ಒಬ್ಬ ವಕೀಲರು ಇಲ್ಲಿಂದ ವಾಪಸ್ ಹೋಗುವುದಕ್ಕೆ ಆಗಲಿಲ್ಲ. ಇಲ್ಲಿ ಕೊಲೆ ಆಯಿತು. ಈ ಕೊಲೆ ಆದಂಥ ಸಂದರ್ಭದಲ್ಲಿ ಹೈಕೋರ್ಟಿನ ಎಲ್ಲಾ ವಕೀಲರೂ ವಿಧಾನಸೌಧದ ಮುಂದೆ ಬಂದು ಘೇರಾವೋ ಮಾಡುವ ಮಟ್ಟಕ್ಕೆ, ಧರಣಿ ಮಾಡುವ ಮಟ್ಟಕ್ಕೆ ಹೋದರು. ಇದನ್ನು ರಾಜ್ಯದ ಜನತೆ ಗಮನಿಸಿದೆ. ಆ ಸಂದರ್ಭದಲ್ಲಿಯೇ ನಮ್ಮ ಜಾಲಪ್ಪನವರು ರಾಜೀನಾಮೆಯನ್ನು ಕೊಟ್ಟಿದ್ದರೆ ಚೆನ್ನಾಗಿತ್ತು. ಪ್ರಾರಂಭದಲ್ಲಿಯೇ ಹೈಕೋರ್ಟ್ ವಕೀಲರು ಇಲ್ಲಿ ಬಂದು ಸಂಶಯ ವ್ಯಕ್ತಪಡಿಸಿದಾಗ, ಈ ಸದನದಲ್ಲಿ ಈ ವಿಷಯ ಪ್ರಸ್ತಾಪ ಆದಾಗ, ಮಾನ್ಯ ಜಾಲಪ್ಪನವರು ರಾಜೀನಾಮೆ ಕೊಟ್ಟಿದ್ದರೆ ನಿಜಕ್ಕೂ ಅವರ ಗೌರವ ಜಾಸ್ತಿಯಾಗುತ್ತಿತ್ತು ಎಂದು ನಾನು ಅಂದುಕೊಂಡಿದ್ದೆ. ಎರಡನೆಯದಾಗಿ ಇದರಲ್ಲಿ ಉನ್ನತ ಮಟ್ಟದ ಪೋಲೀಸ್ ಅಧಿಕಾರಿ ಡಿ.ಸಿ.ಪಿ. ನಾರಾಯಣ್‌ರವರನ್ನು ಈ ಸಂದರ್ಭದಲ್ಲಿ ಸಿ.ಬಿ.ಐ ನವರು ತನಿಖೆ ಮಾಡುತ್ತಿದ್ದಾರೆ. ಉನ್ನತ ಪೋಲೀಸ್ ಅಧಿಕಾರಿಗಳ ಕೈವಾಡ ಈ ಕೊಲೆ ಮೊಕದ್ದಮೆಯಲ್ಲಿ ಇದೆ ಎನ್ನುವಂತಹ ಸಂಶಯ ಬಂದಿರುವುದರಿಂದ, ಮುಂದೆ ಬರುವಂತಹ ದಿವಸಗಳಲ್ಲಿ ಸರಕಾರ, ಈಗಿರುವಂತಹ ವ್ಯವಸ್ಥೆಯಲ್ಲಿ ರಾಜ್ಯದ ಜನತೆಯ ಹಿತವನ್ನು ಕಾಪಾಡುವುದಕ್ಕೆ ಸಾಧ್ಯ ಇದೆಯೇ ಎಂದು ಯೋಚಿಸಬೇಕಾಗಿದೆ. ಯಾವುದೇ ವ್ಯಕ್ತಿಯ ಕೊಲೆಯ ಹಿನ್ನೆಲೆ ಇರಲಿ, ಯಾವುದೇ ರೀತಿಯ ಅನುಮಾನ ಬಾರದ ರೀತಿಯಲ್ಲಿ ತನಿಖೆ ಮಾಡುವ ಜವಾಬ್ದಾರಿಯನ್ನು ನಮ್ಮ ರಾಜ್ಯ ಸರಕಾರ ಹೊರಬೇಕಾಗಿತ್ತು, ಸ್ವತಃ ಮುಖ್ಯಮಂತ್ರಿಯವರೇ ಈ ವಿಚಾರದಲ್ಲಿ ಸಿ.ಬಿ.ಐ. ತನಿಖೆಯನ್ನು ಮಾಡಿಸುತ್ತೇವೆ ಎಂದು ಒಪ್ಪಿಕೊಂಡ ಮೇಲೆ ಈಗ ಸಿ.ಬಿ.ಐ. ನವರು ತನಿಖೆ ಮಾಡುತ್ತಿರುವ

ಸಂದರ್ಭದಲ್ಲಿ, ಆ ತನಿಖೆಯ ಬಗ್ಗೆ ಅನುಮಾನ ವ್ಯಕ್ತಪಡಿಸುವುದನ್ನು, ತನಿಖಾ ಕ್ರಮದ ಬಗ್ಗೆ ಪ್ರಶ್ನೆ ಮಾಡುವುದನ್ನು ಮಾನ್ಯ ಮುಖ್ಯಮಂತ್ರಿಗಳು ಯಾವ ಹಿನ್ನೆಲೆಯಲ್ಲಿ ಮಾಡಿದರು ಎಂಬ ಬಗ್ಗೆ ಅವರು ಉತ್ತರ ಕೊಡುವಂತಹ ಸಂದರ್ಭದಲ್ಲಿ ನಾವು ಕೇಳವವರಿದ್ದೇವೆ. ಆದುದರಿಂದ ತಮ್ಮ ಮೂಲಕ ನಾನು ಸರಕಾರವನ್ನು ಒತ್ತಾಯ ಮಾಡುವುದು ಇಷ್ಟೇ, ಇದರ ಬಗ್ಗೆ ವಿವರವಾದ ಚರ್ಚೆ ಆಗಬೇಕು. ವಕೀಲರನ್ನು ಕೊಲೆ ಮಾಡಿದ ಸಂದರ್ಭದಲ್ಲಿ ಉನ್ನತ ಅಧಿಕಾರಿಗಳ ಕೈವಾಡ ಇದೆ, ಹೋಂ ಮಿನಿಸ್ಟರ್ ಕೈವಾಡ ಇದೆ ಎಂದು ಜನರು ಮಾತನಾಡುವುದೂ ಸಹ ಸರಕಾರಕ್ಕೆ ಗೌರವ ತರುವ ಸಂಗತಿ ಅಲ್ಲ. ಆದುದರಿಂದ ಇದರ ಬಗ್ಗೆ ವಿವರವಾದ ಚರ್ಚೆಯಾದರೆ ಇದರಲ್ಲಿ ಯಾರ ಪಾಲು ಏನಿದೆ ಎಂಬುದು ಗೊತ್ತಾಗುತ್ತದೆ. ಸನ್ಮಾನ್ಯ ಮುಖ್ಯಮಂತ್ರಿಗಳು ಅನೇಕ ವಿಷಯಗಳು ನನಗೆ ಗೊತ್ತಿದೆ ಎಂಬ ಮಾತನ್ನು ಸೂಕ್ಷ್ಮವಾಗಿ ಹೇಳಿದ್ದಾರೆ. ಅದು ಪತ್ರಿಕೆಯಲ್ಲೂ ಬಂದಿದೆ, ಸನ್ಮಾನ್ಯ ಮುಖ್ಯ ಮಂತ್ರಿಗಳಿಗೆ ಗೊತ್ತಿರುವುದನ್ನು ರಾಜ್ಯದ ಹಿತದೃಷ್ಟಿಯಿಂದ, ಕಾನೂನನ್ನು ಎತ್ತಿ ಹಿಡಿಯುವ ದೃಷ್ಟಿ ಯಿಂದ, ವಕೀಲರ ಕೊಲೆಯ ಹಿನ್ನೆಲೆಯಲ್ಲಿ ಅದರ ಸತ್ಯಾಸತ್ಯತೆಯ ಹಿನ್ನೆಲೆಯಲ್ಲಿ ಅವರು ಹೇಳಿ ಬಿಟ್ಟಿದ್ದರೆ, ಹೇಳುವ ಪ್ರಯತ್ನ ಮಾಡಿದ್ದರೆ, ಮಾನ್ಯ ಜಾಲಪ್ಪನವರು ರಾಜೀನಾಮೆ ಕೊಡುವ ಮಟ್ಟಕ್ಕೆ ಇದು ಬರುತ್ತಿರಲಿಲ್ಲ. ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಏನಾದರೂ ವಿವರಗಳು ಇದ್ದರೆ, ಅದನ್ನು ಅವರು ಈ ಸದನದ ಮುಂದೆ ಇಡಬೇಕು. ಇಂತಹ ಪ್ರಕರಣದಲ್ಲಿ ಹೋಂ ಮಿನಿಸ್ಟರ್ ಇನ್‌ವಾಲ್ವ್ ಆಗಿದ್ದಾರೆ ಎನ್ನುವಂತಹ ಸಂಶಯ ಪಡುವಂತಹದು ರಾಜ್ಯದ ಜನತೆ ತಲೆತಗ್ಗಿಸಬೇಕಾದ ಪ್ರಶ್ನೆಯಾಗಿದೆ. ಆದುದರಿಂದ ನಿಲುವಳಿ ಸೂಚನೆಯ ಮೂಲಕ ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳುತ್ತೇನೆ.

† ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಸಭಾಧ್ಯಕ್ಷರೇ ಮಾನ್ಯ ವಿರೋಧಪಕ್ಷದ ನಾಯಕಿಯವರು, ಮತ್ತು ಉಪ ನಾಯಕರು ಮತ್ತು ಶ್ರೀಮಾನ್ ಯಡಿಯೂರಪ್ಪನವರು ಕೂಡ ಈ ವಿಚಾರದಲ್ಲಿ ಮಾತನಾಡಿದ್ದಾರೆ. ಇವತ್ತು ನಮ್ಮ ಮುಂದೆ ಇರತಕ್ಕಂಥ ಪ್ರಶ್ನೆ ಈ ವಿಚಾರವನ್ನು ನಿಲುವಳಿ ಸೂಚನೆಯ ರೂಪದಲ್ಲಿ ಚರ್ಚೆ ಮಾಡುವುದಕ್ಕೆ ತಾವು ನಮಗೆ ಒಪ್ಪಿಗೆ ಕೊಡುವ ಸಲುವಾಗಿ ನಾವು ಮಂಡನೆ ಮಾಡಿದ್ದೇವೆ. ತಾವು ಅದಕ್ಕೆ ಒಪ್ಪಿಗೆ ಕೊಡಬೇಕು. ಆ ಬಗ್ಗೆ ನಮ್ಮಲ್ಲಿ ವಿವರಗಳು ಬೇಕಾದಷ್ಟು ಇವೆ. ಆ ಎಲ್ಲಾ ವಿವರಗಳನ್ನು ಸದನದ ಮುಂದೆ ನಾವು ಇಟ್ಟು ಅವುಗಳನ್ನು ಚರ್ಚೆಗೆ ಒಳಪಡಿಸಿ ಈ ಪ್ರಕರಣಕ್ಕೆ ಹೆಚ್ಚಿನ ಬೆಳಕು ಚೆಲ್ಲತಕ್ಕಂಥ ಜವಾಬ್ದಾರಿ ನಮ್ಮದಾಗಿರುವುದರಿಂದ ನಾವು ನಿಲುವಳಿ ಸೂಚನೆಯ ರೂಪದಲ್ಲಿ ಇದನ್ನು ತಂದಿದ್ದೇವೆ. ಅಂತಹ ಒಂದು ಸದುದ್ದೇಶದಿಂದ ಈ ವಿಚಾರವನ್ನು ಚರ್ಚೆ ಮಾಡಲು ನಮಗೆ ಅವಕಾಶ ಕೊಡಿ ಎಂದು ನಾವು ನಿಮ್ಮ ಒಪ್ಪಿಗೆಗೆ ಕಳುಹಿಸಿದ್ದೇವೆ. ಈಗ ತಮ್ಮ ಪೂರ್ವ ಅನುಮತಿ ಇಲ್ಲದೆ ವಿವರಗಳಿಗೆ ಹೋಗತಕ್ಕಂಥಾದ್ದು ಸರಿಯಲ್ಲ. ಆದರೆ ನಮಗಿರತಕ್ಕಂಥ ವ್ಯಾಪ್ತಿಯಲ್ಲಿ ಕೆಲವು ಪ್ರಮುಖವಾದ, ಮೇಲ್ನೋಟಕ್ಕೆ ಸರಿ ಎಂದು ಕಂಡು ಬಂದಂತಹ, ಚರ್ಚೆಯ ವ್ಯಾಪ್ತಿಯಲ್ಲಿ ಯಾವುದು ಬರುತ್ತದೆಯೋ ಅಷ್ಟಕ್ಕೆ ಮಾತ್ರ ಸೀಮಿತವಾಗಿ ಮಾತನಾಡುತ್ತೇನೆ. ಈ ಸಂದರ್ಭದಲ್ಲಿ ವಿಷಯ ಇನ್ನೂ ಕೂಡ ತನಿಖೆಯಲ್ಲಿ ಇದೆ. ತನಿಖೆ ಯಲ್ಲಿರತಕ್ಕಂಥ ಸಂದರ್ಭದಲ್ಲಿ ವಿವರಕ್ಕೆ ಹೋಗದೆ ಕೆಲವೇ ಕೆಲವು ವಿಷಯಗಳನ್ನು ಮಾತ್ರ ಪ್ರಸ್ತಾಪ ಮಾಡುತ್ತೇನೆ. ಈಗ ನಾನು ಸಾವಿಗೀಡಾಗಿರುವ ರಷೀದ್‌ರವರು ಬರೆದಿರತಕ್ಕ ಪತ್ರದ ಬಗ್ಗೆ ಆಗಲಿ ಇನ್ನಿತರ ಯಾವುದೇ ವಿಷಯಗಳಿಗೆ ಹೋಗುವುದಿಲ್ಲ, ನನ್ನಲ್ಲಿ ಬೇಕಾದಷ್ಟು ವಿವರಗಳು ಇವೆ. ಆದರೆ ಅವೆಲ್ಲವನ್ನು ಹೇಳುವುದಿಲ್ಲ. ತನಿಖೆ ಮೇಲೆ ಈ ವಿವರಗಳೂ ಸಹ ಪರಿಣಾಮ ಬೀರಬಹುದು. ಆ ದೃಷ್ಟಿಯಿಂದ ಕೂಡ ನಾನು ಆ ವಿಚಾರಗಳನ್ನು ಪ್ರಸ್ತಾಪ ಮಾಡುವುದನ್ನು ತಡೆ ಹಿಡಿಯುತ್ತೇನೆ, ಇವತ್ತು ತನಿಖೆ ಮಾಡುತ್ತಿರುವ ಸಿ.ಬಿ.ಐ. ದಳ ಏನಿದೆ ಆ ದಳಕ್ಕೆ ರಾಜ್ಯ ಸರ್ಕಾರದಿಂದ ಸರಿಯಾದ ಸಹಕಾರ ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಮಾನ್ಯ ಸಭಾಧ್ಯಕ್ಷರೇ ಇವತ್ತು ಕಾನೂನಿನ ಮುಂದೆ ಎಲ್ಲರೂ ಒಂದೇ ಎನ್ನತಕ್ಕಂಥ ಮಾತನ್ನು ಇಲ್ಲಿರತಕ್ಕಂಥ ಆ ಕಡೆಯ ಮಾನ್ಯ ಸದಸ್ಯರೂ ಸಹ ಅಲ್ಲಗೆಳೆಯುವುದಿಲ್ಲ. Everyone is equal before the Law, all are equal before the law. ಶ್ರೀಮಾನ್ ಜಾಲಪ್ಪನವರು ಗೃಹ ಸಚಿವರಾಗಿ ಇದ್ದು ಆಪಾದನೆ ಹೊತ್ತುಕೊಂಡಿರತಕ್ಕಂಥ ಮಾತು ಬೇರೆ. ಇಂತಹ ಆಪಾದನೆ ಬಂದಾಗ ಕಾನೂನಿನ ಮುಂದೆ ಸರಿ ಸಮಾನವಾಗಿ ನಿಲ್ಲತಕ್ಕಂಥ ವಿಚಾರ ಇದಾಗಿದೆ. ರಾಜ್ಯ ಸರ್ಕಾರ ಸಿ.ಬಿ.ಐ.ಗೆ ಈ ಒಂದು ವಿಷಯವನ್ನು ಒಳಪಡಿಸಿದ್ದು ಆ ವಿಷಯವನ್ನು ಅವರು ತನಿಖೆ ಮಾಡುತ್ತಿದ್ದಾರೆ. ಮೊದಲು ವಕೀಲರ ಸಂಘದವರು ಈ ವಿಚಾರ ಸಿ.ಬಿ.ಐ.ಗೆ ವಹಿಸಿ ತನಿಖೆ ನಡೆಸಬೇಕೆಂದು ರಾಜ್ಯಪಾಲರಿಗೆ ಮನವಿಯನ್ನು ಸಲ್ಲಿಸಿದರು.

ತದನಂತರ ಕೇರಳದವರು ಒತ್ತಾಯ ತಂದರು, ಆಗ ಈ ವಿಷಯವನ್ನು ಸಿ.ಒ.ಡಿ.ಗೆ ವಹಿಸಿದರು. ಇವತ್ತು ನಮ್ಮ ಮುಂದೆ ಇರತಕ್ಕಂಥಾದ್ದು ಸಿ.ಬಿ.ಐ.ಗೆ ರಾಜ್ಯ ಸರ್ಕಾರ ಈ ವಿಷಯವನ್ನು ಒಪ್ಪಿಸಿರುವುದು. ಒಂದು ವೇಳೆ ರಾಜ್ಯ ಸರ್ಕಾರಗಳೇ ನೇರವಾಗಿ ಸಿ.ಬಿ.ಐ.ಗೆ ವಹಿಸುವುದು, ಇನ್ನು ಕೆಲವು ವೇಳೆ ಸಿ.ಬಿ.ಐ. ನವರೇ ಮುಂದೆ ಬಂದು ನಾವು ಈ ವಿಚಾರವನ್ನು ತನಿಖೆ ಮಾಡುತ್ತೇವೆಂದು ಹೇಳುವುದೂ ಸಹ ಇದೆ. ಆದರೆ ಈ ವಿಷಯವನ್ನು ರಾಜ್ಯ ಸರ್ಕಾರವೇ ತೀರ್ಮಾನ ಮಾಡಿ ಸಿ.ಬಿ.ಐ.ಗೆ ಕೊಟ್ಟಿದೆ. ಈ ಬಗ್ಗೆ ಹಿಂದೆ ಮಾನ್ಯ ಮುಖ್ಯಮಂತ್ರಿಗಳು ಒಂದು ಮಾತು ಹೇಳಿದ್ದರು ಶ್ರೀಮಾನ್ ಜಾಲಪ್ಪನವರು ಸಹ ಹೇಳಿದ್ದರು. ಅದೇನೆಂದರೆ ಈ ವಿಷಯದ ನೈಜ ಪರಿಸ್ಥಿತಿ ಹೊರಗಡೆ ಬರಬೇಕು, ಸತ್ಯಾಸತ್ಯತೆ ವಿಮರ್ಶೆ ಮಾಡಿ ವರದಿಕೊಡಬೇಕೆಂದು ನಾವು ಸಿ.ಬಿ.ಐ.ಗೆ ಒಪ್ಪಿಸಿದ್ದೇವೆಂದು ಹೇಳಿ ಭುಜ ತಟ್ಟಿಕೊಂಡರು. ನಾವೆಲ್ಲ ಸಿ.ಬಿ.ಐ.ಗೆ ವಹಿಸಿ ಎಂದು ಡಿಮ್ಯಾಂಡ್ ಮಾಡುತ್ತೇವೆಯೋ ಎಂದು ತಿಳಿದು ತಾವಾಗಿಯೇ ಸಿ. ಬಿ. ಐ.ಗೆ ಒಪ್ಪಿಸಿದರು. ನಾವು ಯಾವುದಾದರೊಂದು ಸಂಸ್ಥೆಯ ಮೇಲೆ ನಂಬಿಕೆ ಇಡಬೇಕು. ಅವು ರಾಜ್ಯ ಸರ್ಕಾರದ ವ್ಯಾಪ್ತಿಯಲ್ಲಿ ಬರತಕ್ಕಂಥ ಸಂಸ್ಥೆಗಳಾಗಲಿ ಅಥವಾ, ಕೇಂದ್ರ ಸರ್ಕಾರದ ಸಂಸ್ಥೆಗಳಾಗಲಿಯಾವುದೇ ತನಿಖೆಗಳ ಬಗ್ಗೆ ಆಗಲಿ ನಮಗೆ ನಂಬಿಕೆ ಇರಬೇಕು.

ನಮಗೆ ಗೊತ್ತಿರುವ ಹಾಗೆ ರೆಗ್ಯುಲರ್ ಪೋಲೀಸ್ ಮತ್ತು ಸಿ.ಒ.ಡಿ. ಬಿಟ್ಟರೆ ನಮ್ಮ ರಾಜ್ಯ ಸರ್ಕಾರದ ಮಟ್ಟದಲ್ಲಿ ಬೇರೆ ಉನ್ನತ ಮಟ್ಟದ ತನಿಖಾ ದಳ ಇಲ್ಲ. ಆದಕ್ಕೆ ನಾವು ಪೋಲೀಸ್ ಇಲಾಖೆ ಮತ್ತು ಸಿ.ಒ.ಡಿ ತನಿಖೆಗಳಲ್ಲಿ ನಂಬಿಕೆ ಇಲ್ಲವೆಂದು ಹೇಳಿದರೆ ಕೇಂದ್ರ ತನಿಖಾ ದಳಕ್ಕೆ ಅಂದರೆ ಸಿ.ಬಿ.ಐ.ಗೆ. ಕೇಸ್‌ಗಳನ್ನು ಅಂತಿಮವಾಗಿ ವಹಿಸುತ್ತೇವೆ. ಜುಡಿಶಿಯಲ್ ಇನ್‌ಕ್ವೈಯರಿ ಮತ್ತು ಕ್ಯಾಬಿನೆಟ್ ಮುಖಾಂತರ ನೇರವಾಗಿ ತನಿಖೆಯನ್ನು ಮಾಡಿದರೆ ಬಹಳ ಕಾಲ ಹಿಡಿಯುತ್ತದೆಂದು ಆದ್ದರಿಂದ ಸಿ.ಬಿ.ಐ ಗೆ ವಹಿಸಿಕೊಡಬೇಕೆಂದು ನಾವು ಕೇಳಿದಾಗ ರಾಜ್ಯ ಸರ್ಕಾರದವರು ಸಂಬಂಧಪಟ್ಟ ಕೇಸ್‌ನ್ನು ಸಿ.ಬಿ.ಐಗೆ ವಹಿಸತಕ್ಕ ಕೆಲಸ ಮಾಡುತ್ತಾರೆ. ಒಂದು ಸಾರಿ ಯಾವುದಾದರೂ ಒಂದು ವಿಚಾರದ ಮೇಲೆ ತನಿಖೆಯನ್ನು ಕೇಂದ್ರ ತನಿಖಾ ದಳಕ್ಕೆ ವಹಿಸಿದ ಮೇಲೆ ಪೂರ್ಣ ನಂಬಿಕೆಯನ್ನು ಆದರ ಮೇಲೆ ಇಡಬೇಕು. ಸಿ.ಬಿ.ಐ. ಸಂಸ್ಥೆಗೆ ಕೇಸನ್ನು ವಹಿಸಿದ ಮೇಲೆ ಆದರ ಬಗ್ಗೆ ಮತ್ತೆ ವಿರೋಧ ಅಭಿಪ್ರಾಯ ಬರತಕ್ಕ ಮಾತುಗಳನ್ನು ಜವಾಬ್ದಾರಿ ಸ್ಥಾನದಲ್ಲಿ ಕುಳಿತಿರತಕ್ಕವರು ಮಾತನಾಡುತ್ತಾ ಹೋದರೆ ನಮ್ಮ ರಾಜ್ಯದಲ್ಲಿರತಕ್ಕ ಜನರಿಗೆ ಹಾಗೂ ನಮ್ಮ ದೇಶದಲ್ಲಿರತಕ್ಕ ಜನರಿಗೆ ಆ ಸಂಸ್ಥೆ ಬಗ್ಗೆ ಏನು ನಂಬಿಕೆ ಬರುತ್ತದೆ? ಈ ವಿಷಯವನ್ನು ನಾವು ಯೋಚನೆ ಮಾಡಬೇಕು. ಇಲ್ಲಿ ನಡೆದಿರತಕ್ಕದ್ದು ಏನು? ಕೊಲೆ ಆಗಿರುವುದು. ಕೊಲೆ ಆದ ಮೇಲೆ ಅಪರಾಧಿಗಳನ್ನು ಪತ್ತೆಹಚ್ಚಬೇಕು ಅಪರಾಧಿಗಳನ್ನು ಪತ್ತೆ ಹಚ್ಚಿ ಅವರುಗಳಿಗೆ ಶಿಕ್ಷೆಯಾಗುವಂತೆ ಮಾಡಬೇಕು. ಶಿಕ್ಷೆ ಮಾಡುವುದು ನಮಗೆ ಸಂಬಂಧಿಸಿದ ವಿಚಾರ ವಲ್ಲ ಕೋರ್ಟಿನಲ್ಲಿ ಅಪರಾಧಿಗಳು ಮಾಡಿರುವ ಕೆಲಸ ರುಜುವಾತು ಆದರೆ ಅವರಿಗೆ ಶಿಕ್ಷೆಯಾಗುತ್ತದೆ. ಅಪರಾಧಿಗಳಿಗೆ ಶಿಕ್ಷೆ ಕೊಡಬೇಕು ಎನ್ನುವ ಉದ್ದೇಶದಿಂದಲೇ ನ್ಯಾಯಾಂಗವನ್ನು ಸೃಷ್ಟಿಮಾಡಿ ನಾವು ಇಟ್ಟುಕೊಂಡಿದ್ದೇವೆ. ಅದರ ಬಗ್ಗೆ ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ನಮ್ಮ ವ್ಯಾಪ್ತಿ ಬೇರೆ ಯಾವುದಾದರೂ ಒಂದು ತನಿಖಾ ದಳ ಇದ್ದರೆ ಆದಕ್ಕೆ ಸಂಪೂರ್ಣವಾಗಿ ನಾವು ಸಹಕಾರ ಕೊಡಬೇಕು. ಸಭಾಧ್ಯಕ್ಷರೇ, ನಮ್ಮ ರಾಜ್ಯ ಸರ್ಕಾರವು ಈ ಕೇಸ್‌ನ್ನು ಸಿ.ಬಿ.ಐ.ಗೆ ವಹಿಸಿದ ಮೇಲೆ ಸರ್ಕಾರದ ಮುಖ್ಯಸ್ಥರೆ ಅಂದರೆ ಮುಖ್ಯ ಮಂತ್ರಿಗಳವರೇ ಸಿ.ಬಿ.ಐ. ಮೇಲೆ ವ್ಯಾಖ್ಯಾನ ಮಾಡುತ್ತಾ ಹೋದರೆ ರಾಜ್ಯ ಸರ್ಕಾರದ ಅಧೀನದಲ್ಲಿರುವ ಪೋಲೀಸ್ ಇಲಾಖೆಯವರು ಮತ್ತು ಸಿ.ಒ.ಡಿ ಇಲಾಖೆ ಯವರು ಈ ಕೇಸ್‌ಗೆ ಸಂಬಂಧಪಟ್ಟ ದಾಖಲೆಗಳನ್ನು ಮತ್ತು ವಿವರಗಳನ್ನು ಕೇಂದ್ರ ತನಿಖಾ ದಳಕ್ಕೆ ಕೊಡುತ್ತಾರೆಯೇ ಎನ್ನುವ ಪ್ರಶ್ನೆ ಇಲ್ಲಿ ಬಂದಿದೆ. ಸಿ.ಬಿ.ಐ. ನವರ ಮೇಲೆ ಮುಖ್ಯ ಮಂತ್ರಿಯವರು ಕಾಮೆಂಟ್ ಮಾಡುತ್ತಾ ಹೋದರೆ ತನಿಖೆಗೆ ಬೇಕಾದ ವಿವರಗಳನ್ನು ಸಂಬಂಧಪಟ್ಟ ಪೋಲೀಸ್ ಇಲಾಖೆಯವರು ಕೊಡದೇ ಇರುವುದಕ್ಕೆ ಕಾರಣವಾಗುತ್ತದೆ. ತನಿಖೆಗೆ ಬೇಕಾದ ವಿವರಗಳನ್ನು ಕೊಡದೇ ಇದ್ದರೆ ನಾಳೆ ಗತಿ ಏನಾಗುತ್ತದೆ ? ವಸ್ತು ಸ್ಥಿತಿಯನ್ನು, ನೈಜ ಸ್ಥಿತಿಯನ್ನು, ಸತ್ಯಾಂಶವನ್ನು ಪತ್ತೆ ಹಚ್ಚುವುದಕ್ಕೆ ಸಾಧ್ಯವಾಗುತ್ತದೆಯೇ ? ಈಗಾಗಲೇ ಇದಕ್ಕೆ ಸಂಬಂಧಪಟ್ಟಂತೆ ಮಾನ್ಯ ಜಾಲಪ್ಪ ನವರು ರಾಜೀನಾಮೆಯನ್ನು ಕೊಟ್ಟಿದ್ದಾರೆ. ಅವರು ರಾಜೀನಾಮೆಯನ್ನು ಕೊಡದೇ ಇದ್ದಿದ್ದರೆ ನಾವು ರಾಜೀನಾಮೆಯನ್ನು ಕೇಳುತ್ತಿದ್ದೆವು. ರಾಜೀನಾಮೆಯನ್ನು ಕೇಳುವ ಹಕ್ಕು ನಮಗಿದೆ ಆಪಾದನೆ ಮೇಲ್ನೋಟಕ್ಕೆ ಕಂಡರೆ ಮೊದಲು ಆ ಸ್ಥಾನದಲ್ಲಿರುವವರು ಜಾಗ ಬಿಡುವುದು ನೀತಿಯ ಪ್ರಶ್ನೆ. ಆದರಂತೆ ಅವರು ರಾಜೀನಾಮೆಯನ್ನು ಕೊಟ್ಟಿದ್ದಾರೆ, ಜಾಲಪ್ಪನವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಡುವುದಕ್ಕಿಂತ ಮೊದಲು, ಜಾಲಪ್ಪನವರು ಅಪರಾಧಿಯಲ್ಲವೆಂದು ನೀವು ಹೇಳಿದ್ದೀರಿ ನೀವೇನು

ಸಿ.ಬಿ.ಐ. ನವರೆ ? ಜಾಲಪ್ಪನವರ ಬಗ್ಗೆ ತಾವು ಯಾವಾಗ ತನಿಖೆಯನ್ನು ಮಾಡಿದ್ದೀರಿ ? ಮುಖ್ಯ ಮಂತ್ರಿಗಳಾದ ತಮಗೆ ತನಿಖೆಯನ್ನು ಮಾಡಬೇಕೆಂದು ಯಾರು ಜವಾಬ್ದಾರಿಯನ್ನು ವಹಿಸಿದರು ? ನೀವು ತನಿಖೆ ಮಾಡುವುದಕ್ಕೆ ನಿಮಗೆ ಯಾರು ಅಧಿಕಾರ ಕೊಟ್ಟಿದ್ದಾರೆ ? ರಾಜ್ಯ ಸರ್ಕಾರದ ಅಧೀನದಲ್ಲಿರುವ ಪೋಲೀಸ್ ಇಲಾಖೆಗಳಿಂದ ತನಿಖೆಯ ಕೆಲಸವನ್ನು ಹಿಂತೆಗೆದುಕೊಂಡು ಸಿ.ಬಿ.ಐ.ಗೆ ನೀವೇ ವಹಿಸಿದ ಮೇಲೆ ಪುನ: ಸಿ.ಬಿ ಐ. ಮೇಲೆ ಕಾಮೆಂಟ್ ಮಾಡುವುದಕ್ಕೆ ನಿಮಗೆ ಯಾವ ಮೂಲಭೂತ ಹಕ್ಕು ಇದೆಯೆಂದು ನಾನು ಈ ಸಂದರ್ಭದಲ್ಲಿ ಕೇಳುತ್ತಿದ್ದೇನೆ. ಪತ್ರಿಕೆ ತುಂಬಾ ಇವರ ಮಾತುಗಳು ಬಂದವು. ಏನೆಂದು ? ಈ ಸಿ.ಬಿ.ಐ. ಸಂಸ್ಥೆ ತಲೆಹಿಡುಕರು ಅಂದರೆ ಪಿಂಡ್ಸ್, ಪುಂಡು, ರೌಡಿ ಇವರುಗಳನ್ನೆಲ್ಲ ಸೃಷ್ಟಿಮಾಡಿಕೊಂಡು ತಂದು ಕೇಸನ್ನು ಸೃಷ್ಟಿ ಮಾಡುತ್ತಿದ್ದಾರೆ ಎಂದೆಲ್ಲಾ ಸಿ.ಬಿ.ಐ ಮೇಲೆ ಆಡಿದ್ದಾರೆ.

ಅಧ್ಯಕ್ಷರು.—ಈಗ ಆ ಚರ್ಚೆ ಬೇಡ,

ಶ್ರೀ ಎಸ್. ಬಂಗಾರಪ್ಪ,—ಅಧ್ಯಕ್ಷರೇ, ಆ ಸಂಸ್ಥೆಗೆ ವಿಚಾರಣೆ ವಹಿಸಿದ ಮೇಲೆ ಈ ಮಾತನ್ನು ಆಡುತ್ತಾ ಹೋದರೆ ಸಿ.ಬಿ.ಐ ಮೇಲೆ ಜನತೆ ಅಭಿಪ್ರಾಯ ಏನಾಗಬಹುದು ? ಮಾನ್ಯ ಖರ್ಗೆಯವರು ಒಂದು ಮಾತನ್ನು ಹೇಳಿದರು, ಕಾನೂನಿನ ಮುಂದೆ ಎಲ್ಲರೂ ಕೂಡ ಒಂದೇ ಎಂದು ಇದ್ದಾಗ ಯಾವ ಸತ್ಯಶೋಧನೆಗಾದರೂ ಎಷ್ಟು ಸಹಕಾರ ಸಹಾಯ ನೀಡಲು ರಾಜ್ಯ ಸರ್ಕಾರ ಮುಂದಕ್ಕೆ ಬರುತ್ತದೆಂದು ಜನತೆ ನಿರೀಕ್ಷೆ ಮಾಡುತ್ತಿರುತ್ತದೆ. ಅದೇ ಪ್ರಜಾಪ್ರಭುತ್ವ ಎಂದು ಮೌಲ್ಯಾಧಾರಿತ ರಾಜಕೀಯ ಮಾಡಿ ನೀವು ಚೆನ್ನಾಗಿ ನೆಲಕಚ್ಚಿಹೋದಿರಿ. ಆ ವಿಚಾರ ಈಗ ಬೇಡ ಅದರ ಬಗ್ಗೆಯೆಲ್ಲಾ ಈಗ ನಾನು ಮಾತನಾಡಲಿಕ್ಕೆ ಹೋಗುವುದಿಲ್ಲ ಆ ಸಂದರ್ಭವೂ ಬರುತ್ತದೆ. ಆದರೆ ಈ ಸಂದರ್ಭದಲ್ಲಿ ಯಾರು ಯಾರು ತಪ್ಪು ಮಾಡಿದ್ದಾರೆ.

ಅಧ್ಯಕ್ಷರು.—ನಿಮಗೆ ಕೊಟ್ಟ ೧೦ ನಿಮಿಷ ಮುಗಿಯಿತು ನೀವು ಮುಕ್ತಾಯ ಮಾಡಿ.

ಶ್ರೀ ಎಸ್. ಬಂಗಾರಪ್ಪ.—ನಿಮ್ಮ ಕೃಪಾಕಟಾಕ್ಷ ನನ್ನ ಮೇಲೆ ಜಾಸ್ತಿ ಇರಲಿ.

ಅಧ್ಯಕ್ಷರು.—ಇದು ಪ್ರಿಲಿಮಿನರಿ ವಿಚಾರ ಅಷ್ಟೇ.

ಶ್ರೀ ಎಸ್. ಬಂಗಾರಪ್ಪ.—ಆದ್ದರಿಂದ ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಯವರು ಆಡಿರುವ ಮಾತು, ನ್ಯಾಯಸಮ್ಮತವಾಗಿ ನಡೆಯುವ ತನಿಖೆಯನ್ನು ಅಡ್ಡಾದಿಡ್ಡಿಗೆ ಹೋಗಿಸುವ ಮಾತು. ನ್ಯಾಯ ಹೊರಕ್ಕೆ ಬರುವಲ್ಲಿ ಅಡ್ಡಿಯಾಗುವ ಮಾತನ್ನು ಮುಖ್ಯಮಂತ್ರಿಗಳು ಆಡಿದ್ದಾರೆ. ಉಳಿದ ವಿಚಾರಗಳನ್ನು ನಮ್ಮ ನಾಯಕಿಯವರು ಹೇಳಿದ್ದಾರೆ. ಇನ್ನು ಮುಂದೆ ಈ ಮಾತನ್ನು ನೀವು ಆಡುತ್ತಾ ಹೋದರೆ ನಿಮಗಿರುವ ನೈತಿಕ ಹಕ್ಕು ಮತ್ತು ಹೊಣೆಗಾರಿಕೆಯ ಆಧಾರದ ಮೇಲೆ, ಜನತೆಗೆ ನೀವು ನಿಷ್ಪಕ್ಷಪಾತ ತನಿಖೆ ಮಾಡಿ ನೈಜ ಸತ್ಯವನ್ನು ಇಡುವುದರಲ್ಲಿ ಮೂಲಭೂತವಾಗಿ, ಸಂಪೂರ್ಣವಾಗಿ ನೀವು ವಿಫಲವಾಗಿದ್ದೀರೆಂಬ ಆಪಾದನೆಯನ್ನು ನಾನು ರಾಜ್ಯ ಸರ್ಕಾರದ ಮೇಲೆ ಹೊರಿಸುತ್ತೇನೆ. ನೀವು ಆಡಿರುವ ಮಾತು ಕಾನೂನಿಗೆ ವಿರೋಧ ತನಿಖೆಗೆ ವಿರುದ್ಧ ನ್ಯಾಯಕ್ಕೆ ವಿರೋಧ, ನಿಮ್ಮಂಥವರು ಈ ಖುರ್ಚಿಯಲ್ಲಿ ಕುಳಿತುಕೊಳ್ಳುವುದಕ್ಕೆ ಎಳ್ಳಷ್ಟೂ ಯೋಗ್ಯತೆ ಇಲ್ಲ. You have no moral right to continue as the Chief Minister. You have no right to remain in that Chair. You must resign and get out. What right have you got to sit here ?

(*Interruption*)

ಶ್ರೀ ಡಿ.ಟಿ. ಜಯಕುಮಾರ್.—ಇದು...

(ಗೊಂದಲ)

ಅಧ್ಯಕ್ಷರು.—ಇದಾವುದೂ ರೆಕಾರ್ಡಿಗೆ ಹೋಗಬಾರದೆಂದು ನಾನು ಹೇಳಬೇಕಾಗುತ್ತದೆ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಇವರು ಕಾಂಗ್ರೆಸ್ ಸರ್ಕಾರದ ಮೇಲೆ, ಸಿ.ಬಿ.ಐ. ಸಂಸ್ಥೆ ಮೇಲೆ ಗೂಬೆ ಕೂರಿಸುವ ಕೆಲಸ ಮಾಡಿದ್ದಾರೆ.

(ಗೊಂದಲ)

MR. SPEAKER.—It will not be recorded. I have given you maximum time. ನೀವು ಹೇಳುತ್ತಾ ಹೇಳುತ್ತಾ ಹಳಿ ತಪ್ಪಿದಿರಿ.

೧-೩೦ ಪಿ.ಎಂ.

ಶ್ರೀ ಎಸ್. ಬಂಗಾರಪ್ಪ.—ಇವರೇ ಹಳಿ ತಪ್ಪಿರಬೇಕಾದರೆ ಮಾನ್ಯ ಸದಸ್ಯರು ಹಳಿ ತಪ್ಪಿದರೆ ಏನೂ ಆಶ್ಚರ್ಯವಿಲ್ಲ. ಅದಕ್ಕೆ ನಾವೂ ಕೂಡ ಸೇರಿ ಕೊಂಡಿದ್ದೇವೆ.

(ಗೊಂದಲ)

ಅಧ್ಯಕ್ಷರು.—ನೀವು ೧೫ ನಿಮಿಷ ತೆಗೆದುಕೊಂಡಿದ್ದೀರಿ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಜಾಲಪ್ಪನವರು ಏನು ಹೇಳಿಕೆ ಕೊಡುತ್ತಿದ್ದಾರೆ ಅದು ಅವರ ಅಭಿಪ್ರಾಯವಿರಬಹುದು. ಸಿ.ಬಿ.ಐ. ಬಗ್ಗೆ ಮಾಡಿರತಕ್ಕಂತಹ ಆಪಾದನೆ, ಕಾಂಗ್ರೆಸ್ ಪಕ್ಷದ ಮೇಲೆ ಮಾಡಿರತಕ್ಕಂತಹ ಆಪಾದನೆ ಹಾಗೂ ರಾಜ್ಯಸಭಾ ಚುನಾವಣೆಗೆ ಸಂಬಂಧಪಟ್ಟಂತಹ ಆಪಾದನೆಯನ್ನು ನಾನು ಅಲ್ಲಗಳೆಯುತ್ತೇನೆ, ಇದರ ಬಗ್ಗೆಯೂ ಕೂಡ ಚರ್ಚೆಯಾಗಬೇಕು. ನಿಯಮ ೩೧೫ರ ಪ್ರಕಾರ ಇದು ಡಿಬೇಟಬಲ್ ಮ್ಯಾಟರ್ ಅಲ್ಲ ಇದನ್ನು ತರಬಾರದೆಂದು ಇದ್ದರೂ ಕೂಡ ತಾವು ಅವಕಾಶ ಮಾಡಿಕೊಟ್ಟಿದ್ದೀರಿ. ಅದಕ್ಕೆ ಏಕೆ ಅವಕಾಶ ಮಾಡಿಕೊಟ್ಟಿದ್ದೀರಿ ?

ಅಧ್ಯಕ್ಷರು.—ನಿಮ್ಮ ಹಕ್ಕನ್ನು ಮೊಟಕು ಮಾಡಬಾರದೆಂದು......

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಈ ಆಪಾದನೆಯನ್ನು ಅಲ್ಲಗಳೆಯುತ್ತಾ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ.—ಇದು ಕರ್ನಾಟಕದ ಇತಿಹಾಸದಲ್ಲಿ ಅತ್ಯಂತ ಶೋಚನೀಯ ಹಾಗೂ ದುರಂತವೆಂದು ಹೇಳುತ್ತಾ ಅದನ್ನು ಇಲ್ಲಿ ಇವತ್ತು ಪ್ರಸ್ತಾಪಿಸಬೇಕಾದಂತಹ ದೌರ್ಭಾಗ್ಯ ನನ್ನ ಪಾಲಿಗೆ ಹಾಗೂ ಅನೇಕ ಮಾನ್ಯ ಸದಸ್ಯರ ಪಾಲಿಗೆ ಬಂದಿದೆ. ಇದರ ಬಗ್ಗೆ ಕೆಲವು ಮಾತುಗಳನ್ನು ಮಾತ್ರ ನಾನು ಇಲ್ಲಿ ಹೇಳುತ್ತೇನೆ. ನಮ್ಮ ಕರ್ನಾಟಕ ರಾಜ್ಯದ ಪೋಲೀಸರಿಗೆ ದೊಡ್ಡ ಪರಂಪರೆ ಇದ್ದು, ಇಡೀ ರಾಷ್ಟ್ರದಲ್ಲಿ ಅತ್ಯಂತ ಹಿರಿಯ ಸಾಲಿಗೆ ಶ್ರೇಷ್ಠ ಪರಂಪರೆಗೆ ಸೇರಿದಂತಹ ಒಂದು ಪೋಲೀಸ್ ಇಲಾಖೆಯಾಗಿದೆ. ಆದರೆ ಬೆರಳೆಣಿಕೆಯಲ್ಲಿ ಮಾಡಿದಂತಹ ಕೆಲವರ ಅಕೃತ್ಯ ಅಥವಾ ಕೆಲವು ಕೆಲಸವೇನಿದೆ ಅಥವಾ ಪತ್ರಿಕೆಯಲ್ಲಿ ಏನು ಬಂದಿದೆ, ಕೋರ್ಟಿನಲ್ಲಿ ಏನು ಬಂದಿದೆ...

ಶ್ರೀ ಜೀವರಾಜ್ ಆಳ್ವ.—ಅಕೃತ್ಯ ಅಥವಾ ಕೆಲವು ಕೆಲಸವೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. Unless it is proved that he is guilty, how can you say that ?

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಜಾಲಪ್ಪನವರು ಇನ್ನೋಸೆಂಟ್ ಎಂದು ಹೇಳಬೇಕಿತ್ತೇ? Why you get excited ?

(ಗೊಂದಲ)

ಶ್ರೀ ಜೀವರಾಜ್ ಆಳ್ವ.—ಇಂತಹ ಮಾತು ತಮ್ಮಂತಹ ಹಿರಿಯ ಸದಸ್ಯರಿಂದ ಬರಬಾರದಾಗಿತ್ತು. ಬೇರೆ ಸದಸ್ಯರಿಂದ ಬಂದಿದ್ದರೆ ಪರವಾಗಿಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ.—ಯಾರ ಹೆಸರೂ ಹೇಳಲಿಲ್ಲ ಬೆರಳೆಣಿಕೆಯಲ್ಲಿ ಎಂದು ಹೇಳಿದ್ದೇನೆ.

(ಗೊಂದಲ)

SRI JEEVARAJ ALVA.—It is not right.

ಶ್ರೀ ಎಂ. ವೀರಪ್ಪ ಮೊಯಿಲಿ.—ಇದು ಸರಕಾರದ ನೀತಿ ಅಭಿಪ್ರಾಯವೆಂದು ಇಟ್ಟುಕೊಳ್ಳಿ. ಅವರು ನಿರಪರಾಧಿಗಳೆಂದು ನೀವೇ ತೀರ್ಪು ಕೊಡುವುದಿದ್ದರೆ ಇಲ್ಲವೇ ತೀರ್ಪು ಕೊಡುವುದು ನಮ್ಮ ಜನ್ಮ ಸಿದ್ಧ ಹಕ್ಕು ನ್ಯಾಯಾಲಯದ್ದು ಅಲ್ಲವೆಂದು ಹೇಳಿದರೆ ಅದು ನಿಮಗೇ ಬಿಟ್ಟದ್ದು ಅದಕ್ಕೆ ನಾನೇನೂ ಹೇಳುವುದಿಲ್ಲ. ನಾನು ಇನ್ನೂ ಒಂದು ವಾಕ್ಯ ಪೂರ್ತಿ ಮಾಡಲಿಲ್ಲ ತಾವು ಮಧ್ಯೆ ಎದ್ದು ಹೇಳುತ್ತಿದ್ದೀರಿ ಕೋರ್ಟ್ ಮುಖಾಂತರ, ಪತ್ರಿಕೆಯ ಮುಖಾಂತರ ಏನು ಬಂದಿದೆ ಅದನ್ನು ಪ್ರಸ್ತಾಪ ಮಾಡುತ್ತಿದ್ದೆ. ಇದನ್ನು ಪ್ರಸ್ತಾಪ ಮಾಡುವುದಕ್ಕೆ ನಾನೂ ಕೂಡ ಪಶ್ಚಾತ್ತಾಪ ಪಡುತ್ತಿದ್ದೇನೆ. We are not happy about this incident. None of us. We feel hurt when we saw in the newspaper that the Home Minister is involved.

SRI M RAGHUPATHY.—please don't say that he is involved. "alleged" you say. You are an Advocate. Please don't go by newspaper. I request you not to go by newspapers.

ಶ್ರೀ ಎಂ. ವೀರಪ್ಪ ಮೊಯಿಲಿ.—ಮತ್ತೇನು ಇದೆ ನಮಗೆ. ಇದೆಲ್ಲವನ್ನು ನೋಡಿ.

ಅಧ್ಯಕ್ಷರು.—ನೀವು ಡೀಟೈಲ್ಸ್‌ಗೆ ಹೋಗಬೇಡಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ನಾನೇನೂ ಹೇಳಲಿಕ್ಕೆ ಪ್ರಯತ್ನ ಮಾಡಲಿಲ್ಲ ಅವರೇ ನಮ್ಮನ್ನು ಪ್ರವೋಕ್ ಮಾಡುತ್ತಿದ್ದಾರೆ. This is my difficulty. I don't get provoked. "Jalappa engineered murder"-CBI. This is the representation before the Court. It is not my representation before the Court or the public. ನಾವು ಹೇಳಲಿಲ್ಲ. ಕಾಂಗ್ರೆಸ್ ನಾಯಕರಾಗಲೀ ಸದಸ್ಯರಾಗಲೀ ಹೇಳಿಲ್ಲ. ಸಿಬಿಐ. ನಿಷ್ಪಕ್ಷಪಾತವಾಗಿ ತನಿಖೆ ಮಾಡಲಿ ಎಂದು ಇದ್ದವರು ನಾವು. You can get any statement from anyone.

ಅಧ್ಯಕ್ಷರು.—ಮಾನ್ಯ ವೀರಪ್ಪನವರೇ ವಿಷಯವನ್ನು ನೀವು ಕಾಂಟ್ರೊವರ್ಸಿ ಮಾಡುವುದಕ್ಕೆ ಹೋಗಬೇಡಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ತಾವು ದಯಮಾಡಿ ಆ ಕಡೆಯವರಿಗೆ ಕಡಿವಾಣ ಹಾಕಿ.

(ಗೊಂದಲ)

MR. SPEAKER.—You are a Senior Advocate and you know the legal matters

ಶ್ರೀ ಎಂ. ವೀರಪ್ಪ ಮೊಯಿಲಿ.—ಈ ಪ್ರಕರಣದ ಬಗ್ಗೆ ಚರ್ಚೆಗೆ ನಾನು ಹೋಗುವುದಿಲ್ಲ, ವಿವರಕ್ಕೂ ನಾನು ಹೋಗುವುದಿಲ್ಲ. ಅದು ಪ್ರಸ್ತುತ ಅಲ್ಲ, ಈ ಕೆಲಸ ಅವರು ಮಾಡಬಾರದು, ನಾವು ಮಾಡಬಾರದು. I am not going to give any details about it.

ಶ್ರೀ ಜೆ.ಹೆಚ್. ಪಟೇಲ್.—ಮಾನ್ಯ ರಘುಪತಿಯವರು ಹೇಳಿದ್ದುದು ಏನೆಂದರೆ ನೀವು ಪೇಪರನ್ನು ಓದಿ Home Minister is involved ಎಂದು ಹೇಳಿದ್ದೀರಿ. You can say – "He alleged to have been involved". Till it is proved, he is alleged to have been involved.

ಶ್ರೀ ಎಂ. ವೀರಪ್ಪ ಮೊಯಿಲಿ.—ಇದು ಏನಾಗುತ್ತದೆ ಎಂದರೆ ನಾನು ಏನೂ ಹೇಳಲಿಲ್ಲ. "There may be some vested interests with them against Jalappa" ಇದನ್ನು ಶ್ರೀ ಜೀವರಾಜ ಆಳ್ವ ಮತ್ತು ರಘುಪತಿಯವರು ಸಬ್‌ಸ್ಟಿಟ್ಯೂಟ್ ಮಾಡುತ್ತಿದ್ದಾರೆ.

ಶ್ರೀ ಡಿ.ಟಿ. ಜಯಕುಮಾರ್.—ಇಲ್ಲಿ ಒಬ್ಬರಿಗೊಬ್ಬರು ಕಂದು ಹಾಕುವುದು ಬೇಡಿ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.— ಕರ್ನಾಟಕದ ರಾಜಕೀಯ ನಾವೆಲ್ಲಾ ನೋಡಿದ್ದೇವೆ. ಯಾರು ಯಾರನ್ನು ಯಾವ ಯಾವ ಸಂದರ್ಭದಲ್ಲಿ ಬಲಿಪಶು ಮಾಡುತ್ತಾರೆ, ಏತಕ್ಕೆ ಮಾಡುತ್ತಾರೆ? ಇನ್ನೆಲ್ಲಾ ನಮಗೆ ಗೊತ್ತಿದೆ. ದಯಮಾಡಿ ನಮಗೆ ನೀವು ಏನೂ ಹೇಳುವುದಕ್ಕೆ ಹೋಗಬೇಡಿ. ಇದೇನು ಹೊಸ ರಾಜಕೀಯ ಅಲ್ಲ. ಸಿ.ಬಿ.ಐ. ಪ್ರಕರಣದ ಬಗ್ಗೆ ನಾನು ಹೇಳುವುದಿಲ್ಲ. ಇದು ಒಂದು ಬಹಳ ಸರಳವಾದಂಥ ವಿಚಾರ. ಸಿ.ಬಿ.ಐ ಇಲ್ಲಿ ಪ್ರವೇಶ ಏತಕ್ಕೆ ಆಯಿತು ಎನ್ನುವುದು ಬಹಳ ಮುಖ್ಯ. ರಷೀದ್ ವಕೀಲರು ಕೇರಳದವರು. ಕೇರಳದ ನಿವಾಸಿ. ಅವರು ವಕಾಲತ್ತಿಗಾಗಿ ಇಲ್ಲಿಗೆ ಬಂದಿದ್ದರು. The alleged murder has taken place.

ಶ್ರೀ ಡಿ. ಟಿ. ಜಯಕುಮಾರ್.— ಅಧ್ಯಕ್ಷರೇ, ಇದೆಲ್ಲಾ ಡೀಟೈಲ್ಸ್ ಬೇಕಿಲ್ಲ.

(ಗೊಂದಲ)

ಅಧ್ಯಕ್ಷರು.— ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

SRI M. VEERAPPA MOILY.— The alleged murder has taken place in Karnataka His body was found in Tamil Nadu. ಇದರಲ್ಲಿ ಎಷ್ಟು ಸ್ಟೇಟ್‌ಗಳು ಇನ್‌ವಾಲ್ವ್ ಆದುವು ಎಂದರೆ, ಕೇರಳ, ಕರ್ನಾಟಕ ಮತ್ತು ತಮಿಳುನಾಡು. ಇನ್‌ವೆಸ್ಟಿಗೇಷನ್ ಈ ಕೇಸ್ ಮಾಡಬೇಕಾದರೆ ಕರ್ನಾಟಕದ ಪೋಲೀಸ್ ಸಿ.ಓ.ಡಿ. ಮಾಡಿದರೆ. they cannot expect that much of co-operation from these people, because 3 police forces involved in this, The body was found in Tamil Nadu. ಸಿ.ಓ.ಡಿ. ಎನ್‌ಕ್ವೈರಿ ಮಾಡಿದರೆ ಅದು ಆಗುವುದಿಲ್ಲ. ಸಿ.ಬಿ.ಐ ಎನ್‌ಕ್ವೈರಿ ಆಗಬೇಕು. Any person who knows about the Police administration, he will automatically think of CBI enquiry. Some force which is not connected with these three Police forces will have to do it, ಇಂಡಿಪೆಂಡೆಂಟ್ ಯಾವುದು ನಮಗೆ ಇದೆ. ? ನಮ್ಮಗಳಿಗೆ ರಾಷ್ಟ್ರೀಯ ಪೋಲೀಸ್ ಎಂದರೆ ಸಿ.ಬಿ.ಐ. ಆ ದಿವಸ ೩೦–೮–೧೯೮೭ರಲ್ಲಿ ನಾವು ಮತ್ತು ಖರ್ಗೆಯವರು, ಮಾನ್ಯ ಮುಖ್ಯಮಂತ್ರಿಗಳನ್ನು ಒತ್ತಾಯ ಮಾಡಿದಾಗ ಸಿ.ಬಿ.ಐ. ಎನ್‌ಕ್ವೈರಿಗೆ ಇದನ್ನು ಒಪ್ಪಿಸಿದ್ದೇನೆ ಎಂದು ಇಲ್ಲಿ ಹೇಳಿಕೆಯನ್ನು ಕೊಟ್ಟಿದ್ದಾರೆ. ಶ್ರೀ ಜಾಲಪ್ಪನವರೇ, ನಾನು ವಾಲಂಟರಿಯಾಗಿ ಸ್ಟೇಟ್‌ಮೆಂಟ್ ಮಾಡಿದೆ ಎಂದು ಹೇಳಿದ್ದಾರೆ It is not exactly true to facts ಏಕೆಂದರೆ ಕೇರಳದಲ್ಲಿ ಅವರು ಅನೌನ್ಸ್ ಮಾಡಿದ್ದಾರೆ.

ಅಧ್ಯಕ್ಷರು.— ಅವರು ಹೇಳಿದ್ದರ ಮೇಲೆ ಡಿಬೇಟ್ ಬೇಡ.

ಶ್ರೀ ಎಂ. ವೀರಪ್ಪ ಮೊಯಿಲಿ.— ಅವರು ಹೇಳಿದ ಮೇಲೆ ಅಲ್ಲ ಕೇರಳ ಅಸೆಂಬ್ಲಿಯಲ್ಲಿ ಅಲ್ಲಿನ ಮುಖ್ಯಮಂತ್ರಿಗಳು ಇದನ್ನು ಸಿ.ಬಿ.ಐ. ಎನ್‌ಕ್ವೈರಿಗೆ ಆರ್ಡರ್ ಮಾಡುತ್ತೇವೆಂದು ಘೋಷಣೆ ಮಾಡಿದ್ದಾರೆ. ಅವರು ಒತ್ತಾಯ ಮಾಡಿದ ಮೇಲೆ ಸನ್ಮಾನ್ಯ ಕರ್ನಾಟಕದ ಮುಖ್ಯಮಂತ್ರಿಗಳು ಆಗುವುದಿಲ್ಲ ಎಂದು ಹೇಳತಕ್ಕ ಪ್ರಶ್ನೆ ಬರುವುದೇ ಇಲ್ಲ. ಆದ್ದರಿಂದ ಒಳ್ಳೆಯ ಕೆಲಸ ಮಾಡಿದ್ದೀರಿ, ಇದು ಹೊಸದೇನೂ ಅಲ್ಲ. ಶ್ರೀ ಸಿದ್ದರಾಮೇಶ್ವರ ಮರ್ಡರ್ ಕೇಸ್‌ನಲ್ಲಿ ಸಹ ಇದೇ ಸರ್ಕಾರ ಎನ್‌ಕ್ವೈರಿ ಮಾಡಿದ್ದುದು, opposition ruled states ನಲ್ಲಿ ಮಾಡಿವೆ. ಇದೇ ಪ್ರಕಾರ ಬೇರೆ ಬೇರೆ ಸರ್ಕಾರಗಳು ಕೂಡ ಸಿ.ಬಿ.ಐ. ಎನ್‌ಕ್ವೈರಿ ಮಾಡಿವೆ. ಇವೊತ್ತು ಮಾನ್ಯ ಮುಖ್ಯಮಂತ್ರಿಗಳು ಸಾರ್ವಜನಿಕರಲ್ಲಿ ಅಥವಾ ರಾಷ್ಟ್ರದಲ್ಲಿ ಏನು ಒಂದು ಪ್ರಶ್ನೆ ಇಟ್ಟಿದ್ದಾರೆ, ಇದರಿಂದ ಏನು ಆಗುತ್ತದೆ ಅಂದರೆ there is a threat to the federal system itself, by the no less a person than a Chief Minister. ಬಹುಶಃ ರಾಷ್ಟ್ರದ ಸಾರ್ವಭೌಮತ್ವಕ್ಕೆ, ಇನ್ನು ಮುಂದೆ ಪ್ರಶ್ನೆ ಹಾಕಬಹುದು, which is this Central Government ? ಎಂದು ಪ್ರಶ್ನೆಯನ್ನು ಹಾಕುತ್ತಾರೆ.

ಅಧ್ಯಕ್ಷರು.— ಮಾನ್ಯ ವೀರಪ್ಪನವರೇ ೧೦ ನಿಮಿಷ ಆಯಿತು. ತಾವು ಮುಕ್ತಾಯ ಮಾಡಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಒಂದು ಸ್ಟೇಟ್‌ಮೆಂಟ್ ಕೊಡುತ್ತಾ "ಮೇಲು ನೋಟಕ್ಕೆ ಯಾವ ರೀತಿ ಕಾಣುತ್ತದೆ. ಅದಕ್ಕಿಂತಲೂ ಹೆಚ್ಚು ನಿಗೂಢತೆ ಇದರಲ್ಲಿ ತುಂಬಿದೆ ಎಂದು ಕಾಣುತ್ತದೆ" ಎಂದು ಹೇಳಿದ್ದಾರೆ. ನಿಗೂಢತೆ ಅಂದಮೇಲೆ It requires a proper indepth investigation. ಈಗ ಮರ್ಡರ್ ಆದಮೇಲೆ ಕೂಡ ಸಿ.ಓ.ಡಿ. ಯವರು ಯಾರನ್ನಾದರೂ ಅರೆಸ್ಟ್ ಮಾಡಿದ್ದಾರೆಯೇ ? according to us none is arrested. Investigation department never moved an inch. ಇವತ್ತು ಸಿ.ಓ.ಡಿ. ಯವರು ಕೆಲಸ ಮಾಡುತ್ತಿದ್ದಾರೆ. ಅವರಿಗೂ ಸಹ ಲಿಮಿಟೇಷನ್ ಇರಬಹುದು. off course, they may have their limitations. ಈಗ ಸಿ.ಬಿ.ಐ. ಗೆ ನಿಗೂಢತೆ ಇದೆ ಎಂದು ಹೇಳಿದ ಮೇಲೆ ಇದರಲ್ಲಿ ಎಲ್ಲರೂ ಸೇರಿ ಪ್ರಯತ್ನ ಮಾಡೋಣ, ಎಂದು ಸನ್ಮಾನ್ಯ ಮುಖ್ಯಮಂತ್ರಿಗಳು ಅವೊತ್ತು ಹೇಳಿದ್ದರೆ he should have extended his co operation... ಸಿ.ಬಿ.ಐ. ನವರು ಇವೊತ್ತು ರಾತ್ರಿ ಬೆಳಗ್ಗೆ ಆಗುವುದರೊಳಗೆ ಇನ್‌ವೆಸ್ಟಿಗೇಷನ್ ಮಾಡಿ ಈ ತರಹ ಯಾರನ್ನೂ ಅರೆಸ್ಟ್ ಮಾಡುತ್ತಾ ಇಲ್ಲ. They have taken not less than 8 to 9 months to go into the matter, to make a thorough enquiry. They have done a commendable job in finding out the truth and the ultimate truth. ಇವೊತ್ತು ಒಂದು ವೇಳೆ ಇನ್‌ವೆಸ್ಟಿಗೇಷನ್ ಸರಿಯಿಲ್ಲ ಎಂದರೆ, the facts are not properly investigated ಎಂದು ಹೇಳಿದರೆ, Chief Minister ಇದ್ದಾರೆ ಗೃಹ ಮಂತ್ರಿಗಳೂ ಇದ್ದಾರೆ, he should have stated, this is the source of information. He has been murdered, it is true, the body was found in Tamil Nadu he belongs to Kerala it is true. he should have taken some initiative, to help the CBI. ಸಿ.ಬಿ.ಐ ತಮಗೆ ಗೊತ್ತಿದೆ ಎಂದು ಹೇಳಿ, ಅದು ಪತ್ರಿಕೆಯಲ್ಲಿಯೂ ಬಂದಿದೆ. ನಿಮ್ಮ ವಕೀಲರೂ ಹೇಳಿದ್ದಾರೆ. ಈ ವಿಚಾರ ಎಲ್ಲಾ ನಮಗೆ ಗೊತ್ತಿದೆ. why did you not disclose. ಈಗ ತಾವು ಹೇಳಿದಿರಿ, ರಾಜ್ಯಸಭೆಗೆ ಬರುವಾಗ ಮಾತ್ರ ಮಾಡಬೇಕು ಅಥವಾ ತಮ್ಮ ಪಕ್ಷದಲ್ಲಿ ಸ್ಪ್ಲಿಟ್ ಬಂದಾಗ ಜಾಲಪ್ಪನವರ ಹೆಸರನ್ನು ಹೇಳಬೇಕು ಎಂಬುದು ನಿಮ್ಮ ಅಭಿಪ್ರಾಯ ಇತ್ತೇ ?

ಅಧ್ಯಕ್ಷರು.- ವೀರಪ್ಪನವರೆ, ಟೈಮ್ ಆಯಿತು, ಮುಕ್ತಾಯ ಮಾಡಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಏಕೆಂದರೆ ವಿಷಯಂ ಅಷ್ಟು ಇತ್ತು. ಯಾಕೆಂದರೆ ಜಾಲಪ್ಪನವರು ಹೇಳಿದರು, ರಾಜ್ಯ ಸಭೆಗೆ ಎಲೆಕ್ಷನ್ ಬರುತ್ತಿದೆ ನಮ್ಮ ಮೇಲೆ ಗೂಬೆ ಕೂರಿಸಲು. ನಮ್ಮ ಸರ್ಕಾರದ...

ಅಧ್ಯಕ್ಷರು.—ಮಾನ್ಯ ವೀರಪ್ಪನವರೇ...

ಶ್ರೀ ಎಂ. ವೀರಪ್ಪ ಮೊಯಿಲಿ.—ತಮ್ಮ ಜೊತೆಯಲ್ಲಿಯೇ ಪಕ್ಷವನ್ನು ಮುಳುಗಿಸಬೇಕೆಂದರೆ ಅದಕ್ಕೆ ಕಾಂಗ್ರೆಸ್‌ನವರ ಆಂತಕ ಏನೂ ಇಲ್ಲ.

ಅಧ್ಯಕ್ಷರು.—ಮಾನ್ಯ ವೀರಪ್ಪನವರೇ...

ಶ್ರೀ ಎಂ. ರಘುಪತಿ.—ಆ ಬಗ್ಗೆ ಇವರಿಗೆ ಏಕೆ ಚಿಂತೆ. ಇವರ ಪಕ್ಷದಲ್ಲಿಯೇ ಒಗ್ಗಟ್ಟು ಇಲ್ಲ. ಮುಂದೆ ಕುಳಿತಿರುವವರಲ್ಲಿ ಒಬ್ಬರನ್ನು ಕಂಡರೆ ಒಬ್ಬರಿಗೆ ಆಗುವುದಿಲ್ಲ,

SRI M. VEERAPPA MOILY.—Chief MIuister had the entire police force at his command. If he is in possession of any evidence, what prevented him, what prevented the Government, what prevented the police force, to provide necessary assistance?

SRI A. LAKSHMI SAGAR.—Sir, I request the hon'ble Member to yield.

SRI M. VEERAPPA MOILY.—He has miserably failed. Whether he had any vested interest to shield anyone?

ಅಧ್ಯಕ್ಷರು,—ಮಾನ್ಯ ವೀರಪ್ಪನವರೇ ತಾವು ಮುಕ್ತಾಯ ಮಾಡಿ, ಮಾನ್ಯ ಲಕ್ಷ್ಮೀಸಾಗರ್‌ರವರು ಏನು ಹೇಳುತ್ತಾರೋ ನೋಡೋಣ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಮಾನ್ಯ ವೀರಪ್ಪಮೊಯಿಲಿ ಅವರು ನಿಲುವಳಿ ಸೂಚನೆಗೆ ಸಂಬಂಧಪಟ್ಟಂತೆ ತಮ್ಮ ಮನವೊಲಿಸಲು ಪೂರ್ವಭಾವಿಯಾಗಿ ಕೆಲವೊಂದು ವಿಚಾರಗಳನ್ನು ಪ್ರಸ್ತಾಪ ಮಾಡುವ ಹಂತದಲ್ಲಿ ಯಾವ ಯಾವ ವಿಷಯಗಳನ್ನು ಅದಕ್ಕೆ ಪೂರಕವಾಗಿ ಹೇಳಬೇಕೋ ಅಷ್ಟನ್ನು ಮಾತ್ರ ಹೇಳದೆ ಅವರು ಎಲ್ಲಾ ವಿಷಯಗಳನ್ನು ಹೇಳಲು ಹೊರಟ್ಟಿದ್ದಾರೆ. ಅವರು ಇನ್ನೂ ತಮ್ಮ ಚರ್ಚೆಯನ್ನು ಮುಗಿಸಿಲ್ಲ. ಆದರೆ ಅವರ ವಾದ ಸರಣಿಯನ್ನು ಕೇಳಿದ ಮೇಲೆ ಮತ್ತು ತಾವು ಏನಾದರೂ ಈ ನಿಲುವಳಿ ಸೂಚನೆಗೆ ಅನುಮತಿ ಕೊಟ್ಟರೆ ಅದರ ಮೇಲೆ ಮಾತನಾಡಲು ಅವರಿಗೆ ಬೇರೆ ಏನೂ ವಿಷಯಗಳು ಉಳಿದಿಲ್ಲ ಎಂದು ಕಾಣುತ್ತಿದೆ. ಈ ಹಂತದಲ್ಲಿ ನಿಲುವಳಿ ಸೂಚನೆಗೆ ಪೂರಕವಾಗಿ ಕೆಲವು ವಿಷಯಗಳನ್ನು ಹೇಳಬಹುದೇ ಹೊರತು ವಿಷಯದ ವಾದ ಸರಣಿಗೆ ಅವಕಾಶ ಇಲ್ಲ. ಆದ್ದರಿಂದ ಈ ಹಂತದಲ್ಲಿ ತಮ್ಮ ಮನವೊಲಿಸಲು ಅಗತ್ಯವಾದಷ್ಟು ವಿಷಯಗಳನ್ನು ಮಾತ್ರ ತಮ್ಮ ಮುಂದಿಡಬೇಕಾಗುತ್ತದೆ. ಆದ್ದರಿಂದ ಚರ್ಚೆಯನ್ನು ಇಷ್ಟಕ್ಕೆ ಸೀಮಿತಗೊಳಿಸಬೇಕೆಂದು ತಮ್ಮ ಮೂಲಕ ಅವರಲ್ಲಿ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಹೇಳಿದ್ದನ್ನು ತಾವು ಕೇಳಿದಿರಿ. ಈಗ ತಾವು ಇಷ್ಟಕ್ಕೇ ಮುಕ್ತಾಯ ಮಾಡಿ.

ಶ್ರೀ ಎಂ. ವೀರಪ್ಪಮೊಯಿಲಿ.—ಇಷ್ಟರಹರೆಗೆ ತಮ್ಮನ್ನು ಮನವೊಲಿಸಲು ನನಗೆ ಸಾಧ್ಯವಾಗದಿದ್ದರೆ ನನ್ನ ಹತ್ತಿರ ಇರುವಂತಹ ಇನ್ನಷ್ಟು ಮಾಹಿತಿಗಳನ್ನು ತಮ್ಮ ಮುಂದಿಡಲು ಪ್ರಯತ್ನ ಮಾಡುತ್ತೇನೆ. ಈ ಕೇಸ್ ಬಗ್ಗೆ ಹೇಳಬೇಕೆಂದರೆ, ಮುಖ್ಯವಾಗಿ ಮೂಲಭೂತವಾದಂಥ ಈ ಸರ್ಕಾರದ ನೀತಿಯಿಂದಾಗಿ ಮತ್ತು ಮುಖ್ಯಮಂತ್ರಿಗಳ ಹೇಳಿಕೆಯಿಂದಾಗಿ ಏನು ಪರಿಸ್ಥಿತಿ ಉದ್ಭವವಾಗಿದೆ ಎಂದರೆ, ಇದು ಇಡೀ ಕಾನೂನು ವ್ಯವಸ್ಥೆಗೆ ಮಾರಕವಾಗಿದೆ. ಇಡೀ ರಾಷ್ಟ್ರದ ಏನು ಕೆಲವು ಪರಂಪರೆಗಳು ಇವೆ, ಏನು ಕಾನೂನು ವ್ಯವಸ್ಥೆಗಳು ಇವೆ, ಇದರ ಬಗ್ಗೆ ಪ್ರಶ್ನೆ ಮಾಡತಕ್ಕಂಥ ಪರಿಸ್ಥಿತಿ ನಮ್ಮ ರಾಜ್ಯದಿಂದ ಹೊರಟಿದೆ, ಇದಕ್ಕಿಂತ ದೊಡ್ಡ ದುರಂತ ಬೇರೆ ಇಲ್ಲ.

ಅಧ್ಯಕ್ಷರು.—ತಾವು ಮೆರಿಟ್ಸ್ ಬಗ್ಗೆ ಹೇಳುತ್ತಿದ್ದೀರಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮೊನ್ನೆಯವರೆಗೆ ಮಾನ್ಯ ಜಾಲಪ್ಪನವರು ಈ ರಾಜ್ಯದ ಗೃಹ ಮಂತ್ರಿಗಳಾಗಿದ್ದರು, ಅವರು ಈ ಕೇಸ್ ವಿಚಾರದಲ್ಲಿ ನಿರೀಕ್ಷಣಾ ಜಾಮೀನು ಕೇಳಿ ಅರ್ಜಿ ಸಲ್ಲಿಸಿದಾಗಲೂ ಸಹ ಗೃಹ ಮಂತ್ರಿಗಳಾಗಿದ್ದರು.

ಅಧ್ಯಕ್ಷರು.—ಈಗ ತಾವು ಮತ್ತೆ ಮೆರಿಟ್ಸ್ ಬಗ್ಗೆ ಹೇಳಲು ಹೊರಟಿದ್ದೀರಿ.

SRI M. VEERAPPA MOILY —I am not talking about merits. I never speak on merit I know my limitations When an anticipatory bail was sought he was a Home Minister. You should never forget about it. He has moved it. ಇವರ ನಿರೀಕ್ಷಣಾ ಜಾಮೀನಿಗೆ ಸಂಬಂಧಪಟ್ಟಂತೆ ಸೆಷನ್ಸ್ ಜಡ್ಜ್ ಅವರು ಏನು ಒಂದು ವಿಚಾರ ಹೇಳಿದರು, ಆ ಬಗ್ಗೆ ನಿಜಕ್ಕೂ ನಾಗರೀಕರಾದವರು ತಲೆ ತಗ್ಗಿಸಬೇಕು.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ನನ್ನದೊಂದು ಕ್ರಿಯಾಲೋಪವಿದೆ. ಏನೆಂದರೆ, ಈ ನಿರೀಕ್ಷಣಾ ಜಾಮೀನಿಗೆ ಸಂಬಂಧಪಟ್ಟಂತೆ ಹೇಳಬೇಕೆಂದರೆ, ರಿಜೆಕ್ಟ್ ಮಾಡಿದ ನಿರೀಕ್ಷಣಾ ಜಾಮೀನಿನ ಸಂಬಂಧದಲ್ಲಿ ಹೈಕೋರ್ಟ್‌ನಲ್ಲಿ ಅಪೀಲ್ ಮಾಡಿಕೊಳ್ಳಲಾಗಿದೆ. ಆದ್ದರಿಂದ ಇದರ ಮೆರಿಟ್ಸ್ ಮತ್ತು ಡೀಮೆರಿಟ್ಸ್ ಮೇಲೆ ಇಲ್ಲಿ ಚರ್ಚೆ ಮಾಡುವುದು ಸರಿಯಲ್ಲ. Whatever has been stated in the order it is under appeal.

ಈ ವಿಷಯ ಈಗ ಅಪೀಲ್‌ನಲ್ಲಿರುವುದರಿಂದ ಇದರ ಬಗ್ಗೆ ಇಲ್ಲಿ ಚರ್ಚೆ ಮಾಡುವುದು ಬೇಡ. ಆ ರೀತಿ ಏನಾದರೂ ಚರ್ಚೆ ಮಾಡಿದರೆ ಅದು ಜ್ಯುಡಿಷಿಯಲ್ ಪ್ರೊಸೀಡಿಂಗ್ಸ್ ಆಗುತ್ತದೆ. ತಾವೂ ಸಹ ಅಡ್ವೊಕೇಟ್ ಇದ್ದಿರಿ. ಆದ್ದರಿಂದ ಅಪೀಲ್ ಇರತಕ್ಕಂಥ ವಿಷಯದ ಮೇಲೆ ಇಲ್ಲಿ ಮಾತನಾಡುವುದು ಸರಿಯಲ್ಲ.

(ಸಭೆಯಲ್ಲಿ ಗೊಂದಲ)

MR. SPEAKER.—Mr. Moily, you are a senior advocate.

SRI M. VEERAPPA MOILY.—For a while you can also consider that I am speaking like a senior lawyer. Anticipatory bail application was moved by the Home Minister of a state to obstruct the investigation which is a most Heinous Crime, If that is so any Government can comit against criminal proceedings. I am telling you it as a senior Advocate.

SRI JEEVARAJ ALVA.—He is questioning the very provisions of the Indian Penal Code.

(Interruption)

SRI M. VEERAPPA MOILY.—Today the whole judiciary is questioning the necessity of availing the anticipatory bail by no less a person than the Home Minister who is gaurdian of law.

(ಗೊಂದಲ)

ಅಧ್ಯಕ್ಷರು.—ತಾವು ಮುಕ್ತಾಯ ಮಾಡಿ,

ಶ್ರೀ ಎಂ. ವೀರಪ್ಪಮೊಯಿಲಿ.—ಮತ್ತೊಂದು ಬಹಳ ಪ್ರಾಮುಖ್ಯವಾದಂಥ ವಿಚಾರ. ನಾವು ಇವತ್ತು ಕಾನೂನು ವ್ಯವಸ್ಥೆ ಬಗ್ಗೆ

ಶ್ರೀ ಎ. ಲಕ್ಷ್ಮೀಸಾಗರ್.—ಕಾನೂನು ವ್ಯವಸ್ಥೆ ಬಗ್ಗೆ ಬೇರೆ ಹೇಳುತ್ತಿದ್ದಾರೆ.

ಅಧ್ಯಕ್ಷರು.—ದುರುಪಯೋಗ ಏಕೆ ಮಾಡಿಕೊಳ್ಳುತ್ತೀರಿ, ೧೦ ಮಿನಿಟ್ ಅವಕಾಶ ಕೊಟ್ಟರೆ. ವಿತ್ ಇನ್ ದಿ ಟೈಂ ಲಿಮಿಟ್ ನೀವು ವಿಚಾರ ಹೇಳಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಧ್ಯೆ ಬೇರೆ ಸದಸ್ಯರು ಎದ್ದರೆ ತಾವು ಕಂಟ್ರೋಲ್ ಮಾಡಬೇಕು. ಮಧ್ಯದಲ್ಲಿ ಅವರು ಏಕೆ ಆತಂಕ ಮಾಡುತ್ತಾರೆ?

MR. SPEAKER.—You are simply pleading the case.

ಶ್ರೀ ಎಂ. ವೀರಪ್ಪಮೊಯಿಲಿ.—ಇವತ್ತು ಅದರ ಬಗ್ಗೆ ಒಂದು ಸೆಂಟೆನ್ಸ್ ಹೇಳಿದರೆ

ಅಧ್ಯಕ್ಷರು.—ಅವಕಾಶ ಕೊಟ್ಟರೆ ಆಗ ಹೇಳಿ,

ಶ್ರೀ ಎಂ. ವೀರಪ್ಪ ಮೊಯಿಲಿ.—ಇದು ಬಹಳ ಮುಖ್ಯವಾದ ವಿಷಯ, ಸನ್ಮಾನ್ಯ ಮುಖ್ಯಮಂತ್ರಿಗಳು ಡೆಲ್ಲಿಯಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಸನ್ಮಾನ್ಯ ಜಾಲಪ್ಪ ನವರನ್ನು ಬಂಧಿಸಿದರೆ ತಮ್ಮ ಸರ್ಕಾರ ಹೈಕೋರ್ಟ್ ಅಷ್ಟೇ ಅಲ್ಲ ಸುಪ್ರೀಂ ಕೋರ್ಟ್‌ಗೂ ಹೋಗುತ್ತದೆ ಎಂದು ಘೋಷಿಸಿದರು.

(ಗೊಂದಲ)

ಅಧ್ಯಕ್ಷರು.—ತಾವು ಮುಕ್ತಾಯ ಮಾಡುತ್ತೀರೋ ಇಲ್ಲವೋ ಇಲ್ಲದೇ ಹೋದರೆ ವರದಿಗಾರರಿಗೆ ರೆಕಾರ್ಡ್ ಮಾಡಬೇಡಿ ಎಂದು ಹೇಳಬೇಕಾಗುತ್ತದೆ. ಹತ್ತಲ್ಲ ಇಪ್ಪತ್ತು ಮಿನಿಟ್ ನಿಮಗೆ ಅವಕಾಶ ಕೊಟ್ಟಿದ್ದೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮಹಾವಕೀಲರಿಗೆ ಹೇಳುತ್ತೇನೆ. ಬಿಹಾರದಲ್ಲಿ ಅವರ ಪಕ್ಷದ ೩ ಜನ ಅಸೆಂಬ್ಲಿ ಸದಸ್ಯರು ಮರ್ಡರ್ ಅಪಾದನೆಗೆ ಒಳಗಾಗಿದ್ದಾರೆ. ಕೊಲೆ ಅಪಾದನೆಗೆ ಒಳಗಾದಂಥ ನಿಮ್ಮ ಪಕ್ಷದ ೩ ಸದಸ್ಯರು ಅಸೆಂಬ್ಲಿ ಸದಸ್ಯರಾಗಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಆದರೆ ಈ ರೀತಿ ಸರ್ಕಾರ ಮರ್ಡರ್ ಕೇಸ್ ಅಕ್ಯೂಸ್ಡ್‌ನ್ನು ಡಿಫೆಂಡ್ ಮಾಡುವುದಕ್ಕೆ ಹೋದಂಥ ಪ್ರಸಂಗ ಇಡೀ ವಿಶ್ವದಲ್ಲಿಲ್ಲ, ಇಡೀ ರಾಷ್ಟ್ರದಲ್ಲಿಲ್ಲ. ಇಡೀ ಜಗತ್ತಿನಲ್ಲಿಲ್ಲ.

(ಗೊಂದಲ)

ಶ್ರೀ ಎಂ. ರಘುಪತಿ.—ರಾಜಸ್ಥಾನದ ಮುಖ್ಯ ಮಂತ್ರಿ ಒಬ್ಬ ಶಾಸಕರನ್ನು ಕೊಲೆ ಮಾಡಿದ ಆಪಾದನೆಗೆ ಈಡಾಗಿದ್ದಾರೆ. ಇಂತಹ ನಿದರ್ಶನ ಪ್ರಪಂಚದ ಇತಿಹಾಸದಲ್ಲಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಬಿಹಾರದಲ್ಲಿ ೩ ಜನ ಮರ್ಡರ್ ಮಾಡಿದವರು ಸದಸ್ಯರಾಗಿದ್ದಾರೆ ಎಂದು ಹೇಳಿದರು. ಇವರು ಇನ್ನೂ ಒಬ್ಬರನ್ನು ಮಾಡಿಸಬೇಕು ಎಂದು ಇದ್ದಾರೆಯೋ?

ಅಧ್ಯಕ್ಷರು.—ಈಗ ತಾವು ಮುಕ್ತಾಯ ಮಾಡಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೆ, ರಷೀದ್ ಕೇಸ್‌ನಲ್ಲಿ ಸಿ.ಬಿ.ಐ. ನಡಳಿಕೆಯನ್ನು ಆತಂಕಕ್ಕೆ ಕೊಂಡು ಹೋಗತಕ್ಕಂಥದ್ದಕ್ಕೆ ಒಳಗಾದಂಥ ಗೃಹ ಮಂತ್ರಿಗಳನ್ನು ಸಂಪೂರ್ಣವಾಗಿ ರಕ್ಷಣೆ ಮಾಡತಕ್ಕಂಥ ಹೇಳಿಕೆಯನ್ನು ಬಹಿರಂಗವಾಗಿ ಕೊಟ್ಟು ಡಿಫೆಂಡ್ ಮಾಡುತ್ತೇನೆ ಎಂದು ಹೇಳತಕ್ಕಂಥ ಮುಖ್ಯ ಮಂತ್ರಿಗಳು ಯಾರಿದ್ದಾರೆ ಅವರು ಸಂಪೂರ್ಣ ನೈತಿಕ ಹೊಣೆಯನ್ನು ಜವಾಬ್ದಾರಿಯನ್ನು ಹೊತ್ತಿರುವಾಗ ಅವರು ಇವತ್ತು ರಾಜಿನಾಮೆ ಕೊಡಬೇಕಾಗುತ್ತದೆ. ಅಧಿಕಾರದಲ್ಲಿ ಉಳಿಯತಕ್ಕಂಥ ಯಾವ ನೈತಿಕತೆಯೂ ಅವರಿಗೆ ಇಲ್ಲ ಎಂದು ಹೇಳುತ್ತೇನೆ.

(ಗೊಂದಲ)

ಶ್ರೀ ಎಂ. ರಘುಪತಿ.—ಇವರಿಗೆ ಚಿನ್ನದ ತಟ್ಟೆಯಲ್ಲಿ ಇಟ್ಟು ಕೊಡುತ್ತೇವೆ ರಾಜೀನಾಮೆಯನ್ನು.

† ಶ್ರೀ ಕೆ. ಎಚ್. ಶ್ರೀನಿವಾಸ್.—(ಶಿವಮೊಗ್ಗ) ಮಾನ್ಯ ಅಧ್ಯಕ್ಷರೆ, ಪೂರ್ವಭಾವಿಯಾಗಿ ಈ ಒಂದು ವಿಷಯಕ್ಕೆ ಏನು ಹೆಸರಿಡಬೇಕೆಂದು ಗೊತ್ತಾಗುತ್ತಿಲ್ಲ. ರಶೀದ್ ಕೊಲೆ ಎಂದು ಕರೆಯಬೇಕೆ? ಜಾಲಪ್ಪನವರ ರಾಜೀನಾಮೆ ಎನ್ನಬೇಕೆ? ಸಿ. ಬಿ. ಐ. ಮೇಲೆ ಮುಖ್ಯ ಮಂತ್ರಿಗಳ ಗಧಾಪ್ರಹಾರ ಎನ್ನಬೇಕೆ? ಒಂದೊಂದು ನಾಟಕಕ್ಕೆ ೩-೪ ಹೆಸರಿಡುತ್ತಾರೆ, ಹಾಗೆಯೇ ಇದಕ್ಕೂ ಇಡಬೇಕಾಗಿದೆ. ನಾವು ಕಳುಹಿಸಿರುವ ನಿಲುವಳಿ ಸೂಚನೆಗೆ ಮಾನ್ಯತೆ ಕೊಟ್ಟು ಅದನ್ನು ಇಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕು ಎಂಬುದು ಇಲ್ಲಿರುವ ವಿಚಾರ ಇದರಲ್ಲಿ ೨-೩ ಪ್ರಶ್ನೆಗಳು ಇವೆ. ಮೊದಲು ಪ್ರಶ್ನೆ ನಿಲುವಳಿ ಸೂಚನೆ ಎಂದರೆ ಏನು? ಅದರ ತಾತ್ಪರ್ಯ ಏನು? ಈ ನಿಯಮಾವಳಿಯನ್ನು ಇಟ್ಟಿರುವುದು ಏತಕ್ಕೆ? ಯಾವ ವಿಷಯ ಇಡೀ ಜನತೆಯ ಸಮಗ್ರ ಗಮನವನ್ನು ಸೆಳೆದಿರುತ್ತದೆಯೋ ಅಂತಹ ವಿಷಯವನ್ನು ನಿಲುವಳಿ ಸೂಚನೆ ಮೂಲಕ ಇಲ್ಲಿ ತರುವಂತಹ ವ್ಯವಸ್ಥೆ ಇದೆ. ಇಡೀ ಜನತೆಯ ಪೈಕಿ, ವಕೀಲರಿರಬಹುದು, ಪೋಲೀಸನವರಿರಬಹುದು, ರಾಜಕೀಯ ವ್ಯಕ್ತಿಗಳು ಇರಬಹುದು, ನಿರಪರಾಧಿಗಳು ಇರಬಹುದು. ಎಲ್ಲಾ ಜನಗಳ ಮನಸ್ಸು ಒಂದೇ ಕಡೆ ಹೋಗಿದೆ ಬೇರೆ ಯಾವ ವಿಷಯವನ್ನು ಮಾತನಾಡಿದರೂ ಬುದ್ಧಿ ಇಲ್ಲವೆಂದು ಹೇಳುತ್ತಾರೆ, ಪತ್ರಿಕೆಗಳಲ್ಲಿ ಬರುವ ಹೇಳಿಕೆಗಳನ್ನು ಪ್ರತಿ ಹೇಳಿಕೆಗಳನ್ನು ನೋಡಿದ ಮೇಲೆ ಜನಕ್ಕೆ ಒಂದು ರೀತಿಯ ಏನೋ ಕಥೆ ಇದೆ, ಇದನ್ನು ಚರ್ಚೆ ಮಾಡಬೇಕಾದುದು ಮಹತ್ವವಾಗಿದೆ ಎನ್ನುವುದನ್ನು ಯಾರೂ ಅಲ್ಲಗಳೆಯುವುದಕ್ಕೆ ಸಾಧ್ಯವಿಲ್ಲ ಎಂದು ನಾನು ಅಂದುಕೊಂಡಿದ್ದೇನೆ. ಮಹತ್ವದ ದೃಷ್ಟಿಯಿಂದ ಎಲ್ಲಾ ವಿಚಾರಗಳು ಮುಗಿದಿವೆ ಎಂದು ಮಾನ್ಯ ಶ್ರೀ ಲಕ್ಷ್ಮೀಸಾಗರ್ ರವರು ಹೇಳಿದರು. ಅವರಿಗೆ ಬೇಕಾದ ವಿಷಯಗಳು ಮುಗಿದಿರಬಹುದು. ಆದರೆ ನಾವು ಹೇಳಬೇಕಾದುದು ಬಹಳ ಇದೆ, ನಿಲುವಳಿ ಸೂಚನೆಗೆ ಮಾನ್ಯತೆ ಕೊಟ್ಟು ಚರ್ಚೆಗೆ ಅವಕಾಶ ಮಾಡಿಕೊಟ್ಟರೂ, ಕೆಲವು ವಿಷಯಗಳನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ನಾನು ತಯಾರಿಲ್ಲ. ಹೇಳುವಂಥ ಹಲವಾರು ವಿಚಾರಗಳು ನಮಗೆ ಗೊತ್ತಿದೆ. ದುರಾದೃಷ್ಟವಶಾತ್ ಮಾನ್ಯ

ಜಾಲಪ್ಪನವರು, ಹೇಳಿಕೆಯನ್ನು ಓದಿದ ಮೇಲೆ ಅವುಗಳಿಗೆ ಬಲಬಂತು, ಅವರು ವಕೀಲರಲ್ಲ. ಪ್ರಸಂಗ ಏನೇ ಇರಲಿ ಇದರಲ್ಲಿ ಸಿಕ್ಕಿಬಿದ್ದಿರತಕ್ಕಂತಹದು ಸಂತೋಷ ತರತಕ್ಕಂತಹ ವಿಚಾರವಲ್ಲ. ಅವರೊಂದಿಗೆ ನಾವೂ ಕೂಡ ಕೆಲಸ ಮಾಡಿದ್ದೇವೆ. ನಾವು ಈ ವಿಷಯವನ್ನು ಮುಂದು ಮಾಡಿಕೊಂಡು ಸರ್ಕಾರದ ವಿರುದ್ಧ ಮಾತನಾಡುವಂತಹ ಚಲಕ್ಕೆ ಬಿದ್ದಿದ್ದೇವೆಂಬ ಉದ್ವಿಗ್ನತೆ ನಮಗೆ ಇದೆಯೆಂದು ತಾವು ಭಾವಿಸಿಕೊಳ್ಳಬೇಡಿ You are the custodian of the interest of every one of us. In the interest of Mr. Jalappa, you should not have allowed to make this statement Every one of his assertions, observations allegations are more incriminating than what all appeared in the Press ಶ್ರೀ ಜಾಲಪ್ಪನವರು ಅವರಿಗೆ ಖುಷಿ ಕಂಡಹಾಗೆ ಬರೆದಂತಿದೆ, I am not trying to find fault with him. It is very unfortunate thing.

(ಗೊಂದಲ)

ಅಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಿ

SRI R. L. JALAPPA.—Please if you yield for a minute.

ಶ್ರೀ ವೀರಣ್ಣ,—ಶ್ರೀ ಜಾಲಪ್ಪನವರ ಹೇಳಿಕೆ ಆದ ಮೇಲೆ ಕಾಮೆಂಟ್ಸ್ ಏತಕ್ಕೆ? there will be no comments on Jalappa's statement. ನಿಮ್ಮದು ಏನಾದರೂ ಇದ್ದರೆ ಮಾತ್ರ ಹೇಳಿ,

ಶ್ರೀ ರಾಮಕೃಷ್ಣ ಹೆಗಡೆ.- ವಕೀಲರನ್ನು ಕೇಳಿ ಈ ಹೇಳಿಕೆ ಕೊಟ್ಟರೋ ಇಲ್ಲವೋ, ಅದು ಅವರಿಗೆ ಬಿಟ್ಟ ವಿಚಾರ. ಇವೊತ್ತು ವಕೀಲರ ಧಾಟಿಯಲ್ಲಿ ತಾವು ಏನು ಮಾತನಾಡುತ್ತಿದ್ದೀರಿ ಇಂತಹ ವಕೀಲರನ್ನು ಮಾತ್ರ ಅವರು ಕೇಳಿಲ್ಲ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ನಿಮಗೆ ಬೇಕಾದ ಜೇಟ್‌ಮಲಾನಿ ಅವರನ್ನೇ ಕೇಳಬಹುದಿತ್ತು.

ಶ್ರೀ ರಾಮಕೃಷ್ಣ ಹೆಗಡೆ.—ಅಗತ್ಯ ಬಿದ್ದರೆ ಅವರನ್ನೇ ಕರೆಯಿಸುತ್ತೇವೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ನಿಮ್ಮ ಸ್ಟ್ಯಾಂಡಿಂಗ್ ಕೌನ್ಸಿಲ್ ಅವರನ್ನು ಕರೆಯಿಸಿ.

(ಗೊಂದಲ)

೨-೦೦ ಪಿ. ಎಂ.

ಅದಕ್ಕೆ ಪದೇ ಪದೇ ಫೀಸ್ ಕೊಡುವುದು ಬೇಡ ಅಂತ ಒಂದೇಸಾರಿ ಕೊಟ್ಟಿದ್ದೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇಂಥ ಕೇಸಸ್‌ನ್ನು ಆರ್ಗ್ಯು ಮಾಡುವುದಕ್ಕೆ ಮೊದಲೇ ಒಬ್ಬ ಪರ್ಮನೆಂಟ್ ವಕೀಲರನ್ನು ನೇಮಕ ಮಾಡಿಕೊಂಡಿದ್ದಾರೆ.

(ಗೊಂದಲ)

ಶ್ರೀ ಎಂ. ಪಿ. ಪ್ರಕಾಶ್,—ಏತಕ್ಕೆ ಅವರ ಬಗ್ಗೆ ಇಷ್ಟೊಂದು ಭಯಪಡುತ್ತೀರಿ ? ಅವರ ಹೆಸರಿಗೇ ಇಷ್ಟೊಂದು ಭಯಪಡಬೇಕಾಗಿಲ್ಲ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಕೆಲವು ವಿಷಯಗಳನ್ನು ಅವರು ಏನು ತಮ್ಮ ಡಿಫೆನ್ಸ್‌ಗೋಸ್ಕರ ಹೇಳಿಕೊಂಡರು ಅದನ್ನು ನೋಡಬೇಕು. ಈಗ ಡಿ.ಸಿ.ಪಿ. ನಾರಾಯಣ್ ಒಬ್ಬ ನಿಷ್ಠಾವಂತ ಅಧಿಕಾರಿ. ಆದರೆ ಆತ ಯಾರಿಗೆ ನಿಷ್ಠೆಯಿಂದ ಎಂಬುದನ್ನು ಹೇಳಲಿಲ್ಲ. ಈ ಸರ್ಕಾರಕ್ಕೆ ನಿಷ್ಠೆಯೋ, ನ್ಯಾಯಕ್ಕೆ ನಿಷ್ಠೆಯೋ, ನೀತಿಗೆ ನಿಷ್ಠೆಯೋ ? ಆದರೆ ಅಲಿಗೇಷನ್ ಬಂದಿರುವುದು ಏನು ? ಆ ಪರದೇಶಿಗೆ ಏನೂ ಮೋಟೀವ್ ಇರಲಿಲ್ಲ ನಿಮ್ಮ ಮೇಲಿನ ನಿಷ್ಠೆಗೋಸ್ಕರ ಈರೀತಿ ಆತ ಮಾಡಿದ ಎಂದು ಜಗತ್ತಿನಲ್ಲಿ ಎಲ್ಲರೂ ಹೇಳುತ್ತಿರಬೇಕಾದರೆ ನೀವು ಆತನನ್ನು ನಿಷ್ಠಾವಂತ ಎಂದು ಹೇಳುತ್ತಿದ್ದೀರಿ, ಅಂದರೆ ಆತ ನಿಮಗೆ ನಿಷ್ಠಾವಂತ ಎಂದು ಹೇಳಿಕೊಂಡಂತಾಗುತ್ತದೆ.

ಶ್ರೀ ಎಂ. ಪಿ. ಪ್ರಕಾಶ್.—ಈ ನಿಲುವಳಿ ಸೂಚನೆಯನ್ನು ತಾವು ಅಂಗೀಕರಿಸಬೇಕೇ, ಬೇಡವೇ ಎಂದು ಪ್ರಾಥಮಿಕ ವಿಷಯಗಳ ಬಗ್ಗೆ ಚರ್ಚೆಯಾಗತಕ್ಕ ಸಂದರ್ಭಗಳಲ್ಲಿ ಯಾರ ನಿಷ್ಠೆ ಯಾರಿಗೆ ಇದೆ, ಯಾವ ಅಧಿಕಾರಿಯನ್ನು ಸಂರಕ್ಷಣೆ ಮಾಡುವುದಕ್ಕೆ ಇವರು ಹೋಗುತ್ತಿದ್ದಾರೆ ಎಂಬ ಗುಣಾವಗುಣಗಳ ಬಗ್ಗೆ ಚರ್ಚೆ ಮಾಡತಕ್ಕದ್ದು ಸಾಧುವಲ್ಲ. ತಾವು ಸಾರ್ವಜನಿಕವಾಗಿ ಚರ್ಚೆ ಮಾಡುವುದು ಒಳ್ಳೆಯದು.

ಅಧ್ಯಕ್ಷರು.—ಸಾರ್ವಜನಿಕವಾಗಿ ಮಹತ್ವವುಳ್ಳ ವಿಚಾರ ಹೇಗೆ, ಇದರ ಬಗ್ಗೆ ಹೇಳಿ?

ಶ್ರೀ ಎಂ. ಪಿ. ಪ್ರಕಾಶ್.—ಸುಮ್ಮನೆ ಅವರು ಹೇಳಿಕೆ ಕೊಟ್ಟರು, ಇವರು ಹೇಳಿಕೆ ಕೊಟ್ಟರು, ಅದು ಹೀಗಿದೆ ಎಂದು ಹೇಳುವುದು ಬೇಡ. ಇಲ್ಲಿ ಕಾಮೆಂಟ್ಸ್ ಬೇಡ.

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಅಧ್ಯಕ್ಷರೇ, ತಾವು ನನಗೆ ಒಂದು ನಿಮಿಷ ಅವಕಾಶ ಕೊಡಬೇಕು ನಾನು ಈಗ ಏನು ಹೇಳಿಕೆಯನ್ನು ಮಾಡಿದ್ದೇನೆ ಅದನ್ನು ನಾನು ನನ್ನ ಸ್ವಂತ ಬುದ್ಧಿಯಿಂದ ಮಾಡಿದ್ದೇನೆ. ಅದಕ್ಕೆ ಯಾವ ಅಡ್ವೋಕೇಟ್‌ನ್ನು ಕೇಳಬೇಕಾಗಿಲ್ಲ. ಅದು ನನಗೆ ಗೊತ್ತಾಗುವುದಿಲ್ಲ. ಏಕೆಂದರೆ ಒಬ್ಬೊಬ್ಬರೂ ಒಂದೊಂದು ರೀತಿ ಹೇಳಿ ಕನ್‌ಫ್ಯೂಸ್ ಮಾಡುತ್ತಾರೆ. ಇದು ಅವರಿಗೇ ಸರಿಯಾಗಿ ಗೊತ್ತಾಗುವುದಿಲ್ಲ. ತಾವೇ ಈಗ ನೋಡಿದಿರಿ ಈ ಅಡ್ವೋಕೇಟ್ಸ್ ಯಾವ ರೀತಿ ವಾದ ಮಾಡುತ್ತಾರೆಂದು, ಅವರ ವಾದವನ್ನು ನಾನೂ ಈಗ ನೋಡಿದ್ದೇನೆ. ಈಗ ಅದೆಲ್ಲಾ ಬೇಡ. ನಾನು ಏನು ಹೇಳಿದ್ದೇನೆ. I am bound by it. I am prepared to face any worst thing. ನನಗೆ ೬೩ ವರ್ಷ ಆಗಿದೆ. ಇಂಥಾದ್ದಕ್ಕೆಲ್ಲಾ ನಾನು ತಲೆ ಕೆಡಿಸಿಕೊಳ್ಳುವುದಿಲ್ಲ. ಈಗ ಅದೆಲ್ಲಾ ಬೇಡ ನಾನು ಒಂದು ಮಾತನ್ನು ಹೇಳುತ್ತೇನೆ. ಅದೇನೆಂದರೆ, ನನ್ನ ಹೇಳಿಕೆಯ ಮೇಲೆ ಇಲ್ಲಿ ಚರ್ಚೆ ಮಾಡುವುದಾದರೆ ಅದಕ್ಕೆ ಉತ್ತರ ಕೊಡಲು ನನಗೂ ತಾವು ಅವಕಾಶವನ್ನು ಕೊಡಬೇಕು. ಕಾನೂನು ಪ್ರಕಾರ ನನ್ನ ಹೇಳಿಕೆಯ ಮೇಲೆ ಅವರು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಇಲ್ಲ. ಒಂದುವೇಳೆ ನೀವು ಅವರಿಗೆ ಚರ್ಚೆ ಮಾಡಲು ಅವಕಾಶವನ್ನು ಕೊಡುವುದಾದರೆ ತಾವು ನನಗೂ ಕೂಡ ಪುನಃ ಅವಕಾಶವನ್ನು ಕೊಡಬೇಕು ನಾನು ಅದಕ್ಕೆ ಉತ್ತರವನ್ನು ಕೊಡಬೇಕಾಗುತ್ತದೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಅವರು ಒಂದು ಹೇಳಿಕೆಯನ್ನು ಕೊಟ್ಟಮೇಲೆ ಅದು ಈ ಸದನದ ಸ್ವತ್ತಾಗುತ್ತದೆ.

(ಗೊಂದಲ)

I have got every right to incidentally refer to the statement of Sri R. L. Jalappa. I cannot make a main debate on his statement.

ಅಧ್ಯಕ್ಷರು.—ನಾನು ಪರ್ಮಿಷನ್ ಕೊಟ್ಟಮೇಲೆ ತಾವು ಬಹಳಷ್ಟು ಮಾತನಾಡಬಹುದು.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಯಾವುದೇ ಒಂದು ಸ್ಟೇಟ್‌ಮೆಂಟ್‌ನ್ನು ಈ ಸದನದಲ್ಲಿ ಮಾಡಿದ ಮೇಲೆ, ಅದು ಈ ಸದನದ ಸ್ವತ್ತಾದಮೇಲೆ ಯಾವ ಸಂದರ್ಭದಲ್ಲೂ ಅದರ ಮೇಲೆ ಇಲ್ಲಿ ಮಾತನಾಡಬಾರದೆಂದು ಹೇಳುವುದಾದರೆ ಅದನ್ನು ಇಲ್ಲಿ ಏತಕ್ಕೆ ಹೇಳಬೇಕು ?

ಅಧ್ಯಕ್ಷರು.—ಇಲ್ಲಿ ರೂಲ್‌ನಲ್ಲಿ ಕ್ಲಿಯರ್ ಆಗಿದೆ. "There shall be no debate on such statement after it has been made".

ಶ್ರೀ ಎಂ. ಪಿ. ಪ್ರಕಾಶ್.—ಈರೀತಿ ಹೇಳಿಕೆಯನ್ನು ಮಾಡಿದ್ದರ ಬಗ್ಗೆ ಪ್ರಸ್ತಾಪ ಮಾಡುವುದು ಹೇಗಿರುತ್ತದೆಂದರೆ......

(ಗೊಂದಲ)

ಅಂಥ ಸಹಾನುಭೂತಿ ಬೇಡ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ನಾನು ಅವರ ಸ್ಟೇಟ್‌ಮೆಂಟ್ ಮೇಲೆ ಡಿಬೇಟ್ ಮಾಡುತ್ತಿಲ್ಲ. ಈರೀತಿಯಲ್ಲಿ ಸ್ಟೇಟ್‌ಮೆಂಟ್‌ನೂ ಓದಿದಮೇಲೆ, ಅದರ ಹಿನ್ನೆಲೆ ಇಲ್ಲದೆ ಇದ್ದರೆ ಯಾರೂ ಈರೀತಿ ಮಾತನಾಡುವುದಕ್ಕಾಗುವುದಿಲ್ಲ, ನೀವು ಮನುಷ್ಯರಾಗಿ ಮಾತನಾಡುತ್ತಿದ್ದೀರಿ, ಅಥವಾ ಇನ್ನೇನಾದರೂ, ಅವರು ಮನೆಯಲ್ಲಿ ಬರೆದುಕೊಂಡು ಬಂದಿದ್ದನ್ನು ಇಲ್ಲಿ ಓದಿದ್ದರೆ ಜಾಲಪ್ಪ

ನವರೇ ಇಲ್ಲ. ಸ್ಟೇಟ್‌ಮೆಂಟೇ ಇಲ್ಲ ಎಂದು ತಿಳಿದುಕೊಂಡು ಮಾತನಾಡುವುದಕ್ಕೆ ಸಾಧ್ಯವೆ ? ಸ್ವಾಮಿ ನಾನು ಕೇಳುತ್ತೇನೆ. How do you forget Jalappa here and how do you talk ?

ಶ್ರೀ ಎಂ. ಪಿ, ಪ್ರಕಾಶ್.—ಮಾನ್ಯ ಸದಸ್ಯರು ಇದರ ಬಗ್ಗೆ ಅನುಷಂಗಿಕವಾಗಿ ಪ್ರಸ್ತಾಪ ಮಾಡಬೇಕು ನಿಜ. ಆದರೆ ಸಹಾನುಭೂತಿಯ ಹೆಸರಿನ ಮೇಲೆ ಇಲ್ಲಿಗೆ ಅಂದರೆ ಇದಕ್ಕೆ ಸಂಬಂಧವೇ ಪಡದೆ ಇರತಕ್ಕ ವಿಷಯಗಳನ್ನು ಕಾಯಿದೆ ಮೀರಿ ಮಾತನಾಡುವುದು ಔಚಿತ್ಯಪೂರ್ಣ ಅಲ್ಲವೆಂದು ನಾನು ಹೇಳುತ್ತಿದ್ದೇನೆ...

ಶ್ರೀ ಕೆ. ಹೆಚ್. ಶ್ರೀನಿವಾಸ್.—ಇದು ಕೋರ್ಟ್ ಅಲ್ಲ ಎಂದು ಅವರು ಹೇಳಿದರು, ಕಾಯಿದೆ ಮೀರಿ ಎಂದು ನೀವು ಹೇಳುತ್ತಿದ್ದೀರಿ, ನೀವು ಕೋರ್ಟ್‌ನಲ್ಲಿ ಮಾತನಾಡಿದಂತೆ ಮಾತನಾಡುವುದು ಬೇಡ ಎಂದು ಇನ್ನೊಬ್ಬರು ಹೇಳುತ್ತಿದ್ದಾರೆ.

ಶ್ರೀ ಎಂ. ಪಿ. ಪ್ರಕಾಶ್.—ನಿಯಮಾವಳಿಯನ್ನು ಮೀರಿ ಮಾತನಾಡುವುದು ಬೇಡ. ಸದಸ್ಯರಾಗಿ ಮಾತನಾಡುವುದನ್ನು ಕಲಿಯಬೇಕು. ಮನುಷ್ಯರಾಗಿ ಮಾತನಾಡುತ್ತೇವೆ ಎಂದರೂ ಕೂಡ, ಆ ಮನುಷ್ಯರು ನಿಯಮಾವಳಿಗೆ ಹೊಂದಿಕೊಂಡು ಮಾತನಾಡುತ್ತಾರೆ. ಅದನ್ನು ಮೀರಿ ಮಾತನಾಡುವವರು ಮನುಷ್ಯರಾಗುವುದಿಲ್ಲ, ಸದಸ್ಯರೂ ಆಗುವುದಿಲ್ಲ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾತನಾಡುವುದಕ್ಕೋಸ್ಕರ ನಿಯಮಾವಳಿಯ ಒಂದು ಚೌಕಟ್ಟು ಇದೆ ನಿಯಮಾವಳಿ ಇದೆಯೆಂದು ಮಾತನಾಡುವುದಲ್ಲ. ಮಾತನಾಡುವುದಕ್ಕೆ ಒಂದು ನಿಯಮಾವಳಿ ಇರಬೇಕೆಂದು ನಾವು ಮಾಡಿಕೊಂಡಿದ್ದೇವೆ. ನಾನು ನಿಯಮಾವಳಿಯನ್ನು ಮೀರುತ್ತಿಲ್ಲ. ನಾವು ನಿಲುವಳಿ ಸೂಚನೆಯನ್ನು ತೆಗೆದುಕೊಂಡು ಚರ್ಚೆ ಮಾಡುವುದಕ್ಕೆ ಹಲವಾರು ಬೇರೆ ಬೇರೆ ವಿಚಾರಗಳು ಇವೆ.

ಮೊದಲನೆಯದಾಗಿ ಇವತ್ತಿನವರೆಗೂ ಏನೇನಾಗಿದೆ ಕಥೆ ಅದರಲ್ಲಿ ಹಲವಾರು ಮುಖ್ಯವಾದ ಅಂಶಗಳು ಇವೆ. ಅದು ಅಲ್ಲದೆ ಏನೇನು ಪ್ರಶ್ನೆಗಳನ್ನು ಎತ್ತಿ ಹೊರಗಡೆ ಮಾನ್ಯ ಮುಖ್ಯಮಂತ್ರಿಗಳು ಮಾತನಾಡಿದ್ದಾರೆ, ಮಾನ್ಯ ಜಾಲಪ್ಪನವರು ಮಾತನಾಡಿದ್ದಾರೆ, ಅದೆಲ್ಲಾ ವಿಷಯಗಳನ್ನು ಸದನದಲ್ಲಿ ಚರ್ಚೆ ಮಾಡಬೇಕೆಂದು ಅವರೇ ಹೇಳಿದ್ದಾರೆ. ಸಭೆಯಲ್ಲಿ ಮೂಲಭೂತವಾದ ಅಂಶಗಳ ಬಗ್ಗೆ ಗಮನ ಹರಿಸಬೇಕೆಂದು ಹೇಳಿದ್ದಾರೆ. ಮೂಲಭೂತವಾದ ಅಂಶಗಳನ್ನು ಚರ್ಚೆ ಮಾಡುವುದಕ್ಕೆ ನಿಲುವಳಿ ಸೂಚನೆಯನ್ನು ದಯವಿಟ್ಟು ಒಪ್ಪಿಕೊಳ್ಳಿ ಎಂದು ನಾನು ಹೇಳುತ್ತಿದ್ದೇನೆ. ಏನೇನೋ ಹೇಳುತ್ತಿದ್ದಾರೆಂದು ಏತಕ್ಕೆ ಸ್ವಾಮಿ ತಾವು ಗಾಬರಿ ಪಡುತ್ತೀರಿ. ಮಾನ್ಯ ಜಾಲಪ್ಪನವರು ಗಾಬರಿ ಪಡಬೇಕು. ನಿಮಗೆ ಏತಕ್ಕೆ ಗಾಬರಿಯಾಗುತ್ತದೆಯೋ ಗೊತ್ತಾಗುತ್ತಿಲ್ಲ. ನಾನು ಹೇಳುತ್ತೇನೆ ಅವರೇ ಹೇಳಿದಂತೆ ಒಂದು ಸಂದರ್ಭದಲ್ಲಿ ಸಿ.ಬಿ.ಐ. ಇನ್‌ವೆಸ್ಟಿಗೇಷನ್......

ಅಧ್ಯಕ್ಷರು.—ಅವರ ಹೇಳಿಕೆಯನ್ನು ರೆಫರ್ ಮಾಡಬೇಡಿ. ನಿಮ್ಮ ಪೊಸಿಷನ್ ಏನು ಇದೆ ಅದನ್ನು ರೆಫರ್‌ಮಾಡಿ ನನ್ನನ್ನು ಕನ್‌ವಿನ್ಸ್ ಮಾಡುವುದಕ್ಕೆ ಪ್ರಯತ್ನಿಸಿ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ನಿಮ್ಮನ್ನೇ ಕನ್‌ವಿನ್ಸ್ ಮಾಡುತ್ತೇನೆ. ಬಹಳ ಮೂಲಭೂತವಾದ ಪ್ರಕರಣಗಳನ್ನು ಎತ್ತಿದ್ದಾರೆ. ಆ ಮೂಲಭೂತವಾದ ಪ್ರಶ್ನೆಗಳನ್ನು ಮುಂದೂಡುವಂತೆಯೇ ಇಲ್ಲ. ಅದನ್ನು ಇವತ್ತು ಚರ್ಚೆಮಾಡಬೇಕಾದಂಥ ಒಂದು ಗಂಭೀರವಾದ ಪರಿಸ್ಥಿತಿಯಲ್ಲಿ ನಾವು ಅವರು ಎಲ್ಲರೂ ಇದ್ದೇವೆ. ಅವರಿಗೂ ಹೇಳುವುದಕ್ಕೆ ಬಹಳಷ್ಟು ಇದೆ, ನಮಗೂ ಹೇಳುವುದಕ್ಕೆ ಬಹಳಷ್ಟು ಇದೆ. ನಾವು ಇಬ್ಬರೂ ನಿಮಗೆ ಹೇಳುವುದು ಬಹಳಷ್ಟು ಇರಬಹುದು ಅದು ಬೇರೆ ವಿಚಾರ. ಆದರೆ ಮೂಲಭೂತವಾಗಿ ವಿಷಯಗಳನ್ನು ನಾವು ಏನೇನು ಹೇಳಬೇಕೆಂದು ಆಲೋಚನೆ ಮಾಡಿದ್ದೆವೋ ಅದೂ ಇದೆ. ಅದಕ್ಕೆ ಇನ್ನಷ್ಟು ಪುಷ್ಟಿ ತರುವುದಕ್ಕೆ ಈ ನಿಲುವಳಿ ಸೂಚನೆಯನ್ನು ತಂದು ಅದಕ್ಕೆ ಅವಕಾಶವನ್ನು ಕೊಡಬೇಕೆಂದು ಕೇಳುತ್ತಿದ್ದೇವೆ. ಏತಕ್ಕೆಂದರೆ ನೀವು ಮೊದಲೇ ಶುರು ಮಾಡಿದಾಗ ಹೇಳಿಬಿಟ್ಟಿರಿ. ಬೇಕಾಗಿದ್ದರೆ ಚೇಂಬರಿನಲ್ಲಿಯೇ ಇದನ್ನು ರಿಜೆಕ್ಟ್ ಮಾಡಿ ತಳ್ಳಿಹಾಕಿಬಿಡಬಹುದಾಗಿತ್ತು. ಅದನ್ನು ಮಾಡಲಿಲ್ಲವೆಂದು ಹೇಳಿ ಅದನ್ನೇ ಈಗಲೂ ಏನಾದರೂ ತಲೆಯಲ್ಲಿ ಇಟ್ಟುಕೊಂಡು ನಮ್ಮ ಭಾಷಣವನ್ನು ಕೇಳುತ್ತಿದ್ದಾರೋ ಏನೋ ?

ಅಧ್ಯಕ್ಷರು.—ಮಾನ್ಯ ಶ್ರೀನಿವಾಸ್‌ರವರೇ ಕೇಳಿ ಚೇಂಬರ್‌ನಲ್ಲಿಯೇ ರಿಜೆಕ್ಟ್ ಮಾಡಬಾರದು, ನಿಮ್ಮನ್ನು ಕೇಳಿ, ಅವರನ್ನು ಕೇಳಿ ಎರಡು ಕಡೆಯವರನ್ನು ಕೇಳಿ ಒಂದು ಒಳ್ಳೆಯ ತೀರ್ಮಾನವನ್ನು ಕೊಡಬೇಕೆಂದು ಈ ಅವಕಾಶವನ್ನು ತಮಗೆ ಕೊಟ್ಟಿದ್ದೇನೆ.

(ಗೊಂದಲ)

ಶ್ರೀ ಕೆ.ಎಚ್ ಶ್ರೀನಿವಾಸ್.—ಎರಡೂ ಅರ್ಥ ಬರುತ್ತದೆ. ನಿಮ್ಮನ್ನು ಕೇಳಿ ಬಿಸಾಕೋಣ ಎಂದು ಮಾಡಿದೆ ಎಂದು ಅರ್ಥ ಬರುತ್ತದೆ. ಇನ್ನೊಂದು ಅರ್ಥ ನಿಮ್ಮಿಬ್ಬರನ್ನು ಕೇಳಿ ಬಿಸಾಕೋಣ ವೆಂದು ಬರುತ್ತದೆ. * * * ಆದರೆ ಅದರೊಳಗೆ ಏನು ಆಲೋಚನೆಗಳು ಆದ್ದರಿಂದ ನಿಮ್ಮನ್ನು ಕರ ಜೋಡಿಸಿ ಕೇಳಿ ಕೊಳ್ಳುವುದೆ ನೆಂದರೆ ಅವರದು ಇವರದು ಪ್ರಶ್ನೆಯಿಲ್ಲ, ಇದು ಒಂದು ಬಹಳ ಗಂಭೀರ ವಾದ ವಿಷಯ, ಇದು ನಿಲುವಳಿಸೂಚನೆಗೆ ಅರ್ಹವಾಗಿದೆ. ಇದರಮೇಲೆ ಚರ್ಚೆಗೆ ಅವಕಾಶವನ್ನು ಕೊಡದೆ ರೂಲಿಂಗ್ ಕೊಡುವುದರಲ್ಲಿ ಅರ್ಥವಿಲ್ಲ. ಆದ್ದರಿಂದ ತಾವು ದೊಡ್ಡ ಮನಸ್ಸು ಮಾಡಿ ಆದಷ್ಟು ಬೇಗ ಚರ್ಚೆಗೆ ಅವಕಾಶ ಮಾಡಿಕೊಡಿ. ಪ್ರೊಸೀಜರ್ ಬಗ್ಗೆ ತಲೆ ಚಚ್ಚಿಕೊಳ್ಳುವುದು ತಪ್ಪುತ್ತದೆ. ನಿಜಕ್ಕೂ ವಿಷಯಗಳನ್ನು ಚರ್ಚೆ ಮಾಡಲಿಕ್ಕೆ ಅವಕಾಶವಾಗುತ್ತದೆಂದು ನಾನು ಒತ್ತಾಯಿಸುತ್ತೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರಾದ ಶ್ರೀನಿವಾಸ್‌ರವರೇ ತಾವು ಈ ರೀತಿ ಮಾತನಾಡಬಾರದು. ತಾವು ಬಹಳ ಜವಾಬ್ದಾರರಾಗಿರತಕ್ಕಂಥ ಸದಸ್ಯರು *** ಅದಕ್ಕೆ ನಾನು ಆ ವಿಷಯವನ್ನು ಎಕ್ಸ್‌ಪಂಜ್ ಮಾಡಿಸಿದ್ದೇನೆ.

ಶ್ರೀ ಕೆ.ಎಚ್. ಶ್ರೀನಿವಾಸ್.—ನಾನು ಟೋಪಿ ಮಾತ್ರ ಕಾಣಿಸುತ್ತದೆ, ಆಲೋಚನೆಗಳು ಕಾಣಿಸುವುದಿಲ್ಲವೆಂದು ಹೇಳಿದೆ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಟೋಪಿ ಒಳಗೆ ಎಂದು ಹೇಳಿದ ವಿಷಯವನ್ನು ಕಡತದಿಂದ ತೆಗೆಸಬೇಕು.

ಅಧ್ಯಕ್ಷರು.—ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ಸ್ಪೀಕರ್ ಆಗಿ ಹೇಳುವಾಗ ಎರಡು ಕಡೆಯವರ ವಿಷಯಗಳನ್ನು ಕೇಳಿ ಜಡ್ಜ್‌ಮೆಂಟ್ ಕೊಡಬೇಕು, ನಿಮಗೂ ಅವಕಾಶವನ್ನು ಕೊಡಬೇಕು. ಸರ್ಕಾರಕ್ಕೂ ಅವಕಾಶವನ್ನು ಕೊಡುತ್ತೇನೆಂದು ಹೇಳಿದರೂ ನೀವು ಈ ರೀತಿ ಮಾತನಾಡುತ್ತೇನೆಂದು ಹೇಳಿದರೆ ಹೇಗೆ?

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಕೆ.ಎಚ್. ಶ್ರೀನಿವಾಸ್‌ರವರು ಬಹಳ ಚೆನ್ನಾಗಿ ಮಾತನಾಡಿದ್ದಾರೆ. ಈಗ ಟೋಪಿ ಕೆಳಗೆ ಏನು ಇದೆ ಪಂಚೆ ವಸ್ತ್ರ ಇದೆಲ್ಲಾ ಹೇಳಿದ್ದನ್ನು ಕಡತ ದಿಂದ ತೆಗೆಸಿಬಿಡಿ. ಅನಂತರ ಮಾನ್ಯ ಅಧ್ಯಕ್ಷರೇ ಶ್ರೀಮಾನ್ ಜಾಲಪ್ಪನವರು ಹೇಳಿಕೆಯನ್ನು ಕೊಡುವುದಕ್ಕೆ ಮುಂಚೆ ನಿಮ್ಮ ಚೇಂಬರ್‌ನಲ್ಲಿಯೇ ಅದನ್ನು ಇತ್ಯರ್ಥಮಾಡಿಕೊಂಡು ರಿಜೆಕ್ಟ್ ಮಾಡ ಬಹುದಾಗಿತ್ತು, ಆದರೂ ಕೂಡ ಇದನ್ನು ಸದನದ ಮುಂದೆ ತಂದು ನಿಮ್ಮ ಅಭಿಪ್ರಾಯವನ್ನು ಕೇಳಿ ನಿರ್ಣಯ ತೆಗೆದುಕೊಳ್ಳುತ್ತೇನೆಂದು ಹೇಳಿದ್ದೀರಿ. ಬಹಳ ವಂದನೆಗಳು. ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಅದರ ಬಗ್ಗೆ ತಮಗೆ ಮನವರಿಕೆ ಆಗಿರಬಹುದು. ದಯಮಾಡಿ ತಾವು ಆ ಮಾತನ್ನು ಹೇಳಬಾರದಾಗಿತ್ತು. ಆದರೂ ಹೇಳಿದ್ದೀರಿ.

ಅಧ್ಯಕ್ಷರು.—ನಾನು ಹಾಗೆ ಹೇಳುವುದಿಲ್ಲ. ನಿಮಗೂ ಹೇಳುವುದಕ್ಕೆ ಅವಕಾಶ ಕೊಡುತ್ತೇನೆ. ಯೋಗ್ಯ ಇದ್ದರೆ ಚರ್ಚೆಗೆ ಅನುಮತಿ ಕೊಡಬಹುದು. ಆ ದೃಷ್ಟಿಯಿಂದ ಹೇಳಿದ್ದೇನೆ. ಹಿಂದೆ ಕೆಲವನ್ನು ಛೇಂಬರ್‌ನಲ್ಲೇ ರಿಜೆಕ್ಟ್ ಮಾಡಿದ್ದೇನೆ. ನಿಮಗೆ ಹೇಳುವುದಕ್ಕೆ ಅವಕಾಶ ಕೊಡುವ ದೃಷ್ಟಿಯಿಂದ ಕೊಟ್ಟಿದ್ದೇನೆ.

---

* ಅಧ್ಯಕ್ಷರ ಆದೇಶದ ಮೇರೆಗೆ ಗುರುತಿಸಿರುವ ಭಾಗವನ್ನು ತೆಗೆದು ಹಾಕಲಾಗಿದೆ

ಶ್ರೀ ಬಿ. ಬಸವಲಿಂಗಪ್ಪ.—ಈಗಿನ ಪರಿಸ್ಥಿತಿ ಅಸಾಧಾರಣವಾಗಿದೆ. ಕೌಲ್ ಅಂಡ್ ಶಕ್ದಾರ್ ಎಂಬ ಪುಸ್ತಕ ಏನಿದೆ ಅದರ ೪೧೮ನೇ ಪುಟದಲ್ಲಿ ಒಂದು ಮಾತು ಇದೆ.

> "Admissibility of Adjournment Motion :
>
> "An Adjournment Motion to be admissible must possess the following essential elements."

ಕೆಳಗೆ ಮಿನಿಸ್ಟೀರಿಯಲ್ ರೆಸ್ಪಾನ್ಸಿಬಿಲಿಟಿ ಎಂದು ಇದೆ. ಅದರಲ್ಲಿ.

> "Generally speaking, the subject matter of an Adjournment Motion must have direct or indirect relation to the conduct or default on the part of the Government of India and must be in the nature a criticism of the action of the Government of India either for having done some action or for having omitted to do some action which was urgently necessary at the moment."

Now we can substitute the words 'Government of India' with the words 'Government of Karnataka'. ಈ ಪರಿಸ್ಥಿತಿಯಲ್ಲಿ ಎರಡು ಮೂರು ವಿಷಯಗಳು ಸ್ಥಿರವಾಗಿರತಕ್ಕವುಗಳು ಇವೆ. ೧) ರಷೀದ್ ಅವರ ಕೊಲೆಯಾಗಿದೆ, ೨) ಸಿಬಿಐ ತನಿಖೆಗೆ ವಹಿಸಿದ್ದಾರೆ, ೩) ಜಾಲಪ್ಪನವರು ನಿರೀಕ್ಷಣಾ ಜಾಮೀನಿಗಾಗಿ ಅರ್ಜಿ ಹಾಕಿರತಕ್ಕದ್ದು. ಈ ಮೂರು ನಮ್ಮ ಮುಂದಿರತಕ್ಕ ವಿಷಯಗಳು. ರಷೀದ್‌ರವರು ಸತ್ತಿದ್ದಾರೆ, ಸತ್ತ ಮೇಲೆ ಎಲ್ಲಾ ವಕೀಲ ಸಂಘದವರು ಮೆರವಣಿಗೆ ಮಾಡಿ ವಿಧಾನ ಸೌಧದ ಹತ್ತಿರ ಬಂದು ಮುಖ್ಯಮಂತ್ರಿಗಳನ್ನು ಕಂಡು ಬಹಳ ಒತ್ತಾಯ ಮಾಡಿದ್ದಾರೆ. ಒತ್ತಾಯ ಮಾಡಿದ ಮೇಲೆ ಮುಖ್ಯಮಂತ್ರಿಗಳು ಸಿಬಿಐಗೆ ವಹಿಸುತ್ತೇವೆಂದು ಅವರ ಬೇಡಿಕೆಗೆ ಮನ್ನಣೆ ಕೊಟ್ಟರು. ಈಗ ಸಿಬಿಐಗೆ ವಹಿಸಿದ್ದಾರೆ. ಅವರು ತನಿಖೆ ಮಾಡುತ್ತಿದ್ದಾರೆ. ತನಿಖೆ ಮಾಡಿ ೧೫ ದಿನಗಳಿಂದ ಅಸಾಧಾರಣ ಪರಿಸ್ಥಿತಿ ಉದ್ಭವವಾಗಿದೆ. ಕೋರ್ಟಿನಲ್ಲಿ ಕೇಸುಗಳು ಪ್ರಾರಂಭವಾಗಿದೆ. ಪೋಲೀಸರ ಬಗ್ಗೆ ವಾದ ವಿವಾದಗಳು ಪ್ರಾರಂಭವಾಗಿವೆ. ಕೆಲವು ಮಂದಿ ಪೋಲೀಸರನ್ನು ಅರೆಸ್ಟ್ ಮಾಡಿದ್ದಾರೆ. ಅರೆಸ್ಟ್ ಮಾಡಿ ಬೇಲ್ ಮೇಲೆ ಯಾರನ್ನೂ ಬಿಟ್ಟಿಲ್ಲ. ಅವರನ್ನೆಲ್ಲಾ ಜೈಲಿನಲ್ಲಿಟ್ಟುಕೊಂಡಿದ್ದಾರೆ. ಇದರ ಪರಿಣಾಮ ರಾಜ್ಯದಲ್ಲಿ ಏನಾಗುತ್ತದೆ ಎಂದರೆ ಪೋಲೀಸರೇ ಸ್ವತಃ ತಮ್ಮ ಜವಾಬ್ದಾರಿಯನ್ನು ಬಿಟ್ಟು, ಕರ್ತವ್ಯವನ್ನು ಮರೆತು ಇಂಥ ಒಂದು ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡಿದ್ದಾರೆಂಬ ಗುಲ್ಲು ದೇಶಾದ್ಯಂತ ಹರಡಿದೆ. ಡಿಸಿಪಿ ಯವರು ಅಂದರೆ ಮೇಲ್ವಿಚಾರಣಾ ಅಧಿಕಾರಿ......

ಅಧ್ಯಕ್ಷರು.— ಡಿಸಿಪಿ ಅಂದರೆ ಡೆಪ್ಯೂಟಿ ಕಮೀಷನರ್ ಆಫ್ ಪೋಲೀಸ್.

ಶ್ರೀ ಬಿ. ಬಸವಲಿಂಗಪ್ಪ.—ಸಿಟಿಯಲ್ಲಿ ಹಾಗೆ ಕರೆಯುತ್ತಾರೆ ಇರಲಿ, ಡಿಸಿಪಿ ಎಂದೇ ಇಟ್ಟು ಕೊಳ್ಳೋಣ. ಅಂಥ ಅಧಿಕಾರಿಯನ್ನು ಅರೆಸ್ಟ್ ಮಾಡಿದ್ದಾರೆ. ಕೆಳವರ್ಗ ಅಧಿಕಾರಿಗಳನ್ನು ಅರೆಸ್ಟ್ ಮಾಡಿದ್ದಾರೆ. ಈ ಒಂದು ಸರ್ಕಾರದಲ್ಲಿ ಶಾಂತ ಪರಿಸ್ಥಿತಿ ಸಾಧ್ಯವೇ ಇಲ್ಲವೇ ಎಂಬ ಪ್ರಶ್ನೆ ಬರುತ್ತದೆ ಜನರ ಮನಸ್ಸಿನಲ್ಲಿ ಏನು ಭಾವನೆ ಉಂಟಾಗುತ್ತದೆಂದರೆ ಶಾಂತಿಯುತವಾಗಿ ಜೀವನ ಮಾಡುವುದಕ್ಕೆ ಇನ್ನು ಮುಂದೆ ಸಾಧ್ಯವಾಗುತ್ತದೆಯೋ ಇಲ್ಲವೇ ಎಂಬ ಪರಿಸ್ಥಿತಿ ಬರುತ್ತದೆ. ಇಂಥ ಒಂದು ಕಾವೇರಿಡ ರಾಜ್ಯದಲ್ಲಿ ಕವಿದಿದೆ ರಷೀದ್‌ರವರ ಕೊಲೆಯ ಬಗ್ಗೆ ನಾನು ಹೇಳಿಕೆ ಕೊಡುವವನು ಅಲ್ಲ. ಹೇಳಿಕೆ ಕೊಡಲಿಕ್ಕೂ ತಯಾರಾಗಿರಲಿಲ್ಲ ಆದರೆ ದಿನಂಪ್ರತಿ ಬರತಕ್ಕ ಹೇಳಿಕೆ, ಸಾಕ್ಷಿಗಳ ಹೇಳಿಕೆ, ಕೋರ್ಟಿನವರ ತೀರ್ಪುಗಳ ಪ್ರಕಟಣೆ ಇವನ್ನೆಲ್ಲಾ ನೋಡಿದರೆ ಭಯವಾಗುತ್ತದೆ.

ಪಂಜಾಬಿನಲ್ಲಿ ಏನೋ ನಡೆಯುತ್ತಿತ್ತು, ನಡೆಯುತ್ತಿದೆ. ಬೇರೆ ಕಡೆ ನಡೆಯುತ್ತಿದೆ. ಆದರೆ ಕರ್ನಾಟಕ ರಾಜ್ಯದಲ್ಲಿ ಇಂಥ ಒಂದು ವ್ಯವಸ್ಥೆ, ಇಂಥ ಪರಿಸ್ಥಿತಿಯನ್ನು ನಾನು ಕಂಡಿಲ್ಲ. ನಾನೂ ಒಂದು ಸಾರಿ ಈ ಕೆಲಸ ಮಾಡಿದ್ದೇನೆ. ಪೋಲೀಸ್ ಕೆಲಸ ಮಾಡಿದ್ದೇನೆ. ಆದರೆ ಅಲ್ಲಿಂದ ಹಿಡಿದು ಇಲ್ಲಿಯವರೆಗೆ.......

ಶ್ರೀ ಕೆ. ಮಲ್ಲಪ್ಪ.—ನಿಮ್ಮ ಕಾಲದಲ್ಲಿ ಆದಂಥದ್ದನ್ನು ಕೇಳುವವರು ಇರಲಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ನೀವಾದರೂ ಕೇಳಿದಿರಲ್ಲ ಸಂತೋಷ ನಿಮಗೆ ಧೈರ್ಯ ಬರಲಿ. ಇವತ್ತು ಏನಾಗಿದೆ ? ಪೋಲೀಸರೇ ಈ ಕೆಲಸ ಮಾಡಿದ್ದಾರೆ ಎಂದು ಆಗುತ್ತಿದೆ. ಇಂಥ ಕಾರ್ಮೋಡವನ್ನು ನಿವಾರಣೆ ಮಾಡಬೇಕು. ಜನರಲ್ಲಿ ಬಂದಿರತಕ್ಕ ಆತಂಕವನ್ನು ಪರಿಹಾರ ಮಾಡಬೇಕು. ಅವರಿಗೆ ನೀವು ಸಮಾಜಾಯಿಷಿ ಕೊಡಲೇಬೇಕು. ನಂತರ ಡಿ.ಸಿ.ಪಿ. ಯವರನ್ನು ಅರೆಸ್ಟ್ ಮಾಡಿದಾಗ ಎಲ್ಲರೂ ಹೇಳಿಕೆ ಕೊಟ್ಟಿದ್ದಾರೆ. ಜಾಲಪ್ಪನವರೂ ಹೇಳಿಕೆ ಕೊಟ್ಟಿದ್ದಾರೆ, ತಪ್ಪಿತಸ್ಥರಲ್ಲದೇ ಇರುವ ಅಧಿಕಾರಿಯನ್ನು ಅರೆಸ್ಟ್ ಮಾಡಿದ್ದಾರೆ ಎಂದು ಹೇಳಿದ್ದಾರೆ, ಮಾನ್ಯ ರಾಮಕೃಷ್ಣ ಹೆಗಡೆಯವರು ಏನು ಹೇಳಿದ್ದಾರೆ ? ಸಿ.ಬಿ.ಐ. ತನಿಖೆಗೆ ವಹಿಸಬಾರದಾಗಿತ್ತು, ವಹಿಸಿದ್ದು ತಪ್ಪಾಯಿತು ಎಂದು ಹೇಳಿದ್ದಾರೆ. ಪೋಲೀಸ್ ಅಧಿಕಾರಿಗಳಿಗೂ ಕೂಡ ಅವರು ರಕ್ಷಣೆ ಕೊಡುವುದಕ್ಕೆ ಹೋಗಿದ್ದಾರೆ. ಜಾಲಪ್ಪನವರೂ ಅದೇ ರೀತಿ ರಕ್ಷಣೆ ಕೊಡುವುದಕ್ಕೆ ಹೋಗಿದ್ದಾರೆ. ಅಂದರೆ ತನಿಖೆಯ ಅವಧಿಯಲ್ಲಿ ಅವರು ಇಂಥ ಹೇಳಿಕೆಗಳನ್ನು ಕೊಡುವುದಕ್ಕೆ ಅಧಿಕಾರ ಇದೆಯೆ ? ಇದು ಸಮಂಜಸವೇ ? ಯಾವುದೇ ರಾಜ್ಯ ಸರ್ಕಾರ ನಡೆಸತಕ್ಕವರಿಗೆ ಇದು ಸರಿಯೆ ಎಂಬ ಪ್ರಶ್ನೆಯನ್ನು ನಾನು ಕೇಳುತ್ತಿದ್ದೇನೆ, ಸಿ.ಬಿ.ಐ ಅಧಿಕಾರಿಗಳಾಗಲೀ ನಮ್ಮ ಪೋಲೀಸ್ ಅಧಿಕಾರಿಗಳಾಗಲೀ ವಾಸ್ತವಿಕವಾಗಿ ತನಿಖೆ ಮಾಡತಕ್ಕದ್ದು ಕ್ರಿಮಿನಲ್ ಪ್ರೊಸೀಜರ್ ಕೋಡ್ ಮತ್ತು ಇಂಡಿಯನ್ ಪೀನಲ್ ಕೋಡ್ ಪ್ರಕಾರ. ಆ ವ್ಯವಸ್ಥೆ ಅಂದಿನಿಂದ ಇಂದಿನವರೆಗೆ ಇದೆ ಇವರು ಮಾಡಿದರೆ ಏನು. ಅವರು ಮಾಡಿದರೆ ಏನು ? ಎಲ್ಲಾ ಒಂದೆ. ಸಿ.ಬಿ.ಐ ತನಿಖೆಗೆ ವಹಿಸಿದಿರಿ. ಅದಕ್ಕೆ ಮುಂಚಿತವಾಗಿ ನೀವು ಆಲೋಚನೆ ಏತಕ್ಕೆ ಮಾಡಲಿಲ್ಲ ? ನೀವು ಸತ್ಯವಂತರು ಎಂದು ಪ್ರದರ್ಶನ ಮಾಡಬೇಕೆಂದು ಭಂಡ ಧೈರ್ಯದಿಂದ ಮಾಡಿರಬಹುದು. ನಾನು ಸಂಕಟದಿಂದ ಈ ಪದವನ್ನು ಉಪಯೋಗಿಸುತ್ತಿದ್ದೇನೆ. It is a act of bravado. Or, d.d you want to take a clean chit from the C.B.I. thinking that they would not take so much interest as they have taken now ? ಆ ಭಾವನೆಯಿಂದ ಮಾಡಿರಬಹುದು. ಆದರೆ ತನಿಖೆಯ ಸಮಯದಲ್ಲಿ ಅವರು ಸರಿ ಇಲ್ಲ, ಪಿಂಪ್‌ಗಳನ್ನು, ರೌಡಿಗಳನ್ನು, ಗೂಂಡಾಗಳನ್ನು ಕರೆದುಕೊಂಡು ಬಂದು ಹೇಳಿಕೆಗಳನ್ನು ರೆಕಾರ್ಡ್ ಮಾಡುತ್ತಿದ್ದಾರೆ ಮಾಡಿ ಕ್ರಮ ತೆಗೆದುಕೊಳ್ಳುತ್ತಿದ್ದಾರೆ ಎಂಬ ಹೇಳಿಕೆಯನ್ನು ಕೊಟ್ಟಿದ್ದಾರೆ. ಇಂಥ ಹೇಳಿಕೆಯನ್ನು ತಮ್ಮ ಹತ್ತಿರ ಇಟ್ಟುಕೊಳ್ಳಿ. ಆದರೆ ಇದನ್ನು ಸಾರ್ವಜನಿಕವಾಗಿ ಪ್ರಕಟಣೆ ಮಾಡಿದರೆ ಜನರ ಮನಸ್ಸಿನಲ್ಲಿ ಏನು ಭಾವನೆ ಬರುತ್ತದೆ ? ನಿಮ್ಮ ಸರ್ಕಾರದಲ್ಲಿ ನಂಬಿಕೆ ಬರತಕ್ಕ ಪರಿಸ್ಥಿತಿ ಉದ್ಭವವಾಗುತ್ತದೆಯೇ ಎಂಬುದನ್ನು ನೋಡಬೇಕು. ಮೂರನೆಯದು, ಶ್ರೀಮಾನ್ ಜಾಲಪ್ಪನವರು ನೇರವಾಗಿರತಕ್ಕ ಮನುಷ್ಯ. ಅವರು ಒಬ್ಬ ರೈತ ಎಂದು ಹೇಳಿದ್ದಾರೆ. ನನಗೆ ಗೊತ್ತಿರುವ ಹಾಗೆ ಅವರು ರೈತರೆ. ಆದರೆ ಅವರು ಗೃಹ ಖಾತೆ ಮಂತ್ರಿಯಾಗಿ ಏನೇನು ಕೆಲಸ ಮಾಡಿದ್ದಾರೆ ಎಂಬುದು ಪ್ರಶ್ನೆ. ತಮ್ಮನ್ನು ಅರೆಸ್ಟ್ ಮಾಡುತ್ತೇವೆ ಎಂದು ಯಾರು ಹೇಳಿದರು ? ನೀವು ಗೃಹ ಮಂತ್ರಿಯಾಗಿದ್ದೀರಿ. ಗೃಹ ಮಂತ್ರಿ ಆದ ಮೇಲೆ ನೀವು ಧೈರ್ಯ, ಸ್ಥೈರ್ಯದಿಂದ ನಡೆದುಕೊಂಡು ಜನರ ಮನಸ್ಸಿನಲ್ಲಿರುವ ಕಳವಳವನ್ನು ಪರಿಹಾರ ಮಾಡಲಿಕ್ಕೆ ಇಲಾಖೆಯಲ್ಲಿರುವ ಸತ್ಯ ಸಂಗತಿಯನ್ನು ಕಾಪಾಡುವುದಕ್ಕೆ ಪ್ರಯತ್ನ ಮಾಡುವುದು ಬಿಟ್ಟು ಆಂಟಿಸಿಪೇಟರಿ ಬೇಲ್ ಅರ್ಜಿ ಹಾಕಿದರೆ ಜನರ ಮನಸ್ಸಿನಲ್ಲಿ ಯಾವ ಅಭಿಪ್ರಾಯ ಬರುತ್ತದೆ ? ದಯಮಾಡಿ ಹೇಳಿ ಪ್ರಪಂಚದ ಇತಿಹಾಸದಲ್ಲಿ ಯಾವ ಒಬ್ಬ ಗೃಹ ಮಂತ್ರಿಯೂ ಆಂಟಿಸಿಪೇಟರಿ ಬೇಲ್‌ಗೋಸ್ಕರ ಅರ್ಜಿ ಹಾಕಿದ್ದುದನ್ನು ನಾನಂತೂ ಕಿವಿಯಲ್ಲಿ ಕೇಳಲಿಲ್ಲ. ದೊಡ್ಡ ದೊಡ್ಡ ಪೋಲೀಸ್ ಅಧಿಕಾರಿಗಳ, ಗೃಹ ಮಂತ್ರಿಗಳ ಕೆಲಸ ಏನಿದೆ ? ಸಾಮಾನ್ಯ ಜನರ ಜೀವನದಲ್ಲಿ ರಕ್ಷಣೆ ಮಾಡತಕ್ಕದ್ದು, ಕಾನೂನು ಭಂಗ ಆಗದಂತೆ ರಕ್ಷಣೆ ಮಾಡತಕ್ಕದ್ದು, ಶಾಂತಿಪಾಲನೆ ಮಾಡತಕ್ಕದ್ದು ಮಾಡಬೇಕು. ಅದು ಬಿಟ್ಟು ಆಂಟಿಸಿಪೇಟರಿ ಬೈಲ್‌ಗೆ ಅರ್ಜಿ ಹಾಕಿದರೆ ನಿಮ್ಮ ಸರ್ಕಾರದಲ್ಲಿ ಯಾರಿಗೆ ನಂಬಿಕೆ ಬರುತ್ತದೆ ? ಬಹಳ ವಿನಯ ಪೂರ್ವಕವಾಗಿ ಹೇಳುತ್ತಿದ್ದೇನೆ, ಯಾವ ರೀತಿ ಇದು ಆಯಿತು ಎಂಬುದರ ವಿವರಗಳನ್ನು ನಾನು ನೋಡಿದ್ದೇನೆ. ಮಾನ್ಯ ರಾಮಕೃಷ್ಣ ಹೆಗಡೆಯವರು ಇದರ ವಿವರ ತಮಗೆ ಗೊತ್ತೆಂದು ಅಂದೇ ಹೇಳಿದ್ದಾರೆ. ಇವರನ್ನು ಯಾರು ಕೊಂದರು ಎಂಬುದು ನನಗೆ ಗೊತ್ತು ಎಂಬುದಾಗಿ ಪತ್ರಿಕೆಯಲ್ಲಿ ಹೇಳಿರುವುದು, ಪತ್ರಿಕೆಯಲ್ಲಿ ಬಂದಿರುವುದನ್ನು ನಾನು ನೋಡಿದ್ದೇನೆ. ಇಂತಹ ಒಂದು ಅಪ್ರಾಸಂಗಿಕವಾದ ಘಟನೆಯೊಂದು ಆಗಬಾರದಿತ್ತು. ಆಗಿದೆ ಅದಕ್ಕೋಸ್ಕರ ಹೇಳುತ್ತಿದ್ದೇನೆ, ಸಾರ್ವಜನಿಕರ ಹಿತದೃಷ್ಟಿಯಿಂದ, ಹಾಗೂ ಸಾರ್ವಜನಿಕರೂ ಕೂಡ ಇದರ ಬಗ್ಗೆ ಏನು ಹೇಳುತ್ತಾರೆ ಎಂಬುದರ ಗುಲ್ಲು ಎದ್ದಿದೆ. ಈ ಒಂದು

ಕೊಲೆಯು ಪ್ರಕರಣದಿಂದಾಗಿ ಶಾಂತಿಗೆ ಭಂಗವಾಗಿದೆ, ಕಾನೂನಿಗೆ ಭಂಗವಾಗಿದೆ, ನೀತಿ ಭಂಗವಾಗಿದೆ. ಸಾರ್ವಜನಿಕ ಹಿತಾಸಕ್ತಿಗೆ ಧಕ್ಕೆ ಹಾಗೂ ಸಾರ್ವಜನಿಕರಿಗೆ ಸರಿಯಾದ ರಕ್ಷಣೆಯನ್ನು ಕೊಡುವಂತಹ ಶಕ್ತಿ ಇವರಿಗೆ ಇಲ್ಲವೆಂದು ಹೇಳುತ್ತಿದ್ದೇನೆ. ಈ ವಿಚಾರದಲ್ಲಿ ಸಾರ್ವಜನಿಕರಲ್ಲಿ ಸಂಶಯ ಕವಿದಿದೆ. ಕಾತುರತೆ ಕವಿದಿದೆ. ಅದನ್ನು ನಿವಾರಣೆ ಮಾಡುವುದಕ್ಕೆ ನಾವು ತಂದಿರುವಂತಹ ಈ ನಿಲುವಳಿ ಸೂಚನೆಗೆ ಕಾವುಒಪ್ಪಿಗೆ ಕೊಡಬೇಕೆಂದು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ,

ಅಧ್ಯಕ್ಷರು.—ಸರ್ಕಾರದಿಂದ ಉತ್ತರ.

ಶ್ರೀ ಬಿ. ಲಕ್ಕಪ್ಪ.—ಮಾನ್ಯ ಅಧ್ಯಕ್ಷರೆ, ೨ ನಿಮಿಷ ನಾನೂ ಮಾತನಾಡುತ್ತೇನೆ. ಇದಕೆ ನಾನೂ ಕೂಡ ಸಹಿ ಮಾಡಿದ್ದೇನೆ.

ಅಧ್ಯಕ್ಷರು —ಒಂದೂವರೆ ಗಂಟೆಯಾಯಿತು. ಎಲ್ಲರೂ ಮಾತನಾಡುವುದಕ್ಕೆ ಪ್ರಾರಂಭ ಮಾಡಿದರೆ ಹೇಗೆ ? ನಿಲುವಳಿ ಸೂಚನೆಗೆ ಅವಕಾಶ ಕೊಟ್ಟ ಮೇಲೆ ಮಾತನಾಡಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—೫ ನಿಮಿಷ ಮಾತನಾಡುತ್ತಾರೆ. ಅವಕಾಶ ಮಾಡಿಕೊಡಿ, ಅವರೂ ಸಹಿ ಮಾಡಿದ್ದಾರೆ.

ಅಧ್ಯಕ್ಷರು —ನೀವು ೬೬ ಜನರೂ ಸಹಿ ಮಾಡಿಕೊಡುತ್ತೀರಿ. ಅಂದರೆ ೬೬ ಜನರಿಗೂ ಅವಕಾಶ ಮಾಡಿಕೊಡಬೇಕೆ ? ಈಗಾಗಲೇ ೭ ಜನ ಮಾತನಾಡಿದ್ದಾರೆ. ಒಂದೂವರೆ ಗಂಟೆಯಾಯಿತು.

ಶ್ರೀ ಬಿ. ಲಕ್ಕಪ್ಪ.—೨ ನಿಮಿಷ ಅವಕಾಶ ಕೊಡಿ.

ಅಧ್ಯಕ್ಷರು.—ಆಯಿತು ೨ ನಿಮಿಷದಲ್ಲಿ ಮುಗಿಸಿ.

ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ).— ಮಾನ್ಯ ಅಧ್ಯಕ್ಷರೆ, ಈ ರಾಜ್ಯದಲ್ಲಿ ದಿನ ನಿತ್ಯ ನೂರಾರು ಕೊಲೆಗಳು ನಡೆಯುತ್ತಿವೆ. ಈ ರಾಜ್ಯದ ಎಲ್ಲಾ ವರ್ಗದ ಜನರ...

(ಗೊಂದಲ)

ಶ್ರೀ ಬಿ ಆರ್. ನೀಲಕಂಠಪ್ಪ.— ಮಾನ್ಯ ಅಧ್ಯಕ್ಷರೆ...

(ಗೊಂದಲ)

ಶ್ರೀ ಬಿ. ಲಕ್ಕಪ್ಪ.— ಈ ರಾಜ್ಯದಲ್ಲಿ ಹಾಗೂ ರಾಷ್ಟ್ರದಲ್ಲಿರತಕ್ಕ ಎಲ್ಲಾ ವರ್ಗದ ಜನರ ಮನಸ್ಸನ್ನು ಕಲಕಿರತಕ್ಕ ಕೊಲೆ ಪ್ರಕರಣ ಇದು ಆಗಿದೆ. ಇದನ್ನು ಸಿ.ಬಿ ಐ ಗೆ ರೆಫರ್ ಮಾಡಿರತಕ್ಕ ರಾಜ್ಯ ಸರ್ಕಾರವನ್ನು ಹಾಗೂ ಮಾನ್ಯ ಮುಖ್ಯಮಂತ್ರಿಗಳನ್ನು ಈ ರಾಜ್ಯದ ಜನ ಒಳ್ಳೆಯ ದೃಷ್ಟಿಯಿಂದ ನೋಡತಕ್ಕಂತಹದ್ದು ಸಹ ಇತ್ತು. ಆದರೆ ಇವೊತ್ತು ಏನಾಗಿದೆ ಎಂದರೆ ಗೃಹ ಸಚಿವರಾದ ಶ್ರೀಮಾನ್ ಜಾಲಪ್ಪನವರು ಹಾಗೂ ಮಾನ್ಯ ಮುಖ್ಯಮಂತ್ರಿಗಳು ಸಿ.ಬಿ.ಐ. ತನಿಖೆ ಪ್ರಾರಂಭ ಮಾಡುವುದಕ್ಕಿಂತ ಮುಂಚಿತವಾಗಿ ಪೋಲೀಸ್ ಅಧಿಕಾರಿಗಳು ಯಾರ ಇದನ್ನು ಮಾಡಿಲ್ಲ ಎಂಬುದಾಗಿ ಹೇಳುವುದಕ್ಕೆ ಹೊರಟರು. ಪೋಲೀಸರಿಂದ ಕೊಲೆಯಾಗಿಲ್ಲ. ಇದರಲ್ಲಿ ಸರ್ಕಾರದ ಹಸ್ತಕ್ಷೇಪವಿಲ್ಲ ಎನ್ನ ತಕ್ಕಂಥ ಧಾಟಿಯಲ್ಲಿ ಪ್ರಯತ್ನ ನಡೆಯಿತು. ಆದರೆ ಇದರ ಬಗ್ಗೆ ಹೊರಗಿನ ಜನರ ಹೋರಾಟ ಹಾಗೂ ಈ ಸದನದಲ್ಲಿ ಇರತಕ್ಕ ನಮ್ಮೆಲ್ಲರ ಒತ್ತಡದಿಂದ, ಸರ್ಕಾರಕ್ಕೂ ಇದು ಮನವರಿಕೆಯಾಗಿ ಇದನ್ನು ಸಿ.ಬಿ.ಐ.ಗೆ ವಿಚಾರಣೆ ಮಾಡುವ ಸಲುವಾಗಿ ವಹಿಸಿದರು. ಆದರೆ ಸಿ.ಬಿ.ಐ.ನವರು ಇಷ್ಟೇ ದಿವಸಗಳಲ್ಲಿ ತನಿಖೆಯನ್ನು ಪ್ರಾರಂಭ ಮಾಡಿ ಮುಗಿಸಬೇಕೆಂಬ ರೂಲು ಏನೂ ಇಲ್ಲ. ಅವರೂ ಕೂಡ ಪೂರ್ವಭಾವಿಯಾಗಿ ಎಲ್ಲಾ ವ್ಯವಸ್ಥೆಯನ್ನು ಮಾಡಿಕೊಂಡು ತನಿಖೆಯನ್ನು ಪ್ರಾರಂಭ ಮಾಡಿದರು ಯಾವಾಗ ಪೋಲೀಸ್ ನವರು. ಸರ್ಕಾರ ಇದರಲ್ಲಿ ಇನ್ವಾಲ್ವ್ ಆಗಿರತಕ್ಕ ಪರಿಸ್ಥಿತಿಯನ್ನು ಕಂಡಾಗ ಸಂಬಂಧಪಟ್ಟವರನ್ನು ಅರೆಸ್ಟ್ ಮಾಡಿದರು. ಇದರಿಂದಾಗಿ ಈ ಸರ್ಕಾರದಲ್ಲಿ ಉನ್ನತ ಹುದ್ದೆಯಲ್ಲಿರತಕ್ಕವರೇ ಇಂತಹದನ್ನು ಮಾಡಿರುವಾಗ ಸಾಮಾನ್ಯ ಜನರಿಗೆ ಯಾವ ರೀತಿಯ ರಕ್ಷಣೆಯನ್ನು ಕೊಡುತ್ತಾರೆಂಬ ಸಂಶಯ ಸಾರ್ವಜನಿಕರಲ್ಲಿ ಮೂಡಿದೆ. ಕಾನೂನು ಇರುವಂಥದ್ದು ಎಲ್ಲರಿಗೂ ಒಂದೆ. ಇದು ಇರತಕ್ಕಂಥದ್ದು ಪ್ರಜಾಪ್ರಭುತ್ವದ ಒಂದು ವ್ಯವಸ್ಥೆ. ಹೀಗಿರುವಾಗ ಅಧಿಕಾರದಲ್ಲಿರುವವರಿಗೆ ಒಂದು ರೀತಿಯ ಕಾನೂನು, ಬಡವರ್ಗದವರಿಗೆ ಮತ್ತೊಂದು ಕಾನೂನು ಎಂಬುದಾಗಿ ಇಲ್ಲ. ಹೀಗಿರುವಾಗ ಸಿ.ಬಿ.ಐ.ನವರು ಸಂಬಂಧಪಟ್ಟವರನ್ನು ಅರೆಸ್ಟ್ ಮಾಡಿದ ಮೇಲೆ ಸರ್ಕಾರ ಇದರಲ್ಲಿ ಇನ್ವಾಲ್ವ್ ಆಗಿದೆ ಎಂಬ

ಪ್ರಶ್ನೆ ಬಂದಾಗ ಇವರುಗಳು ಹೇಳಿಕೆಯನ್ನು ಕೊಡುವುದಕ್ಕೆ ಪ್ರಾರಂಭ ಮಾಡಿದರು. ಸಿ.ಬಿ.ಐ. ಈ ರಾಜ್ಯ ಹಾಗೂ ರಾಷ್ಟ್ರದ ಒಂದು ಉತ್ತಮವಾದ ಸಂಸ್ಥೆ. ಇಂತಹ ಒಂದು ಸಂಸ್ಥೆಯ ಮೇಲೆ ಜನತೆಗೆ ಕೆಟ್ಟ ಭಾವನೆ ಬರುವಂತಹ ರೀತಿಯಲ್ಲಿ ಉನ್ನತ ಹುದ್ದೆಯಲ್ಲಿರುವಂತಹ ಮಾನ್ಯ ಮುಖ್ಯ ಮಂತ್ರಿಗಳು, ಗೃಹ ಸಚಿವರು ತಮ್ಮ ಹೇಳಿಕೆಗಳನ್ನು ನೀಡಿ, ಈ ಸಂಸ್ಥೆಯನ್ನು ಖಂಡಿಸುವ ಹಂತಕ್ಕೆ ಹೋಗಿದ್ದಾರೆ. ಪ್ರಜಾಪ್ರಭುತ್ವವನ್ನೇ ಟೀಕೆ ಮಾಡುವಂತಹ ಧಾಟಿಯಲ್ಲಿ ಹೊರಟಾಗ ಜನ ಭಯಭೀತರಾಗಿದ್ದಾರೆ. ಜೊತೆಗೆ ಈ ಸದನ ಈ ಬಗ್ಗೆ ಏನು ಹೇಳುತ್ತದೆ ಎಂಬ ಬಗ್ಗೆ ಈ ಸದನದ ಸದಸ್ಯರನ್ನು ಆಯ್ಕೆ ಮಾಡಿದ ಜನತೆ ತಿಳಿದುಕೊಳ್ಳುವುದರಲ್ಲಿ ಕುತೂಹಲವನ್ನು ಹೊಂದಿದವರಾಗಿದ್ದಾರೆ. ಆದುದರಿಂದ ಈ ವಿಷಯದ ಬಗ್ಗೆ ಸದನದ ಸದಸ್ಯರು ಚರ್ಚೆ ಮಾಡಿದಾಗ ಇದರ ಹಿನ್ನಲೆ ಮತ್ತು ಇಚ್ಛಿನ ವಿಚಾರಗಳನ್ನು ಜನತೆ ತಿಳಿದುಕೊಳ್ಳುವುದಕ್ಕೆ ಅವಕಾಶವಾಗುತ್ತದೆ, ಮಾನ್ಯ ಮುಖ್ಯಮಂತ್ರಿಗಳಾಗಲಿ, ಗೃಹ ಸಚಿವರಾಗಿದ್ದವರಾಗಲೀ ಹೇಳಿರತಕ್ಕ ಟೀಕೆ, ಮಾಡಿರತಕ್ಕ ಹೇಳಿಕೆಗಳು ಏನಿವೆ ಅವನ್ನು ಯಾವ ಉದ್ದೇಶಕ್ಕೆ ಹೇಳಿದರು ಎಂದು ಜನರು ತಿಳಿದುಕೊಳ್ಳುತ್ತಾರೆ. ಆದುದರಿಂದ ಈ ಒಂದು ನಿಲುವಳಿ ಸೂಚನೆಗೆ ಅವಕಾಶ ಮಾಡಿಕೊಟ್ಟು ಚರ್ಚೆ ನಡೆಸಿಕೊಡುವ ಬಗ್ಗೆ ಅವಕಾಶವನ್ನು ಕೊಡಬೇಕೆಂದು ಹೇಳಿ ತಮ್ಮನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಸಿ.ಪಿ. ಮೂಡಲಗಿರಿಯಪ್ಪ (ಶಿರಾ).— ಅಧ್ಯಕ್ಷರೇ, ತಮ್ಮ ಮುಂದೆ ಮಂಡಿಸಿರತಕ್ಕ ನಿಲುವಳಿ ಸೂಚನೆಯ ಬಗ್ಗೆ ಪ್ರಸ್ತಾಪ ಮಾಡಲು ತಮ್ಮ ಅನುಮತಿಯನ್ನು ಇವೊತ್ತು ಕೋರುತ್ತಿದ್ದೇನೆ. ಸಂವಿಧಾನಾತ್ಮಕವಾಗಿ ಕಾನೂನು ರೀತ್ಯ ನಾವೆಲ್ಲರೂ ಕೂಡಾ ಈ ಸಭೆಯಲ್ಲಿ ಭಾಗವಹಿಸುತ್ತಿದ್ದೇವೆ. ಅದೇ ರೀತಿ ಅನೇಕರಿಗೆ ಹಲವಾರು ಜವಾಬ್ದಾರಿಗಳನ್ನು ಕೂಡಾ ಈ ಸಂದರ್ಭದಲ್ಲಿ ಈ ಸದನದಲ್ಲಿ ಕೊಡಲಾಗಿದೆ. ಅವೆಲ್ಲಕ್ಕಿಂತಲೂ ಮುಖ್ಯವಾಗಿ ಮುಖ್ಯಮಂತ್ರಿಗಳು ಮತ್ತು ಇತರೇ ಮಂತ್ರಿಗಳಿಗೆ ಕೂಡಾ ಹಲವು ಜವಾಬ್ದಾರಿಗಳನ್ನು ಕೊಟ್ಟಿದ್ದೇವೆ. ಆ ಜವಾಬ್ದಾರಿ ಸ್ಥಾನದಲ್ಲಿ ಕುಳಿತುಕೊಂಡು ಅವರು ಏನೇ ಮಾತನಾಡಿದರೂ ಅದು ಜವಾಬ್ದಾರಿಯುತವಾದ ಮಾತು ಎನ್ನುವುದನ್ನು ಸಭೆ ಮತ್ತು ಜನತೆ ಕೂಡಾ ಅದನ್ನು ನಂಬತಕ್ಕ ರೀತಿಯಲ್ಲಿ ನಮ್ಮ ನಡವಳಿಕೆಯನ್ನು ನಮ್ಮ ಕರ್ತವ್ಯವನ್ನು ಮಾಡಿಕೊಂಡು ಹೋಗಬೇಕು. ಒಂದೇ ಒಂದು ವಿಷಯವನ್ನು ನಾವು ಉದಾಹರಣೆಗೆ ಹೇಳಬೇಕು ಎಂದರೆ, ನಮ್ಮ ಮುಖ್ಯಮಂತ್ರಿಯವರು ರಶೀದ್ ಕೇಸ್ ಬಗ್ಗೆ ಎಲ್ಲಾ ನನಗೆ ಗೊತ್ತಿದೆ. ಯಾರು ಕೊಲೆ ಮಾಡಿದ್ದಾರೆಂದು ಗೊತ್ತಿದೆ ಎಂದು ಹೇಳಿರುವುದು ಪತ್ರಿಕೆಗಳಲ್ಲಿ ಬಂದಿದೆ. ಅವರು ಹೇಳಿದ ಮಾತು ಪತ್ರಿಕೆಗಳಲ್ಲಿ ಬಂದಿದೆ. ಆದರೆ ಒಂದು ವಿಚಾರವನ್ನು ನಾನು ಹೇಳುತ್ತೇನೆ. ಅವರಿಗೆ ನಿಜವಾಗಿಯೂ ವಿಚಾರ ಗೊತ್ತಿದ್ದೇಯಾದರೆ ಅವರು ಸಂವಿಧಾನಾತ್ಮಕವಾಗಿ ಐಪಿಸಿ ಸೆಕ್ಷನ ೨೦೨ರ ಪ್ರಕಾರ ಶಿಕ್ಷೆಗೆ ಅರ್ಹರಾಗುತ್ತಾರೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ, ಏಕೆಂದರೆ ಯಾರೇ ಒಬ್ಬ ವ್ಯಕ್ತಿ, ಅವರು ಯಾವುದೇ ಉನ್ನತ ಸ್ಥಾನದಲ್ಲಿ ಇರಲಿ, ಅಧಿಕಾರದಲ್ಲಿ ಇರಲಿ ತನಗೆ ಗೊತ್ತಿರುವ ವಿಚಾರವನ್ನು ಶೋಧನೆ ಮಾಡತಕ್ಕ ಸಮಯದಲ್ಲಿ ಹೇಳದಿದ್ದರೆ, ಕಾನೂನು ಚೌಕಟ್ಟಿಗೆ ಭಂಗ ತರುವ ವಿಚಾರವನ್ನು ತಿಳಿದಿದ್ದೂ ಕೂಡಾ ಸುಮ್ಮನಿದ್ದರೆ ಐಪಿಸಿ ೨೦೨ನೇ ಸೆಕ್ಷನ್ ಪ್ರಕಾರವಾಗಿ ಆತ ಶಿಕ್ಷೆಗೆ ಅರ್ಹನಾಗುತ್ತಾನೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಮತ್ತೆ ಮತ್ತೆ ಹೇಳುತ್ತಾ ಈ ಒಂದು ಗಂಭೀರವಾದ ಪರಿಸ್ಥಿತಿ ಈ ಸಂದರ್ಭದಲ್ಲಿ ಒದಗಿ ಬಂದಿರುವುದರಿಂದ ತಾವು ಈ ನಿಲುವಳಿ ಸೂಚನೆಗೆ ಅನುಮತಿ ಕೊಡಬೇಕೆಂದು ಹೇಳಿ ಮತ್ತೊಂದು ವಿಚಾರವನ್ನು ಹೇಳುತ್ತೇನೆ, ಇದಕ್ಕೆ ಪೂರಕವಾಗಿ ಇದಕ್ಕೆ ಸಪ್ಪೋರ್ಟಿಂಗ್ ಆಗಿ ಈ ಸಿಬಿಐ ಅಧಿಕಾರಿಗಳ ಕರ್ತವ್ಯ ನಿಷ್ಠೆಯನ್ನು ಇವರು ಪ್ರಶ್ನೆ ಮಾಡುತ್ತಾ ಬಂದಿದ್ದಾರೆ. ಇವರು ಕೊಟ್ಟಿರತಕ್ಕ ಹೇಳಿಕೆಯನ್ನು ನೋಡಿದರೆ ನಿಜವಾಗಿಯೂ ಕೂಡಾ ಒಂದು ಮೋಟೀವ್ ಇಟ್ಟುಕೊಂಡು ಸ್ವತಃ ಹೈಡ್ ಮಾಡುತ್ತಿದ್ದಾರೆ. ಈ ರೀತಿ ಹೈಡ್ ಮಾಡಿಕೊಂಡು ಎವಿಡೆನ್ಸ್‌ನ್ನು ಡಿಸ್‌ಟ್ರಾಯ್ ಮಾಡುವುದಕ್ಕೆ ಹೊರಟಿದ್ದಾರೆಂದು ನೇರವಾಗಿ ಆಪಾದನೆ ಮಾಡಿ ಈ ಸಂದರ್ಭದಲ್ಲಿ ಈ ಒಂದು ಸನ್ನಿವೇಶಕ್ಕೋಸ್ಕರವಾಗಿಯೇ ತಾವು ಅನುಮತಿಯನ್ನು ಕೊಡಬೇಕೆಂದು ಹೇಳಿ ಈ ನಿಲುವಳಿ ಸೂಚನೆ ಬಗ್ಗೆ ಚರ್ಚೆ ಮಾಡುವುದಕ್ಕೆ ಅನುಮತಿಯನ್ನು ಕೊಡಬೇಕೆಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

೩-೩೦ ಪಿ. ಎಂ.

ಅಧ್ಯಕ್ಷರು.— ಈಗ ಮಾನ್ಯ ಮುಖ್ಯಮಂತ್ರಿಗಳು ಮಾತನಾಡಲಿ.

ಶ್ರೀ ರಾಮಕೃಷ್ಣಹೆಗಡೆ.— ಮಾನ್ಯ ಅಧ್ಯಕ್ಷರೆ, ಇಲ್ಲಿಯವರೆಗೆ ಆದಂತಹ ಚರ್ಚೆಯನ್ನು ನೋಡಿದರೆ ನಿಲುವಳಿ ಸೂಚನೆಯ ಮೇಲೆ ಪ್ರತ್ಯೇಕವಾದ ಚರ್ಚೆ ಅಗತ್ಯವಿದೆಯೆಂದು ನನಗೆ ಕಾಣಿಸುವುದಿಲ್ಲ. ನಿಲುವಳಿ ಸೂಚನೆಯ ಅಡ್ಮಿಸಿಬಿಲಿಟಿಯ ಬಗ್ಗೆ ಇದು ನಮ್ಮ ನಿಯಮಾವಳಿಗಳ ಪ್ರಕಾರ ಬರುತ್ತಿದೆಯೇ ಅನುಮತಿಯನ್ನು ಪಡೆಯುವುದಕ್ಕೆ ಸಾಧ್ಯವೋ ಇಲ್ಲವೋ ಎಂಬುದನು ಹೇಳುವುದನ್ನು ಬಿಟ್ಟು, ಕೇಸಿನ ಮೆರಿಟ್ ಮೇಲೆ ನಾವು ಮಾತನಾಡುವುದಿಲ್ಲ ಎಂದು ಹೇಳುತ್ತಾ, ಹೇಳುತ್ತಾ, ತಮ್ಮ ಅಭಿಪ್ರಾಯವನ್ನು ಕೇಸಿನ ವಿಚಾರದಲ್ಲಿ ಚರ್ಚೆಯಲ್ಲಿ ಭಾಗವಹಿಸಿದಂತಹ ಅನೇಕ ಸದಸ್ಯರು ವ್ಯಕ್ತ ಮಾಡಿದ್ದಾರೆ.

ಶ್ರೀಮತಿ ಕೆ ಎಸ್. ನಾಗರತ್ನಮ್ಮ.— ಪತ್ರಿಕೆಯಲ್ಲಿ ಬಂದಿರುವುದನ್ನು ನಾವು ಹೇಳಿದ್ದೇವೆ.

ಶ್ರೀ ರಾಮಕೃಷ್ಣಹೆಗಡೆ.— ಪತ್ರಿಕೆಯಲ್ಲಿ ಏನು ಹೇಳಿದರು ಮಧ್ಯದಲ್ಲಿ ಯಾರೂ ಮಾತನಾಡ ಬೇಡಿ ನಾಲ್ಕು ಸಲ ಕೊಲೆಯಾಗಿದೆ ಕೊಲೆಯಾಗಿದೆಯೆಂದು ಹೇಳಿದರು, ಕೊಲೆಯಾಗಿರುವುದನ್ನು ಯಾರು ನೋಡಿದ್ದಾರೆ ? ಅದು ಕೊಲೆಯೆ ? ದುರ್ಮರಣವೆ ಅಸ್ವಾಭಾವಿಕ ಮರಣವೆ. ಅದು ಯಾರಿಗೆ ಗೊತ್ತು ?

ಶ್ರೀ ಎಸ್. ಬಂಗಾರಪ್ಪ.— ನಿಮಗೆ ಹೇಗೆ ಗೊತ್ತು ?

ಶ್ರೀ ರಾಮಕೃಷ್ಣ ಹೆಗಡೆ.— ನನಗೆ ಗೊತ್ತಿಲ್ಲ, ಅದು ಯಾರಿಗೂ ಗೊತ್ತಿಲ್ಲ. ನೀವು ಕೊಲೆಯಾಗಿದೆಯೆಂದು ಯಾವ ಆಧಾರದ ಮೇಲೆ ಹೇಳುತ್ತೀರಿ ?

ಶ್ರೀ ಎಸ್. ಬಂಗಾರಪ್ಪ.— ನೀವು ಕೊಲೆಯಾಗಿಲ್ಲವೆಂದು ಯಾವ ಆಧಾರದ ಮೇಲೆ ಹೇಳುತ್ತೀರಿ ? ಅದರ ಬಗ್ಗೆ ಇನ್‌ವೆಸ್ಟಿಗೇಷನ್ ಆಗಲಿಯೆಂದು ಹೇಳುತ್ತಿದ್ದೇವೆ.

ಅಧ್ಯಕ್ಷರು.— ಮಾನ್ಯ ಬಂಗಾರಪ್ಪನವರೆ, ಅವರು ಹೇಳುತ್ತಿದ್ದಾರೆ ಹೇಳಲಿ.

ಶ್ರೀ ಎಸ್. ಬಂಗಾರಪ್ಪ — ನಾನು ಯಾವುದನ್ನೂ ಹೇಳುತ್ತಿಲ್ಲ.

ಶ್ರೀ ರಾಮಕೃಷ್ಣಹೆಗಡೆ,— ಅವರು ಈಗಾಗಲೇ ಜಡ್ಜ್‌ಮೆಂಟ್ ಬರೆದಿದ್ದಾರೆ, ಮಾನ್ಯ ಜಾಲಪ್ಪನವರು ಆಪಾದಿತರು ಎಂದು ಹೇಳಿದರು, ಯಾರೂ ಇವರನ್ನು ಇಲ್ಲಿಯವರೆಗೆ ಆಪಾದಿತರನ್ನಾಗಿ ಮಾಡಿದ್ದಾರೆ ? ಈ ಕ್ಷಣದವರೆಗೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಯಾರು ಹೇಳಿದರು ?

ಅಧ್ಯಕ್ಷರು.— ನೀವು ಮಾತನಾಡುವಾಗ ಅವರು ಸುಮ್ಮನಿದ್ದರು, ಅವರು ಮಾತನಾಡುವಾಗ ತಾವು ಸ್ವಲ್ಪ ಕೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ನಾವು ಹೇಳದಿರುವ ಶಬ್ದವನ್ನು ಅವರಿಗೆ ಬೇಕಾದ ಶಬ್ದವನ್ನು ನಮ್ಮ ಬಾಯಿಂದ ಬಂದಿದೆಯೆಂದು ಏತಕ್ಕೆ ಹೇಳಬೇಕು ?

ಅಧ್ಯಕ್ಷರು — ತಾವು ಮಧ್ಯಪ್ರವೇಶ ಮಾಡಿ ಮಾತನಾಡಬೇಡಿ. ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ರಾಮಕೃಷ್ಣಹೆಗಡೆ.— ಆಪಾದನೆಗಳಿಗೆ ಒಳಗಾದಂತಹವರು ಆಪಾದಿತರು ಎಂದು ಇದೆ, ರೆಕಾರ್ಡ್‌ನಲ್ಲಿದೆ ನೋಡಿ. ಆಪಾದಿತರು ಎಂದು ಹೇಳಿರುವುದು ರೆಕಾರ್ಡ್‌ನಲ್ಲಿ ಇಲ್ಲದಿದ್ದರೆ ನನ್ನ ಮಾತನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.— ರೆಕಾರ್ಡ್ ನೋಡಿಸಿ.

ಶ್ರೀ ರಾಮಕೃಷ್ಣಹೆಗಡೆ.— ನೋಡುವುದೇನು, ನಾನು ಇಲ್ಲಿಯೇ ಕುಳಿತುಕೊಂಡು ಕೇಳಿದ್ದೇನೆ. ಈ ಕ್ಷಣದವರೆಗೆ ಯಾರೂ ಕೂಡ ನಮ್ಮ ಹಿಂದಿನ ಗೃಹ ಮಂತ್ರಿಗಳು ಈ ಕೇಸ್‌ನಲ್ಲಿ ಆಪಾದಿತರೆಂದು ಹೇಳಲಿಲ್ಲ. ಈಗ ಮಾನ್ಯ ಮೊಯಿಲಿಯವರು ಇಲ್ಲ, ಅವರು ಇರಬೇಕಾಗಿತ್ತು. ಅವರು ಹೇಳಿದರು ಇದೊಂದು ಕರಾಳ ದಿನ ಎಂದು, ಅವರ ಬಾಯಿಲ್ಲಿ ಯಾವುದೇ ಘಟನೆಯಾದರೂ ಇದು ಕರಾಳ ದಿನ ಆಗುತ್ತದೆ. ೧೯೭೭ರಲ್ಲಿ ಕೇರಳದಲ್ಲಿ ಏನಾಯಿತು ಎಂಬುದು ಅವರಿಗೆ ಗೊತ್ತಿರಬಹುದು. ** ಕೇರಳದಲ್ಲಿ

** Matter, expanjed as ordered by the Speaker.

ಯಾವ ಹುಡುಗನ ಕೊಲೆಯಾಯಿತು ಆ ಹುಡುಗನ ತಂದೆ ಅವರನ್ನು ಹೋಗಿ ಭೇಟಿಯಾದರು. ಆದರೆ ಅವರು ಅಫಿಡವಿಟ್ ಹಾಕುವಾಗ ಭೇಟಿಯಾಗಲಿಲ್ಲವೆಂದು ಹೇಳಿದರು. ವಿಶ್ವನಾಥ್‌ರವರು ಎಂ.ಪಿ. ಯಾಗಿದ್ದರು ಅವರು ಒಂದು ಪತ್ರ ಬರೆದಿದ್ದರು, ಅಫಿಡವಿಟ್ ಹಾಕುವಾಗ ಪತ್ರ ಬರೆಯಲಿಲ್ಲವೆಂದು ಹಾಕಿದರು. ಹುಡುಗನ ತಂದೆ ಭೇಟಿಯಾದದ್ದು ನಿಜ. ವಿಶ್ವನಾಥ್‌ರವರು ಪತ್ರ ಬರೆದದ್ದು ಹೌದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಇದಕ್ಕೂ ಆದಕ್ಕೂ ಏನು ಸಂಬಂಧವಿದೆ ? ಇದರ ಬಗ್ಗೆ ಹೇಳಬೇಕು. ಯಾರಿಗೆ ಸಂಬಂಧವಿಲ್ಲವೋ ಯಾರು ಈ ಮನೆಯ ಸದಸ್ಯರಲ್ಲವೋ ಅವರ ಬಗ್ಗೆ ಪ್ರಸ್ತಾಪ ಮಾಡತಕ್ಕದ್ದು ಸರಿಯಲ್ಲ.

MR. SPEAKER — Please do not interfere.

SRI M. MAALLIKARJUNA KHARGE. — He is arguing g as to whether this can be admitted or not.

ಶ್ರೀ ರಾಮಕೃಷ್ಣ ಹೆಗಡೆ. — ಇವೊತ್ತಿನವರೆಗೆ ಯಾವ ಎಫ್.ಐ.ಆರ್.ನಲ್ಲಿ ಅವರ ಹೆಸರಿಲ್ಲ. ಎಫ್.ಐ.ಆರ್.ನಲ್ಲಿ ನಾರಾಯಣ್‌ರವರ ಹೆಸರು ಇತ್ತೆ ? ಇದಕ್ಕೂ ನಾನು ಸಿ.ಬಿ.ಐ. ವಿರುದ್ಧ ಟೀಕೆ ಮಾಡಿದ್ದುದು ನಿಜ. ನನ್ನ ಮನಸ್ಸಿಗೆ ಅನಿಸಿದ್ದು ಯಾವ ವಿಶ್ವಾಸದಿಂದ ಸಿ.ಬಿ.ಐ. ತನಿಖೆಗೆ ನಾವು ಪರವಾನಗಿಯನ್ನು ಕೊಟ್ಟೆವೋ ಆ ವಿಶ್ವಾಸಾರ್ಹತೆ ನಂತರ ಅವರಲ್ಲಿ ಕಾಣಲಿಲ್ಲ...

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ — ಕೆಲವು ವಿಚಾರ ಹೇಳುತ್ತೇನೆ, ಸಂದೇಹ ಬರಲಿಕ್ಕೆ ಕಾರಣವೇನು? ಶ್ರೀಮಾನ್ ರಷೀದ್‌ರವರು ಬಾರ್ ಅಸೋಸಿಯೇಷನ್‌ಗೆ ಬರೆಯಲಾಗಿದೆಯೆಂದು ಹೇಳತಕ್ಕ ಪತ್ರ. ಈ ವಿಚಾರವನ್ನು ಹಿಂದೆಯೂ ಕೂಡ ನಾನು ಹೇಳಿದ್ದೇನೆ.

(ಗೊಂದಲ)

(ಕಾಂಗ್ರೆಸ್ ಪಕ್ಷದ ಸದಸ್ಯರು ಅನೇಕರು ಏಕ ಕಾಲದಲ್ಲಿ ಎದ್ದು ನಿಂತು ಮಾತನಾಡಲು ಪ್ರಯತ್ನಿಸಿದರು)

ಅಧ್ಯಕ್ಷರು. — ನಿಮಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ, ನೀವು ಮಾತನಾಡಿದ್ದೀರಿ. ಅವರು ಸುಮ್ಮನೆ ಕುಳಿತುಕೊಂಡು ಕೇಳಿದ್ದಾರೆ. ಈಗ ನೀವು ಹೀಗೆ ಮಾಡಿದರೆ ಹೇಗೆ? ಶ್ರೀ ರಾಮಪ್ಪನವರೇ ನೀವು ಕುಳಿತುಕೊಳ್ಳಿ.

ಶ್ರೀ ರಾಮಕೃಷ್ಣ ಹೆಗಡೆ. — ಆಮೇಲೆ ಶ್ರೀ ರಶೀದ್ ಅವರು ಅವರ ಪತ್ನಿಗೆ ಬರೆದಂಥ ಒಂದು ಪತ್ರ. ಅವರ ಪತ್ನಿಗೆ ಕಳಿಸಿದಂಥ ಒಂದು ಕಾರ್ಡು. ಈ ಮೂರರಲ್ಲಿ ಮೇಲ್ನೋಟಕ್ಕೆ ಒಂದಕ್ಕೊಂದು ವಿರೋಧಾಭಾಸ ಇದೆ, ಈ ವಿಚಾರದಲ್ಲಿ ಸಿ.ಬಿ.ಐ.ಯವರು ನನಗೆ ಗೊತ್ತಿದ್ದ ಮಟ್ಟಿಗೆ ಯಾವುದೇ ರೀತಿಯ ತನಿಖೆಯನ್ನು ಇದುವರೆಗೂ ಮಾಡಿಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ.— ಸಿ.ಬಿ.ಐ.ನವರು ನಿಮಗೆ ಎಲ್ಲವನ್ನೂ ಬ್ರೀಫ್ ಮಾಡಿದ್ದಾರೆ ಅಲ್ಲವೇ ?

ಶ್ರೀ ರಾಮಕೃಷ್ಣ ಹೆಗಡೆ. — ಎಲ್ಲಾ ನಿಮ್ಮ ಸಲಹೆ ಪ್ರಕಾರವೇ ಮಾಡಿದರು. ನಿಮ್ಮ ಬೇಡಿಕೆ ಪ್ರಕಾರ, ನಿಮ್ಮ ಇಚ್ಛೆ ಪ್ರಕಾರ ಮಾಡಿದರು ಅಲ್ಲ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ. — ನಿಮ್ಮ ಇಚ್ಛೆ ಪ್ರಕಾರವೇ ತನಿಖೆ ಆಗಬೇಕು ಅಲ್ಲವೇ ?

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ. — ನಾನು ಹೇಳುತ್ತಿದ್ದೇನೆ, ಇದು ದೀರ್ಘವಾದಂಥ ಅಧಿವೇಶನ.

ಶ್ರೀ ಎನ್. ಎಂ. ಅದ್ಯಂತಾಯ. — ಮಾನ್ಯ ಅಧ್ಯಕ್ಷರೇ,

ಅಧ್ಯಕ್ಷರು.— ನೀವು ಹೇಳುವುದು ರೆಕಾರ್ಡಿಗೆ ಹೋಗುವುದಿಲ್ಲ,

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ,— ನಾವು ಮಾತನಾಡುವಾಗ ನೀವು ಆತಂಕ ಉಂಟು ಮಾಡಿದರೆ ನೀವು ಮಾತನಾಡುವಾಗ ಏನು ಮಾಡಬೇಕೋ ನಮಗೆ ಗೊತ್ತು.

(ಸಭೆಯಲ್ಲಿ ಅತೀವ ಗೊಂದಲ)

ಅಧ್ಯಕ್ಷರು.— ಈಗ ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ನಾನು ಅನುವ ತಿ ಕೋರಿಕೆ ಸಲುವಾಗಿ ಹೇಳಲಿ ಎಂದು ಒಂಭತ್ತು ಮಂದಿಗೆ ಅವಕಾಶ ಕೊಟ್ಟಿದ್ದೇನೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಮಾನ್ಯ ಮುಖ್ಯಮಂತ್ರಿಗಳು ಹೀಗೆ ಬೆದರಿಕೆ ಹಾಕ ತಕ್ಕಂಥಾದ್ದು ಒಳ್ಳೆಯದೇನು ?

ಶ್ರೀ ಎಸ್. ಆರ್. ಬೊಮ್ಮಾಯಿ.— ನನ್ನದು ಪಾಯಿಂಟ್ ಆಫ್ ಆರ್ಡರ್ ಇದೆ.

ಶ್ರೀ ಎಸ್, ಬಂಗಾರಪ್ಪ.— ಹೊರಗಡೆ ಹೋಗುವಾಗ ನಮ್ಮ ವಿರುದ್ಧ ಪ್ರಚೋದನೆ ಮಾಡು ವುದು, ಇಲ್ಲಿ ಬೆದರಿಕೆ ಹಾಕುವುದು.

ಶ್ರೀ ಎಸ್. ಎಂ. ಅಡ್ಯಂತಾಯ.— ಅಧ್ಯಕ್ಷರೇ ...

ಅಧ್ಯಕ್ಷರು.— ನೀವು ಏನು ಮಾತನಾಡಿದರೂ ರೆಕಾರ್ಡಿಗೆ ಹೋಗುವುದಿಲ್ಲ.

(ಗೊಂದಲ)

ಶ್ರೀ ಪಿ. ಜಿ. ಆರ್. ಸಿಂಧ್ಯ.— ನಮಗೂ ಅವರಿಗೂ ತಂದಿಡಲಿಕ್ಕೆ ನೀವು ಪ್ರಯತ್ನ ಪಡುವುದು ಗೊತ್ತಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.— ಬೇಡ ಸಿಂಧ್ಯ ಅವರೇ, ನಿಮ್ಮ ನಿಮ್ಮಲ್ಲೇ ತಪ್ಪಾಗಿದೆ. ಬೇತಾಳ ನಿಮ್ಮಲ್ಲೇ ಇದೆ.

ಶ್ರೀ ಎಂ. ರಘುಪತಿ.— ನಿಮ್ಮ ಒಬ್ಬರಲ್ಲೂ ಹೊಂದಾಣಿಕೆ ಇಲ್ಲ. ನೀವು ಕಚ್ಚಾಡಿದಷ್ಟು ಯಾರೂ ಕಚ್ಚಾಡುವುದಕ್ಕೆ ಸಾಧ್ಯವಿಲ್ಲ.

ಒಬ್ಬ ಮಾನ್ಯ ಸದಸ್ಯರು.— ನೀವು ಪಾಟೀಲರೂ ಹೇಗಿದ್ದೀರಿ ?

ಶ್ರೀ ಎಸ್. ಬಂಗಾರಪ್ಪ.— ನಾವು ಪರಸ್ಪರ ಥ್ಯಾಂಕ್ಸ್ ಕೊಡುತ್ತೇವೆ. ನೀವು ಕೊಡಿ ನೋಡೋಣ.

ಶ್ರೀ ಎಂ. ರಘುಪತಿ.— ಗೊತ್ತು. ಅದು ಈ ಸದನಕ್ಕೇ ಗೊತ್ತು.

(ಗೊಂದಲ)

ಅಧ್ಯಕ್ಷರು.— ಈಗ ನೀವುಗಳು ಏನು ಮಾತನಾಡಿದರೂ ರೆಕಾರ್ಡ್‌ಗೆ ಹೋಗುವುದಿಲ್ಲ. ದಯ ವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ರಘುಪತಿಯವರೇ ತಾವು ಕುಳಿತುಕೊಳ್ಳಿ. ಮಾನ್ಯ ಮುಖ್ಯ ಮಂತ್ರಿಗಳು ಈಗ ಮಾತನಾಡಲಿ.

ಶ್ರೀ ರಾಮಕೃಷ್ಣ ಹೆಗಡೆ.— ನಾನು ಈ ಮಾತನ್ನು ಯಾವುದೇ ಆಧಾರ ಇಲ್ಲದೇ ಹೇಳುತ್ತಿಲ್ಲ. ಸಿ.ಬಿ.ಐ. ಸಂಸ್ಥೆ ಇವತ್ತು ಬೃಹದಾಕಾರವಾಗಿ ಬೆಳೆದಿದೆ. ಗುಲ್ಬರ್ಗಾದ ಕೊಲೆ ವಿಚಾರದಲ್ಲಿ, ಆಗಲೂ ಕೂಡ ನಾನಾಗಿಯೇ ಸಿ.ಬಿ.ಐ.ಗೆ ಹಾಕಿದೆ. ನೇರವಾದ ಆಪಾದನೆ, ಕೊಲೆಗೆ ಸಂಬಂಧಪಟ್ಟಂತೆ, ಅಲ್ಲಿಯ ಎಸ್.ಪಿ. ಮೇಲೆ ಇತ್ತು, ಸರ್ಕಲ್ ಇನ್‌ಸ್ಪೆಕ್ಟರ್ ಮೇಲೆ ಇತ್ತು ಮತ್ತು ಮೂವರು ಕಾನ್‌ಸ್ಟೇಬಲ್ ಮೇಲೆ ಇತ್ತು. ಪೋಲೀಸ್ ಖಾತೆಯಲ್ಲಿರತಕ್ಕಂಥ ಹಿರಿಯ ಅಧಿಕಾರಿಗಳ ಮೇಲೆ ಆಪಾದನೆ ಇದ್ದುದ ರಿಂದ ನಾನು, ಸಾರ್ವಜನಿಕರಲ್ಲಿ ಈ ವಿಚಾರದಲ್ಲಿ ಸಂದೇಹ ನಿವಾರಣೆ ಮಾಡುವುದಕ್ಕೋಸ್ಕರ ಸಿ.ಬಿ.ಐ.

ನವರು ತನಿಖೆ ಮಾಡಲಿ ಎಂದು ಹೇಳಿದೆ. ಇದು ಎರಡನೆಯ ಉದಾಹರಣೆ. ಇಲ್ಲಿ ನೇರವಾದ ಆಪಾದನೆ ಗೃಹ ಮಂತ್ರಿಗಳ ಮೇಲಾಗಲೀ, ಅಥವಾ ಹಿರಿಯ ಪೋಲೀಸರ ಮೇಲಾಗಲೀ ಯಾರೂ ಮಾಡಿರಲಿಲ್ಲ. ಆದರೂ ಕೂಡ ನಾನು ಒಪ್ಪಿಕೊಂಡೆ. ಏಕೆಂದರೆ ಒಬ್ಬ ವಕೀಲರ ಮರಣ ಆಯಿತು, ವಕೀಲರ ಸಂಘದವರು ಬಂದು ಪ್ರಸ್ತಾಪ ಮಾಡಿದರು. ಆಮೇಲೆ ಬೇರೆ ಬೇರೆ ಕಡೆಯಿಂದ ಇದರ ಬಗ್ಗೆ ನಿಷ್ಪಕ್ಷಪಾತವಾಗಿ ತನಿಖೆ ಮಾಡಿಸಿ ಎಂದು ಹೇಳಿ ನನಗೆ ಟೆಲಿಗ್ರಾಂ ಬಂದವು. ನಾನು ಒಂದೇ ಒಂದು ಉದ್ದೇಶದಿಂದ ಇದರಲ್ಲಿ ಇರತಕ್ಕಂಥ ಪೊಲಿಟಿಕಲ್ ಇಂಪ್ಲಿಕೇಷನ್ ನಾನು ಆ ದಿವಸ ಯೋಚನೆ ಮಾಡಲಿಲ್ಲ. ಇವತ್ತು ಅನಿಸುತ್ತದೆ ಯೋಚನೆ ಮಾಡಬೇಕಾಗಿತ್ತು ಎಂದು. ನನಗೆ ಗೊತ್ತಿಲ್ಲ, ಮಾನ್ಯ ಮೊಯ್ಲಿಯವರಿಗೂ ಗೊತ್ತಾಗುತ್ತದೆ ನಾನು ಯೋಚನೇ ಮಾಡದೇ ನಾನಾಗಿಯೇ ಒಪ್ಪಿಕೊಂಡೆ ಎಂದು ಈ ಸಂದರ್ಭದಲ್ಲಿ, ಈ ಮಾತನ್ನು ಹೇಳಿದರೆ ತಪ್ಪಾಗುವುದಿಲ್ಲ. ಒಬ್ಬ ಹಿರಿಯ ಅಧಿಕಾರಿ, ಕೇಂದ್ರಸರ್ಕಾರದ ಹೋಮ್ ಮಿನಿಸ್ಟ್ರಿಯಲ್ಲಿರತಕ್ಕ ಒಬ್ಬ ಹಿರಿಯ ಅಧಿಕಾರಿ ಹೇಳಿದರು, ನೀವು ಈ ರೀತಿ ಮಾಡಿದ್ದುದು ಸರಿಯಾಗಲಿಲ್ಲ, ಇದರಲ್ಲಿ ರಾಜಕೀಯ ಬರುತ್ತದೆ ಎನ್ನತಕ್ಕಂಥ ಮಾತನ್ನು ಹೇಳಿದರು. ಅದಕ್ಕಾಗಿಯೇ ನನಗೆ ಸಂದೇಹ ಬಂದಿದ್ದುದು......

(ಗೊಂದಲ)

ಅಧ್ಯಕ್ಷರು.— ಈಗ ಏನು ಮಾತನಾಡಿದರೂ ರೆಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.— ಮಾನ್ಯ ಜಾಲಪ್ಪನವರ ಮೇಲೆ ನೀವು ಆಂಟಿಸಿ ಪೇಟರಿ ಬೇಲನ್ನು ತರುವುದಕ್ಕೆ ಏಕೆ ಹೋದಿರಿ, ಇಷ್ಟೊಂದು ದೊಡ್ಡದಾಗಿ ಪ್ರಚಾರ, ಅಪ ಪ್ರಚಾರ ನಡೆದಾಗ ಇವತ್ತು ಅರೆಸ್ಟ್ ಮಾಡುತ್ತಾರೆ, ನಾಳೆ ಅರೆಸ್ಟ್ ಮಾಡುತ್ತಾರೆ. ಮತ್ತು ನಮ್ಮ ಅಧಿವೇಶನ ಪ್ರಾರಂಭವಾಗುವ ಹಿಂದಿನ ದಿನ ಅರೆಸ್ಟ್ ಮಾಡುತ್ತಾರೆ. ಮಾನ್ಯ ನಾರಾಯಣ್ ಅವರನ್ನೂ 2ನೇ ತಾರೀಖು ಮಾಡಿದರಲ್ಲ ಹಾಗೇಇವರನ್ನೂ ಮಾಡುತ್ತಾರೆಂದು ತಿಳಿದಿದ್ದರು. ಆದರೆ ಇದು ಯಾವುದೂ ಕಾಕತಾಳೀಯ ನ್ಯಾಯವಲ್ಲ. ಪ್ರತಿಯೊಂದು ಘಟನೆಗೂ ಒಂದೊಂದು ಅರ್ಥ ಇದೆ.ಆಗ ಅವರು ಆಂಟಿಸಿಪೇಟರಿ ಬೇಲ್ ತೆಗೆದು ಕೊಂಡರೆ ಏನಾದರೂ ಅಪರಾಧವಾಗುತ್ತದೆಯೇ ? ಇದು ಏನಾದರೂ ಗೈರು ಕಾನೂನೇ ? ಆಂಟಿಸಿ ಪೇಟರಿ ಬೇಲ್ ಕೇಳಿದ ತಕ್ಷಣ ಅವರು ಕ್ರಿಮಿನಲ್ ಆಗುತ್ತಾರೆಯೇ ? ಸೆಷನ್ ಜಡ್ಜರ ಜಡ್ಜಮೆಂಟ್ ವಿಚಾರದಲ್ಲಿ, ನಿರ್ಣಯದ ವಿಚಾರದಲ್ಲಿ ಮಾನ್ಯ ಮೊಯಿಲಿಯವರು ಒಂದು ಮಾತು ಹೇಳಿದರು. ಆ ಬಗ್ಗೆ ನಾನುಹೇಳುವುದಕ್ಕೆ ಹೋಗುವುದಿಲ್ಲ. ಮೊದಲನೆಯದು ಜಡ್ಜಮೆಂಟ್,ಎರಡನೆಯದು ಆ ಜಡ್ಜಮೆಂಟ್ ವಿರುದ್ಧ.......

(ಗೊಂದಲ)

ಅಧ್ಯಕ್ಷರು.— ಬೇರೆಯವರು ಏನು ಮಾತನಾಡಿದರೂ ರೆಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಆ ಜಡ್ಜಮೆಂಟ್ ಯಾರೇ ನೋಡಲಿ, ಜಡ್ಜಮೆಂಟ್ ಸ್ವಲ್ಪ ವಿಚಿತ್ರ ಕಾಣುತ್ತದೆ......

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ, ಪಾಯಿಂಟ್ ಆಫ್ ಆರ್ಡರ್ ಈಗ ಸೆಷನ್ ಜಡ್ಜ್ ಬಗ್ಗೆ, ಅವರ ತೀರ್ಪು ವಿಚಿತ್ರವಾಗಿದೆ ಎಂದು ನಮ್ಮ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಅವರ ತೀರ್ಪಿನ ಮೇಲೆ ಏನು ಪ್ರಶ್ನೆ ಹಾಕಿದ್ದಾರೆ, ಇದು ಕಾಮೆಂಟ್ ಮಾಡುವಂಥದ್ದು ಸಾಧುವಾದುದಲ್ಲ ಹಾಗೂ ಸದನದ ರೆಕಾರ್ಡ್‌ನಲ್ಲಿ ಹೋಗುವಂಥಾದ್ದೂ ಅಲ್ಲ. ಆದ್ದರಿಂದ ಇದನ್ನು ಎಕ್ಸ್‌ಪಂಜ್ ಮಾಡಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ.— ಅಧ್ಯಕ್ಷರೇ, ಪಾಯಿಂಟ್ ಆಫ್ ಆರ್ಡರ್ ಮಾನ್ಯ ಮುಖ್ಯ ಮಂತ್ರಿಗಳು ಜಜ್‌ಮೆಂಟ್ ವಿಚಿತ್ರವಾಗಿದೆ ಎಂದು ಹೇಳುತ್ತಿದ್ದಾರೆ. ಅದನ್ನು ತೆಗೆಸಬೇಕು.

MR SPEAKER.— I will look into it.

(ಗೊಂದಲ)

ಶ್ರೀ ಎಸ್.ಆರ್. ಬೊಮ್ಮಾಯಿ.— ಇಲ್ಲಿಗಲ್ ಎಂದು ಹೇಳುತ್ತೇವೆ. ಸ್ಟ್ರೇಂಜ್ ಎಂದು ಹೇಳುತ್ತೇವೆ.

SRI M. VEERAPPA MOILY.— This House cannot cast aspersions on the judgment. That will reflect on the case.

SRI S. R. BOMMAI.— We call it as perverse judgment. As a lawyer you must know. You can call it perverse judgment. We have got every right to say,

ಶ್ರೀ ಎಂ. ವೀರಪ್ಪ ಮೊಯಿಲಿ.— ಇದು ಸದನದಲ್ಲಿ ಹೇಳತಕ್ಕ ಮಾತಲ್ಲ ಲಾಯರ್ ಆಗಿ ಹೇಳಬಹುದಾದ ಮಾತು. ಇದು ಸದನದಲ್ಲಿ ಹೇಳತಕ್ಕದ್ದಲ್ಲ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಇಲ್ಲಿಯುವರೆಗೆ ಸಿ.ಬಿ.ಐ. ನವರನ್ನು ಬೈದಿದ್ದು ಆಯಿತು. ಈಗ ಜಡ್ಜಸ್‌ನ್ನೂ ಬೈದಾಯಿತು.

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.— ಇದು ವಿಚಿತ್ರವಾಗಿದೆ ಏತಕ್ಕೆ ಎಂದರೆ...

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.— ಹೈಕೋರ್ಟ್ ಜಡ್ಜ್‌ಮೆಂಟ್ ಮೇಲೆ ಹೌಸ್ ಮುಖಾಂತರ ಒತ್ತಡ ತಂದು, ನ್ಯಾಯಾಗಂದ ಮೇಲೆ ಒತ್ತಡ ತಂದು, ತಮಗೆ ಅನುಕೂಲ ಆಗಿರತಕ್ಕ ರೀತಿ ಜಡ್ಜ್‌ಮೆಂಟ್ ಬರತಕ್ಕ ಒತ್ತಡ ತಂದು, ರಾಜಕೀಯವಾಗಿ ನ್ಯಾಯಾಂಗದ ಮೇಲೆ ಒತ್ತಡ ತಂದು, ಈ ದೇಶದಲ್ಲಿ ಒಂದು ಇತಿಹಾಸವನ್ನು ಸ್ಥಾಪನೆ ಮಾಡುವುದಕ್ಕೆ ಇವರು ಹೊರಟಿದ್ದಾರೆ. ಇವರು ದೇಶದ ಮಹಾನ್ ನಾಯಕರು.

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.— ಮಾನ್ಯ ಅಧ್ಯಕ್ಷರೇ, ಶನಿವಾರದ ದಿವಸ ಸಾಯಂಕಾಲ ಐದೂವರೆ ಗಂಟೆಗೆ ಆ ಜಡ್ಜ್‌ಮೆಂಟ್ ಬರಬೇಕು, ಇದು ವಿಚಿತ್ರ ಅಲ್ಲವೇ? ಸಾಯಂಕಾಲ ಐದೂವರೆ ಗಂಟೆಗೇ ಬರಬೇಕು ಜಡ್ಜ್‌ಮೆಂಟ್, ಇದಕ್ಕಿಂತ ಹೆಚ್ಚು ಹೇಳುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.— ಅಧ್ಯಕ್ಷರೇ. ತಾವೂ ಹಿರಿಯ ವಕೀಲರಿದ್ದೀರಿ ಸನ್ಮಾನ್ಯ ಮುಖ್ಯಮಂತ್ರಿಗಳು ನ್ಯಾಯಾಂಗದ ವಧೆಯನ್ನು ಮಾಡುತ್ತಿದ್ದಾರೆ.... It is a shame on the part of the Chief Minister.

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.— ನ್ಯಾಯಾಂಗದ ವಧೆ ಎಂದು ಯಾವ ಬಾಯಿಂದ ಹೇಳುತ್ತಿದ್ದೀರಿ.

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.— ಯಾವುದು ನ್ಯಾಯಾಂಗದ ವಧೆ? ಇದು ನ್ಯಾಯಾಂಗದ ವಧೆಯೇ? ನ್ಯಾಯಾಂಗದ ಬಗ್ಗೆ ಮಾತನಾಡಲಿಕ್ಕೆ ನಿಮಗೆ ಯಾರು ಅಧಿಕಾರ ಕೊಟ್ಟರು, ಪತ್ರಿಕಾ ಸ್ವಾತಂತ್ರ್ಯದ ಬಗ್ಗೆ ಮಾತನಾಡುವುದಕ್ಕೆ ನಿಮಗೆ ಯಾರು ಅಧಿಕಾರ ಕೊಟ್ಟರು?

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ — ಪತ್ರಿಕಾ ಸ್ವಾತಂತ್ರ್ಯದ ಬಗ್ಗೆ ನೀವು ಮಾತನಾಡಬೇಕಾಗಿಲ್ಲ, ಅದರ ಬಗ್ಗೆ ನೀವು ಹೇಳಬೇಕಾಗಿಲ್ಲ

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಅಧ್ಯಕ್ಷರೇ, ಪಾಯಿಂಟ್ ಆಫ್ ಆರ್ಡರ್...

ಶ್ರೀ ಕೆ.ಹೆಚ್. ಶ್ರೀನಿವಾಸ್.— ಅಧ್ಯಕ್ಷರೇ, ಪಾಯಿಂಟ್ ಆಫ್ ಆರ್ಡರ್...

(ಗೊಂದಲ)

ಶ್ರೀ ಕೆ.ಹೆಚ್. ಶ್ರೀನಿವಾಸ್.— ಮಾನ್ಯ ಅಧ್ಯಕ್ಷರೇ ತಾವು ನಮಗೆಲ್ಲಾ ಹೇಳಿದಿರಿ, ಬ್ರೀಫ್ ಆಗಿ ಇದರ ಮೇಂಟೇನಬಿಲಿಟಿ ಮೇಲೆ ಮಾತನಾಡಿ ಎಂದು ಹೇಳಿದಿರಿ. ನಾವೂ ಕೂಡಾ ಸಾಧ್ಯವಾದಷ್ಟು ಅದಕ್ಕೆ ಸ್ಟಿಕ್ ಆನ್ ಆದೆವು. ನಾವು ಮಾತನಾಡುವಾಗ ಅಲ್ಲಲ್ಲೇ ಓವರ್ ಸ್ಟೆಪ್ ಮಾಡಿರಬಹುದು. ಸಂದರ್ಭಾನುಸಾರ ಓವರ್ ಸ್ಟೆಪ್ ಮಾಡಿರಬಹುದು. ನಾವೂ ಹ್ಯೂಮನ್ ಬೀಇಂಗ್ಸ್ ಆದುದರಿಂದ ಈ ರೀತಿ ಆಗಿರಬಹುದು.

ಶ್ರೀ ಅಬ್ದುಲ್ ನಜೀರ್ ಸಾಬ್.— ಆ ರೀತಿ ಮಾತನಾಡಿದ ನೀವು ಉತ್ತರಕ್ಕೂ ತಯಾರಾಗಿರ ಬೇಕು.

ಶ್ರೀ ಕೆ.ಹೆಚ್. ಶ್ರೀನಿವಾಸ್.— ಆ ರೀತಿ ನಾವು ಮಾತನಾಡಿದ್ದನ್ನು ಕೇಳಿ ನೀವೂ ಸುಮ್ಮನೆ ಕುಳಿತುಕೊಳ್ಳಲಿಲ್ಲ ನಮ್ಮನ್ನು ನಿಯಂತ್ರ ಮಾಡಿದಿರಿ. ಕೆಲವುಕಡೆ ಎಕ್ಸ್‌ಪಂಜ್ ಮಾಡಿಸಿದ್ದೀರಿ. ಇದು ಏನು ಚರ್ಚೆ ಎಂದರೆ, ಇದು ನಮಗೂ ಮುಖ್ಯಮಂತ್ರಿಗಳಿಗೂ ನೇರವಾದ ಡಿಬೇಟ್ ಅಲ್ಲ. ನಾವು ನಿಮಗೆ ಇದರ ಮೇಂಟೇನಬಿಲಿಟಿ ಮೇಲೆ ಸಾಧ್ಯವಾದಷ್ಟು ಹೇಳಿದ್ದೇವೆ. ತಮಗೂ ಗೊತ್ತಿದೆ, ಈ ಮೆರಿಟ್ಸ್ ಮತ್ತು ಮೇಂಟೇನಬಿಲಿಟಿ ಒಳಗೆ ಸ್ವಲ್ಪವಾದರೂ ಓವರ್‌ಲ್ಯಾಪಿಂಗ್ ಇದ್ದೇ ಇರುತ್ತದೆ. ನಾವು ಹ್ಯೂಮನ್ ಬೀಇಂಗ್ಸ್. ಮಾನ್ಯ ಮುಖ್ಯಮಂತ್ರಿಗಳೂ ಇಲ್ಲಿ ಮೇಂಟೇನಬಿಲಿಟಿ ಮೇಲೆ ಮಾತನಾಡುವುದನ್ನು ಬಿಟ್ಟು ಮೆರಿಟ್ಸ್ ಮೇಲೆ ಮಾತನಾಡುತ್ತಿದ್ದಾರೆ. ಅಕ್ಬರ್ ಬೀರಬಲ್ ಕಥೆ ಬಗ್ಗೆ ನಾನು ಮಾನ್ಯ ಜೆ. ಹೆಚ್. ಪಟೇಲರಿಗೆ ನೆನಪು ಮಾಡಿಕೊಡುತ್ತೇನೆ, ಅವರು ಬೇಕಾದರೆ ಅಮೇಲೆ ಅದನ್ನು ಹೇಳಲಿ. ಎಲ್ಲರಲ್ಲಿಯೂ ಓವರ್ ಲ್ಯಾಪಿಂಗ್ ಇದ್ದೇ ಇರುತ್ತದೆ. ಆದುದರಿಂದ ಮುಖ್ಯ ಮಂತ್ರಿಗಳು ಈಗ ಮಾಡುತ್ತಿರುವ ಕೆಲಸ ಏನು ಎಂದರೆ, ಅವರು ಮೆರಿಟ್ಸ್ ಮೇಲೆ ಏನೇನು ಹೇಳಬೇಕು ಅಷ್ಟನ್ನೂ ಹೇಳಿಬಿಟ್ಟು ಮುಗಿಸಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ. ದಯುವಿಟ್ಟು ಅಧ್ಯಕ್ಷರೇ ಅವರಿಗೊಂದು ನಮಗೊಂದು ಮಾಡಬೇಡಿ. ಅವರು ಬರೀ ಮೇಂಟೇನಬಿಲಿಟಿ ಮೇಲೆ ಮಾತನಾಡಲಿ. ಇದರಲ್ಲಿ ಹಲವಾರು ಗಂಭೀರವಾದ ವಿಚಾರಗಳು ಇವೆ. ಅದ್ದರಿಂದ ಇದನ್ನು ಚರ್ಚೆಗೆ ತೆಗೆದುಕೊಳ್ಳಬೇಕು. ನಿಮಗೆ ಏನು ಇದರ ಬಗ್ಗೆ ವಿಚಾರಗಳು ಗೊತ್ತಿದೆ ಅದದ್ದು ನೀವೂ ಹೇಳಿ.

ಅಧ್ಯಕ್ಷರು.— ಮಾನ್ಯ ಶ್ರೀನಿವಾಸ್‌ರವರೇ, ನಿಮಗೊಂದು ಅವರಿಗೊಂದು ಪ್ರಶ್ನೆ ಇಲ್ಲಿ ಇಲ್ಲ. ಏನು ನೀವು ೯ ಜನ ಹೇಳಿದ್ದೀರಿ, ಅದಕ್ಕೆ ಅವರು ಉತ್ತರ ಕೊಡುತ್ತಿದ್ದಾರೆ.

ಶ್ರೀ ಕೆ.ಹೆಚ್. ಶ್ರೀನಿವಾಸ್.— ಇದಕ್ಕೆ ಉತ್ತರ ಹೇಳುವುದಕ್ಕೆ ಅವಕಾಶ ಇಲ್ಲ. ಅವರು ಮೇಂಟೇನಬಿಲಿಟಿ ಮೇಲೆ ಮಾತ್ರ ಹೇಳಬೇಕು.

ಶ್ರೀ ಆರ್. ವೆಂಕಟರಾಮಯ್ಯ.—ಸ್ವಾಮಿ, ನನ್ನದೊಂದು ಕ್ರಿಯಾಲೋಪವಿದೆ. ಅದೇನೆಂದರೆ ಇಲ್ಲಿ ನಾನು ಒಂದು ಮಾತನ್ನು ಹೇಳಬೇಕಾಗಿದೆ. ಆ ವಿಷಯ ಇನ್ನೂ ಇನ್‌ವೆಸ್ಟಿಗೇಶನ್‌ನಲ್ಲಿ ಇದೆ. ಆದ್ದರಿಂದ ಅವರನ್ನು ಇವರು ಡಿಫೆಂಡ್ ಮಾಡುವುದು ಇವರು ಅವರನ್ನು ಡಿಫೆಂಡ್ ಮಾಡುವುದು ಬೇಡ. ಹೆಚ್ಚಿನ ಡಿಟೇಲ್ಸ್‌ಗೆ ಹೋಗುವುದು ಬೇಡ. ಮತ್ತು ಜಡ್ಜಸ್ ಬಗ್ಗೆ ಮಾತನಾಡುವುದು ಸಹ ಇಲ್ಲಿ ಬೇಡ. ಅವನ್ನೆಲ್ಲಾ ತಾವು ಅವಾಯ್ಡ್ ಮಾಡಬೇಕು.

MR. SPEAKER.—Your suggestion is noted.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ವೀರಪ್ಪ ಮೊಯಿಲಿಯವರು ಒಂದು ಮಾತು ಹೇಳಿದರು ಇದನ್ನು ನೀವು ಸಿ.ಬಿ.ಐ.ಗೆ ರೆಫರ್ ಮಾಡದಿದ್ದರೂ ಕೂಡ ಇದರಲ್ಲಿ ಮೂರು ರಾಜ್ಯಗಳು ಸಂಬಂಧ ಹೊಂದಿರುವುದರಿಂದ ಅವರ್‍ಯಾರಾದರೂ ಇದನ್ನು ಸಿ.ಬಿ.ಐ.ಗೆ ರೆಫರ್ ಮಾಡಬಹುದಿತ್ತೆಂದು. ಅದು ಅಲ್ಲ. ಅವರು ಬಹಳ ಒಳ್ಳೆಯ ವಕೀಲರೆಂದು ನಾನು ಕೇಳಿದ್ದೇನೆ. ಆದರೆ ಕೋರ್ಟಿನಲ್ಲಿ ನೋಡಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಅದು ನಿಮ್ಮ ದೌರ್ಭಾಗ್ಯ ಫಸ್ಟ್‌ಕ್ಲಾಸ್ ಆಗಿ ಆರ್ಗ್ಯುಮೆಂಟ್ ಮಾಡುತ್ತಾರೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ವೀರಪ್ಪ ಮೊಯಿಲಿಯವರಿಗೆ ಗೊತ್ತಿದೆ. ಮೇಜರ್ ಪಾರ್ಟ್ ಆಫ್ ದಿ ಕ್ರೈಮ್, ಎಲ್ಲಿ ಮಾಡಿವರೆ ಅಲ್ಲಿ ಅವರ ಜೂರೀಸ್‌ಡಿಕ್ಷನ್‌ಗೆ ಇದು ಬರುತ್ತದೆ, ಟ್ರಯಲ್ ಕೋರ್ಟಿನಲ್ಲಿ ಕೂಡ ಅದು ಬರುತ್ತದೆ. ಆದ್ದರಿಂದ ಕೇರಳ ಸರ್ಕಾರ ಸಿ.ಬಿ.ಐ.ಗೆ ರೆಫರ್ ಮಾಡುವುದಕ್ಕೆ ಬರುವುದಿಲ್ಲ, ತಮಿಳುನಾಡು ಸರ್ಕಾರ ಸಿ.ಬಿ.ಐ.ಗೆ ರೆಫರ್ ಮಾಡುವುದಕ್ಕೆ ಬರುತ್ತಿರಲಿಲ್ಲ. .

SRI M. VEERAPPA MOILY.—Investigation is spread over to three States...

ಶ್ರೀ ರಾಮಕೃಷ್ಣ ಹೆಗಡೆ.—ಮೂರು ರಾಜ್ಯಗಳಿಗೆ ಸಂಬಂಧಪಟ್ಟಿದ್ದರೂ ಕೂಡ ಅದನ್ನು ಪೋಲೀಸ್ ಆರ್ಗನೈಜೇಶನ್ ಕೋ-ಆರ್ಡಿನೇಟ್ ಮಾಡಿ ಅನೇಕ ಸಂದರ್ಭಗಳಲ್ಲಿ ಕೆಲಸ ಮಾಡಿದೆ. ಸಿ.ಬಿ.ಐ ಯನ್ನು ಕರೆದುಕೊಂಡು ಬರಬೇಕೆಂದೇನೂ ಇಲ್ಲ ಅವರು ಮತ್ತೊಂದು ವಿಚಾರವನ್ನು ಹೇಳಿದರು. ಇಡೀ ದೇಶದ ಕಣ್ಣು ಕರ್ನಾಟಕ ರಾಜ್ಯದ ಮೇಲಿದೆ ಎಂದು. ಅದೂ ಒಂದು ಕೊಲೆ ಮೇಲೆ. ಆದರೆ ಪಂಜಾಬ್‌ನಲ್ಲಿ ನಿನ್ನೆ ೩೧ ಜನರ ಕೊಲೆಯಾಗಿದೆಯಲ್ಲ ಅದು...

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದು ಸಬ್ಜೆಕ್ಟ್‌ಗೆ ಸಂಬಂಧಪಟ್ಟ ವಿಷಯವೇ ?...

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಸುಮ್ಮನೆ ಕೇಳಿ.

(ಗೊಂದಲ)

ಅಧ್ಯಕ್ಷರು.—ನೀವು ಹೇಳಿದ್ದನ್ನು ನೋಡಿದರೆ ೫೦ ಪರ್ಸೆಂಟ್ ಸೆನ್ಸಾರ್ ಮಾಡಬೇಕಾಗುತ್ತದೆ. ದಯವಿಟ್ಟು ಕೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಬಿಹಾರ್, ಪಂಜಾಬ್, ಇದೆಲ್ಲಾ ಈ ವಿಷಯಕ್ಕೆ ಸಂಬಂಧಪಟ್ಟಿದ್ದೇನೆ ?

ಶ್ರೀ ಎಂ. ವೀರಪ್ಪ ಮೊಯಿಲಿ.—ಪಂಜಾಬ್‌ನಲ್ಲಿ ಆಫೀಸರ್ಸ್, ಪೋಲೀಸ್ ಆಫೀಸರ್ಸ್ ಸೇರಿ ಕೊಲೆ ಮಾಡಿದ್ದಾರೆಯೇ ? ಅಲ್ಲಿ ಟೆರರಿಸ್ಟ್‌ಗಳು ಮಾಡುತ್ತಿದ್ದಾರೆ.

ಶ್ರೀ ರಾಮಕೃಷ್ಣ ಹೆಗಡೆ.—ಟೆರರಿಸ್ಟ್‌ಗಳು ಕೊಲೆ ಮಾಡಿದರೆ ಅದು ಕೊಲೆ ಅಲ್ಲವೇ ?

SRI M. VEERAPPA MOILY.—Our Hon'ble Chief Minister enjoying a joke at the cost of Punjab.

ಶ್ರೀ ರಾಮಕೃಷ್ಣ ಹೆಗಡೆ.—ಹೆಣ್ಣು ಮಕ್ಕಳ ಕೊಲೆಯಾದರೆ ಟೆರರಿಸ್ಟ್‌ಗಳು ಕೊಲೆ ಮಾಡಿದರೆ ಅದು ಇವರ ದೃಷ್ಟಿಯಲ್ಲಿ ಕೊಲೆಯಲ್ಲ. ಮಾನ್ಯ ವೀರಪ್ಪ ಮೊಯಿಲಿಯವರು ಹೇಳಿದರು ಇವತ್ತು ಇಡೀ ದೇಶದ ಕಣ್ಣು ಕರ್ನಾಟಕ, ರಾಜ್ಯದ ಮೇಲಿದೆ ಎಂದು. ಅದು ಅಲ್ಲ ಕಣ್ಣು ಯಾರದ್ದು ಇದೆ ಎಂದರೆ ಕೇಂದ್ರ ಸರ್ಕಾರದ ಕಣ್ಣು ಕರ್ನಾಟಕದ ಮೇಲೆ ಇದೆ ಆದರೆ ನಿಮಗೆ ಒಂದು ಮಾತು ಹೇಳುತ್ತೇನೆ. ದಯಮಾಡಿ ತಾವು ದುರಾಸೆ ಮಾಡಬೇಡಿ. ನಿಮ್ಮ ಪಕ್ಷದಲ್ಲಿ ಏನೋ ಒಂದು ಒಳಜಗಳ ಇದೆ ಎಂದು ಅದನ್ನು ದುರುಪಯೋಗ ಮಾಡಿಕೊಳ್ಳುವುದಕ್ಕೆ ಹೊರಟಿರುವುದು ಸರಿಯಲ್ಲ. ಇದರಿಂದ ನಿಮ್ಮ ಬೇಳೆ ಏನೂ ಬೇಯುವುದಿಲ್ಲ.

(ಗೊಂದಲ)

ಶ್ರೀ ಬಿ. ಬಸವಲಿಂಗಪ್ಪ.—ಅಧ್ಯಕ್ಷರೇ ನನ್ನದೊಂದು ಕ್ರಿಯಾಲೋಪ.

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ಕೊನೆಗೆ ನಾನು ಹೇಳುವುದು ಇಷ್ಟೇ, ಯಾವುದೇ ರೀತಿಯಲ್ಲಿ

(ಗೊಂದಲ)

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ ಈಗ ನಮ್ಮ ಮುಂದೆ ಇರತಕ್ಕಂಥಾದ್ದು ನಿಲುವಳಿ ಸೂಚನೆಗೆ ಅನುಮತಿ ಕೋರಿಕೆ ಬಗ್ಗೆ. ಆ ಬಗ್ಗೆ ಈ ತರ್ಕ ವ್ಯಾಪ್ತಿಗೆ ಮಿತಿಯಾಗಿದೆ. ನಮಗೆ ಚರ್ಚೆ ಮಾಡಲು ಪರವಾನಿಗೆ ಕೊಡಬೇಕೆಂದು ಎಲ್ಲಾ ಮಾನ್ಯ ಸದಸ್ಯರು ಹೇಳಿದ್ದಾರೆ. ಅದಕ್ಕೆ ಸೀಮಿತವಾಗಿ ಉತ್ತರ ಕೊಡಬೇಕು. ನಿಲುವಳಿ ಸೂಚನೆಗೆ ಅನುಮತಿ ಕೊಡಬಹುದು ಅಥವಾ ಇಲ್ಲವೆಂದು ಹೇಳಬೇಕು. ಅದು ಬಿಟ್ಟು ಪಂಜಾಬಿನಲ್ಲಿ ಕೊಲೆಗಳಾದವು. ಜಡ್ಜಸ್ ನೀಡಿರತಕ್ಕಂಥ ಜಡ್ಜಮೆಂಟ್ ಬಗ್ಗೆ ಕಾಮೆಂಟ್ಸ್ ಮಾಡುವುದು ಮಾನ್ಯ ಬೊಮ್ಮಾಯಿಯವರು ಮಾತನಾಡುತ್ತಾ ಹೇಳಿದರು ನಾವು ಅದನ್ನು ಪರವರ್ಸ್ ಎಂದೂ ಸಹ ಹೇಳಬಾರದೆಂದು ನಾನು ಹೇಳುತ್ತೇನೆ. ದಯಮಾಡಿ ಇಂಥ ವಿಷಯಗಳ ಬಗ್ಗೆ ಕರ್ನಾಟಕ ರಾಜ್ಯದ ಬಗ್ಗೆ ಬಿಟ್ಟು ಕೇಂದ್ರ ಸರ್ಕಾರದ ಬಗ್ಗೆ, ಕೇಂದ್ರ ಸರ್ಕಾರದ ಸಿ. ಬಿ. ಐ. ಬಗ್ಗೆ, ಪಂಜಾಬ್ ಬಗ್ಗೆ ಹೇಳುವುದು ಬೇಡ, ತಾವು ಮುಖ್ಯಮಂತ್ರಿಗಳಾಗಿದ್ದೀರಿ, ಕರ್ನಾಟಕ ರಾಜ್ಯಕ್ಕೆ ಸೀಮಿತವಾಗಿರತಕ್ಕ ವಿಷಯಗಳ ಬಗ್ಗೆ ತಾವು ಮಾತನಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ನನ್ನ ಪ್ರಿಯ ಮಿತ್ರರಾದ ಶ್ರೀಮಾನ್ ಬಸವಲಿಂಗಪ್ಪನವರು ಈ ಬುದ್ಧಿವಾದವನ್ನು ಎರಡು ಗಂಟೆ ಮೊದಲೇ ಹೇಳಬೇಕಾಗಿತ್ತು. ಮೊದಲೇ ಹೇಳಿದ್ದಿದ್ದರೆ ಈ ನಿಲುವಳಿ ಸೂಚನೆಗೆ ಸಂಬಂಧಪಟ್ಟಂಥ ಮಾತುಕಥೆಗಳು ಸರಿಯಾದ ದಾರಿಯಲ್ಲಿ ಹೋಗುತ್ತಿದ್ದವು. ಆದರೆ. ಅವರು ಎರಡು ಗಂಟೆ ತಡವಾಗಿ ಬುದ್ಧಿ ಮಾತು ಹೇಳುತ್ತಿದ್ದಾರೆ. ಆದ್ದರಿಂದ, ಆ ಮಾತು ಸಧ್ಯಕ್ಕೆ ಅಷ್ಟು ಸರಿಯಲ್ಲ.

ಶ್ರೀ ಕೆ, ಹೆಚ್. ಶ್ರೀನಿವಾಸ್.—ನೀವು ಹೇಳುವುದು ಸರಿಯಾಗಿದೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ಈ ನಿಲುವಳಿ ಸೂಚನೆಗೆ ಯಾವುದೇ ರೀತಿಯ ಬಲವಾದ ಕಾರಣವಾಗಲೀ, ಬಲವಾದ ಬೇಸಿಸ್ ಆಗಲೀ, ಗ್ರೌಂಡ್ ಆಗಲೀ ಇಲ್ಲ, ಈ ನಿಲುವಳಿ ಸೂಚನೆಯನ್ನು ತಳ್ಳಿ ಹಾಕುವುದಕ್ಕೆ ಯೋಗ್ಯವಾದುದು. ಮಾನ್ಯ ಅಧ್ಯಕ್ಷರೇ, ನಮ್ಮ ಗೃಹ ಸಚಿವರು ಈ ಕೇಸಿಗೆ ಯಾವುದೇ ರೀತಿಯ ಸಂಬಂಧ, ಪ್ರತ್ಯಕ್ಷವಾಗಿಯಾದರೂ ಅಥವಾ ಅಪ್ರತ್ಯಕ್ಷವಾಗಿಯಾದರೂ ಹೊಂದಿಲ್ಲದೇ ಇದ್ದರೂ ರಾಜೀನಾಮೆ ಕೊಟ್ಟು ದೊಡ್ಡ ಸತ್ಸಂಪ್ರದಾಯವನ್ನು ಮಾಡಿದ್ದಾರೆ. ಈ ರೀತಿ ಸಂಪ್ರದಾಯವನ್ನು ಯಾರೂ ಮಾಡಿರಲಿಲ್ಲ. ಈ ಹಿಂದೆ ಕೇರಳದ ಗೃಹ ಮಂತ್ರಿಯಾಗಿದ್ದಂಥವರು ** ಮಾಡಿಲ್ಲ ರಾಜಾಸ್ಥಾನದ ಮುಖ್ಯ ಮಂತ್ರಿಯೂ ಮಾಡಿಲ್ಲ. ಕೊಲೆ ಆರೋಪ ಬಂದಾಗ ಅವರು ರಾಜೀನಾಮೆ ಕೊಡಲಿಲ್ಲ. ಆದರೆ ಇವರು ರಾಜೀನಾಮೆ ಕೊಟ್ಟು ತೋರಿಸಿದ್ದಾರೆ. ಇದು ಒಂದು ದೊಡ್ಡ ಆದರ್ಶವಾಗಿದೆ.

SRI M. VEERAPPA MOILY.—You are misleading the House. ** ಅವರ ಕೊಲೆ ಆಪಾದನೆ ಬಂದಿಲ್ಲ. ಕೊಲೆ ಬಗ್ಗೆ ಸರಿಯಾದ ಮಾಹಿತಿ ಕೊಟ್ಟಿಲ್ಲವೆಂದು ಮಾತ್ರ ಹೇಳಲಾಗಿತ್ತು. It is not correct. You should not mislead the House.

(ಈ ಸಂದರ್ಭದಲ್ಲಿ ವಿರೋಧ ಪಕ್ಷದ ಮಾನ್ಯ ಸದಸ್ಯರುಗಳು ಹಾಗೂ ಆಡಳಿತ ಪಕ್ಷದ ಮಾನ್ಯ ಸದಸ್ಯರುಗಳು ಎದ್ದು ನಿಂತು ಗಲಾಟೆ ಮಾಡುತ್ತಿದ್ದರು)

ಶ್ರೀ ರಾಮಕೃಷ್ಣ ಹೆಗಡೆ.—ಅವರು ಬೇಕಾದರೆ ಗಲಾಟೆ ಮಾಡಿಕೊಳ್ಳಲಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅವರ ಮೇಲೆ ಕೊಲೆ ಆಪಾದನೆ ಇಲ್ಲ. ಅವರ ಹೆಸರನ್ನು ಏಕೆ ತರುತ್ತೀರಿ ?

(ಸದನದಲ್ಲಿ ಮಾನ್ಯ ಸದಸ್ಯರುಗಳು ಬಹಳ ಗಲಾಟೆ ಮಾಡುತ್ತಿದ್ದರು)

ಅಧ್ಯಕ್ಷರು.—ಮಾನ್ಯ ಅಡ್ಯಂತಾಯ ಅವರೇ ತಾವೂ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ,

** ಅಧ್ಯಕ್ಷರ ಆದೇಶದ ಮೇರೆಗೆ ತೆಗೆದುಹಾಕಲಾಗಿದೆ.

ಶ್ರೀ ವೀರಪ್ಪ ಮೊಯಿಲಿ —ಆ ರಾಜ್ಯದಲ್ಲಿ ಒಂದು ಮರಣ ಆಯಿತೆಂದು ನೈತಿಕ ಹೊಣೆ ತೆಗೆದು ಕೊಂಡು ರಾಜೀನಾಮೆ ಕೊಟ್ಟರು. ಆ ನೈತಿಕತೆ ನಿಮಗೆ ಎಲ್ಲಿಂದ ಬರುತ್ತದೆ ?

ಶ್ರೀ ರಾಮಕೃಷ್ಣ ಹೆಗಡೆ.— ಈ ಸರ್ಕಾರ ಇವತ್ತೇ ಬೇಕಾದರೂ ಸಿ ಬಿ.ಐ. ಗೆ ಕೊಟ್ಟಂಥ ಪರ್ಮಿಷನ್‌ನನ್ನು ವಾಪಸ್ ತೆಗೆದುಕೊಳ್ಳಬಹುದು. ಆದರೆ, ನಾವು ಆ ರೀತಿ ಮಾಡುವುದಿಲ್ಲ.

(ಗೊಂದಲ)

ಅಧ್ಯಕ್ಷರು.—ಸ್ವಲ್ಪ ಕೇಳಿ.

ಶ್ರೀ ರಾಮಕೃಷ್ಣ ಹೆಗಡೆ.—ನಾನು ಇಷ್ಟು ಮಾತ್ರ ಹೇಳುತ್ತೇನೆ.

(ಗೊಂದಲ)

ಅಧ್ಯಕ್ಷರು.—ಯಾರು ಏನು ಹೇಳಿದರೂ ರೆಕಾರ್ಡ್‌ಗೆ ಹೋಗುವುದಿಲ್ಲ. ಮಾನ್ಯ ಮುಖ್ಯ ಮಂತ್ರಿಯವರು ಮಾತನಾಡುವುದಕ್ಕೆ ಎದ್ದಿದ್ದಾರೆ. ಈಗ ಯಾರು ಏನು ಮಾತನಾಡಿದರೂ ರೆಕಾರ್ಡ್‌ಗೆ ಹೋಗುವುದಿಲ್ಲ. ಯಾರಿಗೂ ಅವಕಾಶ ಇಲ್ಲ. ಮಾನ್ಯ ಮುಖ್ಯ ಮಂತ್ರಿಯವರು ಮುಗಿಸಲಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಮಾನ್ಯ ಮುಖ್ಯ ಮಂತ್ರಿಯವರು ಪ್ರತಿಯೊಂದಕ್ಕೂ ಥ್ರೆಟನ್ ಮಾಡುತ್ತಿದ್ದಾರೆ.

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಪ್ರತಿಯೊಂದಕ್ಕೂ ಥ್ರೆಟನ್ ಮಾಡಿದರೆ ಹೇಗೆ ?

ಅಧ್ಯಕ್ಷರು. — ತಾವು ಕುಳಿತುಕೊಳ್ಳಿ.

೩–೦೦ ಪಿ. ಎಂ.

ಶ್ರೀ ರಾಮಕೃಷ್ಣ ಹೆಗಡೆ.—ನಿಮ್ಮನ್ನು ಹೆದರಿಸಬಲ್ಲವರು ಯಾರು ಇದ್ದಾರೆ ಹೇಳಿ, ಕೊನೆಗೆ ನಾನು ಹೇಳುವುದು ಇಷ್ಟೇ.

ಶ್ರೀ ವೀರಪ್ಪ ಮೊಯಿಲಿ — ಅವರು ಭಾಷಣ ಮುಕ್ತಾಯ ಮಾಡುವ ಮೊದಲಿಗೆ, ಶ್ರೀ ಕರುಣಾಕರನ್ ಅವರ ಮೇಲೆ ಕೊಲೆ ಆಪಾದನೆ ಇತ್ತೆಂದು ಹೇಳಿದ್ದನ್ನು ದಯವಿಟ್ಟು ಎಕ್ಸ್‌ಪಂಜ್ ಮಾಡಬೇಕು, ಅಲ್ಲದೆ ಅವರು ಈ ಸದನದಲ್ಲಿ ಇಲ್ಲ.

MR SPEAKER.—I will look into it.

ಶ್ರೀ ರಾಮಕೃಷ್ಣ ಹೆಗಡೆ.—ಕೊನೆಯಲ್ಲಿ ನಾನು ಹೇಳುವುದು ಇಷ್ಟೆ. ಅವರ ಮಹಾ ನಾಯಕಿ ಶ್ರೀಮತಿ ಇಂದಿರಾಗಾಂಧಿಯವರನ್ನು ಉಳಿಸಲಿಕ್ಕೆ ಶ್ರೀ ಜಾಲಪ್ಪನವರೂ ಪ್ರಯತ್ನಿಸಿದ್ದರು.

(ಗೊಂದಲ)

ಅಂಥವರನ್ನು ಅಪಮಾನ ಮಾಡದೆ ಇರಿ. ಇಂಥಾದ್ದರಿಂದ ನಿಮ್ಮ ಮನಸ್ಸಿಗೇ ತೃಪ್ತಿ ಯಾಗ ಬೇಕು.

SRI S. BANGARAPPA.— You confine to yourselves.

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ಅವರಿಂದ ಅರ್ಹತಾ ಸರ್ಟಿಫಿಕೇಟ್ ಬೇಡ. He is the last person from whom I expect certificate.

ಶ್ರೀ ಎಂ. ವೀರಪ್ಪ ಮೊಯಿಲಿ.—ಮೊದಲು ನಿಮ್ಮನ್ನು ಜಾಲಪ್ಪನವರು ಮುಖ್ಯ ಮಂತ್ರಿ ಮಾಡಿದರಲ್ಲ, ಅದರ ಋಣ ತೀರಿಸಿ, ಅದು ಸೆಟ್ಲ್ ಆಗಲಿ.

ಶ್ರೀ ರಾಮಕೃಷ್ಣ ಹೆಗಡೆ.—ನಿಮ್ಮ ಸಂಸ್ಕೃತಿ ಗೊತ್ತಾಯಿತಲ್ಲ.

(ಗೊಂದಲ)

ಅಧ್ಯಕ್ಷರು.—ನೀವು ಹೇಳಿದ್ದೂ ಅವರು ಹೇಳಿದ್ದೂ ಆಯಿತು. ಹೆಚ್ಚು ಬೇಡ.

ಶ್ರೀಮತಿ ಕೆ. ಎಸ್ ನಾಗರತ್ನಮ್ಮ.—ಅಡ್‌ಜರ್ನ್‌ಮೆಂಟ್ ಮೋಷನ್‌ಗಾಗಿ ನಾವು ಕೇಳಿವೆವು, ಅವರು ಉತ್ತರ ಹೇಳಿದರು. ಈಗ ಮತ್ತೆ ನಾವು ಕೇಳಬೇಕಲ್ಲ.

ಅಧ್ಯಕ್ಷರು. —ಹಾಗಾದರೆ ಮತ್ತೆ ಅನುಮತಿ ಬೇಕೇ ?

(ಗೊಂದಲ)

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಒಬ್ಬೊಬ್ಬರೇ ಮಾತನಾಡಲಿ, ಅದೇನು ?

ಶ್ರೀ ಜೆ. ಹೆಚ್. ಪಟೇಲ್.—ಇನ್ನೇನು ಹೇಳುತ್ತೀರಿ, ಅಡ್ಮಿಸಿಬಿಲಿಟಿ ಇಲ್ಲ ಎಂದು ಉತ್ತರ ಕೊಡಲಾಗಿದೆಯಲ್ಲ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ಹಾಗಾದರೆ ನಾವು ಕುಳಿತುಕೊಂಡು ಬಿಡಬೇಕೇ ?

ಅಧ್ಯಕ್ಷರು.—ಅನುಮತಿ ಕೊಡಬೇಕೋ ಬೇಡವೋ ನಾನು ಹೇಳುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್.—ಅಡ್ಮಿಸಿಬಲ್ ಎಂದು ನೀವು ಹೇಳಿದರೆ ಅವರು ಮಾತನಾಡುವ ಅವಶ್ಯಕತೆ ಉಂಟಾಗುತ್ತದೆ. ನಾನ್ ಅಡ್ಮಿಸಿಬಲ್ ಎಂದರೆ ಅದು ಉಂಟಾಗುವುದಿಲ್ಲ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅವರು ಮಾತನಾಡುವಾಗ ನಡೆಯುದೇ ಇದ್ದುದನ್ನೆಲ್ಲಾ ಹೇಳಿಬಿಟ್ಟರು. ಅದನ್ನೆಲ್ಲಾ ನಾನು ಬರೆದುಕೊಂಡಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರು ಮಾತನಾಡಿದ್ದರ ಬಗ್ಗೆಯಲ್ಲ, ನಾವು ತಮ್ಮ ಮನ ಹೊಲಿಸಲಿಕ್ಕೆ ಮಾತನಾಡಬೇಕಾಗುತ್ತದಲ್ಲ, ಆದ್ದರಿಂದ ನಮಗೆ ಅವಕಾಶ ಬೇಕು.

ಅಧ್ಯಕ್ಷರು.—ಹೇಳಿ. ಸರ್ಕಾರ ಕೂಡ ಇದಕ್ಕೆ ಒಪ್ಪುತ್ತಿಲ್ಲವಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅಡ್ಮಿಸಿಬಿಲಿಟಿ ಬಗ್ಗೆ ಉತ್ತರ ಹೇಳಿದರೆ ಮತ್ತೆ ಉತ್ತರ ಹೇಳುವ ಹಾಗಿಲ್ಲ.

ಅಧ್ಯಕ್ಷರು.— ನೋಡಿ ನಾಗರತ್ನಮ್ಮನವರೇ, ಇದು ಆರ್ಗ್ಯುಮೆಂಟ್, ರೀ ಆರ್ಗ್ಯುಮೆಂಟ್ ಇವನ್ನೆಲ್ಲ ಅಡ್‌ಜರ್ನ್‌ಮೆಂಟ್ ಮೋಷನ್ ಮೇಲೆ ಮಾಡುವ ಹಾಗಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವಶ್ಯಕತೆ ಬಿದ್ದರೆ ಕೇಳಬೇಕಾಗುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ನಾವು ಆರ್ಗ್ಯು ಮಾಡಿದ್ದೇವೆ. ಮಾನ್ಯ ಮುಖ್ಯ ಮಂತ್ರಿಗಳು ಕೋರ್ಟಿಗೆ ಆರ್ಗ್ಯು ಮಾಡುವ ರೀತಿಯಲ್ಲಿ ಮಾಡಿದ್ದಾರೆ. ನಮ್ಮ ಮೇಲಲ್ಲ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಮಗಿಂತ ಅವರೇ ಜಾಸ್ತಿ ಹೇಳಿಬಿಟ್ಟಿದ್ದಾರೆ. ಮುಖ್ಯ ಮಂತ್ರಿಯವರು ಒಂದು ವಿಷಯ ಹೇಳಿದರು.

ಅಧ್ಯಕ್ಷರು.—ಅವರು ಏನು ಹೇಳಿದರು, ಇವರು ಏನು ಹೇಳಿದರು ಬೇಕಿಲ್ಲ.

(ಗೊಂದಲ)

ಶ್ರೀಮತಿ ಕೆ ಎಸ್. ನಾಗರತ್ನಮ್ಮ.—ಮಾನ್ಯ ಮುಖ್ಯ ಮಂತ್ರಿಗಳು ಕೆಲವು ವಿಚಾರಗಳನ್ನು ಹೇಳಿದರು ಅದಕ್ಕೆ ತಾವು ಅವಕಾಶ ಕೊಡಬಾರದಾಗಿತ್ತು.

MR. SPEAKER.—I will not allow you to speak.

(ಗೊಂದಲ)

ಅಧ್ಯಕ್ಷರು.—ನಥಿಂಗ್ ವಿಲ್ ಗೋ ಆನ್ ರೆಕಾರ್ಡ್.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ಹೋಗಿ ಹೋಗಿ ಕೇಳಿಕೊಂಡು ಬರುವ ಅಭ್ಯಾಸ ಇದೆಯೋ ?

(ಗೊಂದಲ)

ಅಧ್ಯಕ್ಷರು.—ನೀವು ಕುಳಿತುಕೊಳ್ಳಿ ನಾನು ರೂಲಿಂಗ್ ಕೊಡುತ್ತೇನೆ.

(ಗೊಂದಲ)

ಅಧ್ಯಕ್ಷರು.—ಕ್ಲಾರಿಫಿಕೇಷನ್ ಬೇಕಾಗಿಲ್ಲ. ಆ ಕಡೆಯುವರಿಗೂ ಅವಕಾಶ ಕೊಡುವುದಿಲ್ಲ ಈ ಕಡೆಯುವರಿಗೂ ಅವಕಾಶ ಕೊಡುವುದಿಲ್ಲ. The matter has been closed.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸಿಬಿಐಗೆ ಕೋ-ಆಪರೇಟ್ ಮಾಡುತ್ತೇವೆ ಸತ್ಯ ಹೊರಕ್ಕೆ ಬರಲೀ ಎಂದು ಅವರು ಹೇಳಲಿಲ್ಲ.

(ಗೊಂದಲ)

ಅಧ್ಯಕ್ಷರು.—ತಮ್ಮ ಭಾಷಣವಾಗಿದೆ. ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಎರಡೂ ಕಡೆಯ ವಾದವನ್ನು ನಾನು ಕೇಳಿದ್ದೇನೆ. ಇದಕ್ಕೆ ಅನುಮತಿಯನ್ನು ನಿರಾಕರಣೆ ಮಾಡುತ್ತೇನೆ. ದಿ ಮ್ಯಾಟರ್ ಹ್ಯಾಸ್ ಬೀನ್ ಕ್ಲೋಸ್ಡ್. Nothing will be recorded.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಮುಖ್ಯ ಮಂತ್ರಿಗಳ ನೈತಿಕ ಹೊಣೆ ಇದೆ. ಅವರು ರಾಜೀನಾಮೆ ಕೊಡಬೇಕು. ಅವರ ಕಂಟ್ರೋಲ್‌ನಲ್ಲಿ ಸರಕಾರ ಇದೆ. Chief Minister must resign. He controls the Police Department.

(ಗೊಂದಲ)

ಅಧ್ಯಕ್ಷರು.—ನಥಿಂಗ್ ವಿಲ್ ಗೋ ಆನ್ ರೆಕಾರ್ಡ್. ನಾನು ರೂಲಿಂಗ್ ಕೊಟ್ಟಾಗಿದೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮತ್ತೆ ಅದನ್ನು ಪರಿಶೀಲಿಸಿ ಚರ್ಚೆಗೆ ಅವಕಾಶ ಮಾಡಿ ಕೊಟ್ಟರೆ ಒಳ್ಳೆಯದು.

(ಗೊಂದಲ)

ಅಧ್ಯಕ್ಷರು ಒಂದು ಗಂಟೆ ೪೦ ನಿಮಿಷ ಮಾತನಾಡಿದ್ದೀರಿ. ಆ ವಿಷಯಂ ಇಲ್ಲಿಗೆ ಮುಕ್ತಾಯ ವಾಯಿತು. ಈಗ ಗಮನ ಸೆಳೆಯುವ ಸೂಚನೆ. ತಾವು ಏನು ವಾತನಾಡಿದರೂ ಅದು ರೆಕಾರ್ಡಿಗೆ ಹೋಗುವುದಿಲ್ಲ. ರೂಲಿಂಗ್ ಕೊಟ್ಟಾಗಿದೆ. I have heard both the sides and have given my ruling according to my conscience.

(ಗೊಂದಲ)

ಅಧ್ಯಕ್ಷರು.— ನಥಿಂಗ್ ವಿಲ್ ಗೋ ಆನ್ ರೆಕಾರ್ಡ್.

(ಎಲ್ಲ ಕಾಂಗ್ರೆಸ್ ಸದಸ್ಯರು ಸರಕಾರದ ವಿರುದ್ಧ ಘೋಷಣೆಯನ್ನು ಕೂಗಿದರು.)

ಅಧ್ಯಕ್ಷರು.— ನಾನು ರೂಲಿಂಗ್ ಕೊಟ್ಟಾಗಿದೆ. ಚೆಂಬರ್‌ಗೆ ಬನ್ನಿ ಅಲ್ಲಿ ಬೇಕಾದರೆ ನೋಡೋಣ. ಈಗ ಆಗುವುದಿಲ್ಲ ಈ ರೀತಿ ಮಾಡುವುದು ಸರಿಯಲ್ಲ. ಮಾನ್ಯ ಅಷ್ಟಂತಾಯುರವರೇ ಇದು ಪದ್ಧತಿ ಅಲ್ಲ.

(ಗೊಂದಲ)

(Congress (I) members were shouting slogans)

ಅಧ್ಯಕ್ಷರು — ಅದು ಆಗುವುದಿಲ್ಲ.

(ಗೊಂದಲ)

Nothing will go on record.

ಶ್ರೀ ಎಂ. ವೀರಪ್ಪಮೊಯಿಲಿ.— ನಮಗೆ ಅವಕಾಶ ಕೊಡಿ.

ಅಧ್ಯಕ್ಷರು.— ಅವಕಾಶ ಕೊಡುವ ಪ್ರಶ್ನೆಯೇ ಇಲ್ಲ. ನಾನು ಆಗಲೇ ರೂಲಿಂಗ್ ಕೊಟ್ಟು ಬಿಟ್ಟಿದ್ದೇನೆ.

Nothing will go on record.

(ಗೊಂದಲ)

ಅಸೆಂಬ್ಲಿಯಲ್ಲಿ ಧಿಕ್ಕಾರ ಹಾಕುವುದಕ್ಕೆ ಬರುವುದಿಲ್ಲ. ಬೇಕಾದಷ್ಟು ವಿಷಯಗಳನ್ನು ಚರ್ಚೆ ಮಾಡಲಿಕ್ಕೆ ಇದೆ. ಈಗ ಅವಕಾಶ ಕೊಡುವ ಪ್ರಶ್ನೆಯೇ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಏತಕ್ಕೆ ಕೊಡಬಾರದು ?

ಅಧ್ಯಕ್ಷರು.— ಅದು ಆಗುವುದಿಲ್ಲ.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ.— ಪುನಃ ಪರಿಶೀಲಿಸಿ.

ಅಧ್ಯಕ್ಷರು.— ಆಗುವುದಿಲ್ಲ. ಪುನಃ ಪರಿಶೀಲನೆ ಮಾಡಬೇಕಾದರೆ ಛೇಂಬರ್‌ಗೆ ಬನ್ನಿ.

(ಗೊಂದಲ)

Nothing will go on record.

ದಯವಿಟ್ಟು ಕುಳಿತುಕೊಳ್ಳಿ ಆಗುವುದಿಲ್ಲ. ಇದು ಪದ್ಧತಿಯಲ್ಲ. ನೀವು ನಾಲ್ಕು ಕೋಟಿ ಜನರ ಪ್ರತಿನಿಧಿಯಾಗಿ ಈ ರೀತಿ ಮಾತನಾಡಬಾರದು ?

ಶ್ರೀ ಎಂ. ವೀರಪ್ಪಮೊಯಿಲಿ.— ತಮ್ಮ ಮೇಲೆ ನಮಗೆ ಗೌರವ ಇದೆ.

ಅಧ್ಯಕ್ಷರು.— ಹೋಂ ಡಿಪಾರ್ಟ್‌ಮೆಂಟ್ ಮೇಲೆ ಮಾತನಾಡಿ, ನಾನಂತೂ ರೂಲಿಂಗನ್ನು ಕೊಟ್ಟುಬಿಟ್ಟಿದ್ದೇನೆ ಅವರು ಏನು ಹೇಳುತ್ತಾರೋ ನೋಡೋಣ, ತಾವು ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು.— ಸರ್ಕಾರದವರು ಏನು ಹೇಳುತ್ತಾರೆ ಕೇಳಿ. ಈ ತರಹ ಮಾತನಾಡುವುದು ಸರಿಯಲ್ಲ. ಈ ತರಹ ಕೂಗಾಡುವುದು ಸರಿಯಲ್ಲ. This is too much.

(ಗೊಂದಲ)

ಅಧ್ಯಕ್ಷರು.— ಇದು ಸದಸ್ಯರಿಗೆ ಗೌರವ ತರತಕ್ಕಂಥದ್ದು ಅಲ್ಲ. I have already given my ruling. You are all Senior Memers. I will have to go according to rules.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ....ಚರ್ಚೆಗಾದರೂ ಅವಕಾಶ ಮಾಡಿಕೊಡಿ,

ಅಧ್ಯಕ್ಷರು.— ನಾನು ರೂಲಿಂಗ್ ಕೊಟ್ಟುಬಿಟ್ಟಿದ್ದೇನೆ. ಸರ್ಕಾರದವರು ಏನು ಹೇಳುತ್ತಾರೆ ಸ್ವಲ್ಪ ಕೇಳಿ. ಮಾನ್ಯ ಅಡ್ಯಂತಾಯರವರೇ ನೀವು ಈ ತರಹ ಕೂಗಾಟ ಮಾಡಿದರೆ I have to take action.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಸರ್ಕಾರಕ್ಕೆ ತಾವು ಹೇಳಬೇಕು.

ಅಧ್ಯಕ್ಷರು.— ಅವರು ಏನು ಹೇಳುತ್ತಾರೋ ಕೇಳೋಣ. ಇದು ಸರಿಯಲ್ಲ.

(ಗೊಂದಲ)

ಅಧ್ಯಕ್ಷರು.— ಇದು ತಮಗೆ ಗೌರವ ತರತಕ್ಕಂಥದ್ದು ಅಲ್ಲ.

(ಗೊಂದಲ)

ಅಧ್ಯಕ್ಷರು — ಈ ರೀತಿ ಕೂಗಾಡಿದರೆ ಕಾಂಗ್ರೆಸ್ ಸದಸ್ಯರಿಗೆ ಗೌರವ ಸಿಗುತ್ತದೆಯೇ ? You should not bring bad name to your own party.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ — ಈ ರೀತಿ ಮಾಡಿದರೆ ಗೌರವ ಸಿಗುತ್ತದೆಯೇ ?

ಅಧ್ಯಕ್ಷರು. — ಮಾನ್ಯ ಖರ್ಗೆಯವರೇ ನೀವೇನು ಹೊಸದಾಗಿ ಇಲ್ಲಿಗೆ ಬಂದಿಲ್ಲ. ಒಮ್ಮೆ ರೂಲಿಂಗ್ ಕೊಟ್ಟಮೇಲೆ ಅಸೆಂಬ್ಲಿಯಲ್ಲಿ ರೀ–ಕನ್‌ಸಿಡರ್ ಮಾಡಲಿಕ್ಕೆ ಆಗುವುದಿಲ್ಲ. I have already given the ruling, Ruling is ruling.

(ಗೊಂದಲ)

(ಕಾಂಗ್ರೆಸ್ ಸದಸ್ಯರುಗಳು ಚರ್ಚೆ ಬೇಕು ಬೇಕು ಎಂದು ಕೂಗಾಡುತ್ತಾ ಇದ್ದರು)

ಅಧ್ಯಕ್ಷರು. — ಇದು ಮೈದಾನವೋ ಅಥವಾ ಅಸೆಂಬ್ಲಿಯೋ ? ನಿಮ್ಮ ಬಗ್ಗೆ ಅಭಿಮಾನ ಇದೆ. ಕಾಂಗ್ರೆಸ್ ಒಳ್ಳೆಯ ಪಾರ್ಟಿ. ಜನತಾನೂ ಒಳ್ಳೆಯ ಪಾರ್ಟಿ. ಸರಿಯಾಗಿ ಅರಿತುಕೊಂಡು ಮಾತನಾಡಿ. ಆರ್‍ಗ್ಯುಮೆಂಟ್ ಮಾಡುವುದನ್ನು ಸರಿಯಾಗಿ ಮಾತನಾಡುವುದನ್ನು ತಾವು ಕಲಿಯಬೇಕು. ರೀ–ಕನ್ಸಿಡರ್ ಮಾಡುವುದಕ್ಕೆ ಸ್ಟ್ರಾಂಗ್ ರೀಸನ್ಸ್ ಏನೂ ಇಲ್ಲ, ನಾನು ರೂಲಿಂಗ್ ಕೊಟ್ಟಿದ್ದೇನೆ

ಶ್ರೀ ಎಂ. ವೀರಪ್ಪ ಮೊಯಿಲಿ.— ಕೊಲೆ ಪ್ರಕರಣ ಸಂಪೂರ್ಣವಾಗಿ...

MR. SPEAKER.— It will not be recorded.

(*Interruption*)

MR. SPEAKER.— I have already given my ruling. ಸರ್ಕಾರ ಏನು ಹೇಳುತ್ತದೆ ಕೇಳಿ. ಮಾನ್ಯ ಬೊಮ್ಮಾಯಿಯವರು ಏನು ಹೇಳುತ್ತಾರೆ ಕೇಳಿ ? I have already given my ruling...

SRI M. MALLIKARJUNA KHARGE.— Prejudice view... ಇಟ್ಟುಕೊಂಡು .. ಉತ್ತರ ಕೊಟ್ಟರೆ ಹೇಗೆ ?

ಅಧ್ಯಕ್ಷರು. — ನಾನು ಆಗಲೇ ರೂಲಿಂಗ್ ಕೊಟ್ಟಿದ್ದೇನೆ. Nothing will go on record. I have not been convinced. ಆದ್ದರಿಂದ ನಾನು ಇದಕ್ಕೆ ಅನುಮತಿ ನಿರಾಕರಣೆ ಮಾಡಿದ್ದೇನೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.— ಏತಕ್ಕೆ ಕನ್‌ವಿನ್ಸ್ ಆಗಲಿಲ್ಲ ಎಂಬುದನ್ನು ಹೇಳಿ.

ಅಧ್ಯಕ್ಷರು. — ನಿಮಗೆ ಅವಕಾಶ ಕೊಟ್ಟಿದ್ದೇನೆ, ಅವರಿಗೂ ಕೊಟ್ಟಿದ್ದೇನೆ ಈ ವಿಷಯ ಈಗಾಗಲೇ ಮುಕ್ತಾಯಗೊಂಡಿತು. ಈಗ ಗಮನ ಸೆಳೆಯುವ ಸೂಚನೆ, ಮಾನ್ಯ ಚಂದ್ರಶೇಖರ ರೆಡ್ಡಿಯವರು ಸಚಿವರ ಗಮನವನ್ನು ಸೆಳೆಯಬೇಕು, I have already given ruling... I have gone ahead. ರೂಲಿಂಗ್ ಕೊಟ್ಟು ಆಗಿದೆ, ರೀ ಕನ್ಸಿಡರ್ ಮಾಡಲು ಆಗುವುದಿಲ್ಲ, The matter has been closed. ಶ್ರೀ ಚಂದ್ರಶೇಖರ ರೆಡ್ಡಿಯವರು ಗಮನ ಸೆಳೆಯಲಿ. The matter has been closed. I will not allow anybody to speak. I have already given my ruling.

---

* Not recorded as ordered by the Chair